ದುಡಿಯುವ ಜನರ ಪ್ರಾಣ ಮಿತ್ರ

ಜನಶಕ್ತಿ

ಕನ್ನಡ ವಾರಪತ್ರಿಕೆ

ಅತಿಥಿ ಅಂಕಣ

ಪ್ರೊ. ಬಿ.ಎನ್. ಲಕ್ಷ್ಮೀನಾರಾಯಣ್

ಸಂಪುಟ 10 ಸಂಚಿಕೆ 4 | ಜನವರಿ 24, 2016 | ಪುಟ 16 | ರೂ. 10/-

web: www.janashakthi.co.in e-mail : js_weekly@yahoo.com




ಹೆಲಿಕಾಪ್ಟರ್ ತೋರಿಸಿ ವಾಚ್ ಮಾಯ ಮಾಡುವ





ತುಮಕೂರಿನ ಮೇಕ್ ಇನ್ ಇಂಡಿಯಾ ಜಾದೂ



ಆತ್ಮಹತ್ಯೆಯಲ್ಲ, ಸಾವಿರ ರೈತರ ಕಗ್ಗೊಲೆಗಳು





- ಮಾರ್ಚ್ 11 : ಕಾರ್ಮಿಕರ ವಿಧಾನಸೌಧ ಚಲೋ
- ಮಾಲ್ಡಾ ಹಿಂಸಾಚಾರ : ಕೋಮು ಧೃವೀಕರಣಕ್ಕೆ ಸ್ಪರ್ಧೆ
- ವಿವೇಕಾನಂದರನ್ನು ಮೂರ್ತೀಕರಿಸಬೇಡಿ

ಹೈದರಾಬಾದ್ ವಿವಿಯಲ್ಲಿ ಐವರು ದಲಿತ ಪಿಹೆಚ್‌ಡಿ ವಿದ್ಯಾರ್ಥಿಗಳಿಗೆ ಸಾಮಾಜಿಕ ಬಹಿಷ್ಕಾರ

–ಕಾನೂನುಬಾಹಿರ ಕ್ರಮ ಎಂದು ಡಿಎಸ್‌ಎಂಎಂ ಬಲವಾದ ಖಂಡನೆ

ಹೈದರಾಬಾದ್ ಕೇಂದ್ರೀಯ ವಿಶ್ವವಿದ್ಯಾಲಯದ ಐವರು ದಲಿತ ಪಿಹೆಚ್‌ಡಿ ವಿದ್ಯಾರ್ಥಿಗಳನ್ನು ಅಂಬೇಡ್ಕರ್ ವಿದ್ಯಾರ್ಥಿ ಸಂಘ(ಎಎಸ್‌ಎ) ಮತ್ತು ಎಬಿವಿಪಿ ನಡುವಿನ ವಿವಾದದ ನೆಪವೊಡ್ಡಿ ವಿವಿಯಿಂದ ಹೊರಹಾಕಲಾಗಿದೆ. ಇದನ್ನು ದಲಿತ ಶೋಷಿತ ಮುಕ್ತಿ ಮಂಚ್(ಡಿಎಸ್‌ಎಸ್‌ಎಂಎಂ) ಬಲವಾಗಿ ಖಂಡಿಸಿದೆ.

ಪ್ರಶಾಂತ್, ರೋಹಿತ್, ಶೇಷಯ್ಯ, ವಿಜಯ್ ಮತ್ತು ಸುಂಕಣ್ಣ ಈ ಐದು ಪಿಹೆಚ್‌ಡಿ ವಿದ್ಯಾರ್ಥಿಗಳನ್ನು ವಿವಿಯ ಅಧಿಕಾರಿಗಳು ತಕ್ಷಣವೇ ತಮ್ಮ ಹಾಸ್ಟೆಲ್ ಕೊಠಡಿಗಳನ್ನು ಖಾಲಿ ಮಾಡಬೇಕು ಎಂದು ಆದೇಶಿಸಿದ್ದಾರೆ. ಅವರನ್ನು ಖಾಲಿ ಮಾಡಿಸಿ ಆ ಕೊಠಡಿಗಳಿಗೆ ಬೀಗ ಹಾಕಿದ್ದಾರೆ. ಇದನ್ನು ಬಿಜೆಪಿ ಮುಖಂಡರು ಮತ್ತು ಕೇಂದ್ರದ ಮಂತ್ರಿಗಳ ಒತ್ತಡದಿಂದ ಮಾಡಲಾಗಿದೆ ಎಂದು ತಿಳಿದು ಬಂದಿದೆ.

ಈ ವಿದ್ಯಾರ್ಥಿಗಳೀಗ ವಿವಿಯ ಆವರಣದಲ್ಲಿ ಹಾಕಿರುವ ಟಾರ್ಪಾಲೀನ್ ಸೂರಿನ ಅಡಿಯಲ್ಲಿ ತೀವ್ರ ಚಳಿಯುನ್ನು ಸಹಿಸಿಕೊಂಡು ಇದ್ದಾರೆ. ಅವರೊಂದಿಗೆ ಬೇರೆ ವಿದ್ಯಾರ್ಥಿಗಳು ಮಾತಾಡದ ಹಾಗೆ 'ಸಾಮಾಜಿಕ ಬಹಿಷ್ಕಾರ' ಹಾಕಲಾಗಿದೆ. ಅವರು ಅಲ್ಲಿನ ಚುನಾವಣೆಗಳಲ್ಲಿ ಸ್ಪರ್ಧಿಸಬಾರದು, ಯಾವುದೇ ಸಾರ್ವಜನಿಕ ಚಟುವಟಿಕೆ ನಡೆಸಬಾರದು ಎಂದು ತಾಕೀತು ಮಾಡಲಾಗಿದೆ. ಇದು ಕಾನೂನುಬಾಹಿರ ಮತ್ತು ಸಂವಿಧಾನಬಾಹಿರ ಎಂದು ಡಿಎಸ್‌ಎಂಎಂ ಟೀಕಿಸಿದೆ.

ವಿ.ಶ್ರೀನಿವಾಸ ರಾವ್ ಅವರ ನೇತೃತ್ವದ ಡಿಎಸ್‌ಎಂಎಂ ನಿಂಯೋಗವೊಂದು ಈ ವಿದ್ಯಾರ್ಥಿಗಳನ್ನು ಭೇಟಿ ಮಾಡಿ ಅವರಿಗೆ ತಮ್ಮ ಸೌಹಾರ್ದವನ್ನು ವ್ಯಕ್ತಪಡಿಸಿದೆ. ನಂತರ ಶ್ರೀನಿವಾಸ ರಾವ್ ಮಾಧ್ಯಮಗಳೊಂದಿಗೆ ಮಾತಾಡುತ್ತ ದಲಿತ ವಿದ್ಯಾರ್ಥಿಗಳ ವಿರುದ್ಧದ ಈ ಕ್ರಮಗಳನ್ನು ಕೂಡಲೇ ಹಿಂತೆಗೆದುಕೊಳ್ಳಬೇಕು, ಇಂತಹ ಕಾನೂನುಬಾಹಿರ ಕ್ರಮಕೈಗೊಂಡಿರುವ ಉಪಕುಲಪತಿ ಮತ್ತು ಇತರ ವಿವಿ ಅಧಿಕಾರಗಳ ವಿರುದ್ಧ, ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದ್ದಾರೆ. ಈ ಉಪಕುಲಪತಿ ಕೋಮುವಾದಿ ಮತ್ತು ಮನುವಾದಿಗಳೊಂದಿಗೆ ಬಲವಾದ ಸಂಪರ್ಕ ಇರುವವರು ಎಂದು ಅವರು ಹೇಳಿದ್ದಾರೆ.

ಈ ನಡುವೆ ಇಂತಹ ಹೀನ ಸಾಮಾಜಿಕ ಬಹಿಸ್ಕಾರವನ್ನು ಹಿಂತೆಗೆದುಕೊಳ್ಳುವಂತೆ ಒತ್ತಾಯ ತರಲು ಎಸ್‌ಎಫ್‌ಐ ಸೇರಿದಂತೆ ಎಲ್ಲ ಪ್ರಜಾಪ್ರಭುತ್ವವಾದಿ ವಿದ್ಯಾರ್ಥಿ ಸಂಘಗಳ ಜಂಟಿ ಕ್ರಿಯಾಸಮಿತಿ ಈಗ ರಚನೆಗೊಂಡಿದೆ.

ಮಾಲ್ಡ ಹಿಂಸಾಚಾರ ಜನತೆಯ ಆಕ್ರೋಶವನ್ನು ಚುನಾವಣಾ ಲಾಭಕ್ಕೆ ಬಳಸುವ ಪ್ರಯತ್ನ

–ಬೃಂದಾ ಕಾರಟ್

ಕಳೆದ ವಾರ ಪಶ್ಚಿಮ ಬಂಗಾಲದ ಮಾಲ್ಡ ಜಿಲ್ಲೆಯ ಕಲಿಯಾ ಚಾಕ್‌ದಲ್ಲಿ ನಡೆದ ಹಿಂಸಾಚಾರ ಇಡೀ ದೇಶದ ಗಮನ ಸೆಳೆದಿದೆ. ಅಲ್ಲಿ ಮುಂಬರುವ ವಿಧಾನಸಭಾ ಚುನಾವಣೆಗಳ ಹಿನ್ನೆಲೆಯಲ್ಲಿ ಜನತೆಯ ಆಕ್ರೋಶವನ್ನು ಕೊಮುವಾದಿ ಭಾವನೆಗಳತ್ತ ತಿರುಗಿಸಿ ಚುನಾವಣಾ ಲಾಭ ಗಿಟ್ಟಿಸುವ ಟಿಎಂಸಿ ಮತ್ತು ಆರೆಸ್ಸೆಸ್ ಪ್ರಯತ್ನಗಳ ಪರಿಣಾಮ ಇದು ಎಂದು ಸಿಪಿಐ(ಎಂ) ಹಿರಿಯ ಮುಖಂಡರಾದ ಬೃಂದಾ ಕಾರಟ್ ಅಭಿಪ್ರಾಯ ಪಟ್ಟಿದ್ದಾರೆ.

ಪಶ್ಚಿಮ ಬಂಗಾಲದ ಮುಖ್ಯಮಂತ್ರಿಗಳು ಇದು ಕೋಮುಗಲಭೆಯಲ್ಲ ಎಂದಿದ್ದಾರೆ. ಮತ್ತಿನ್ನೇನು ಎಂದೇನೂ ಹೇಳಿಲ್ಲ. ಈ ಬಗ್ಗೆ ಸಂದರ್ಶಕರೊಬ್ಬರು ಬೃಂದಾ ಕಾರಟ್ ಅವರನ್ನು ಕೇಳಿದಾಗ "ಈ ಘಟನೆಯ ಗುರಿ ಕೋಮುವಾದಿ ಎಂದು ನನಗನ್ನಿಸುತ್ತಿಲ್ಲ. ಆದರೆ ಇದು ಭುಗಿಲೇಳಲು ಇರುವುದು ಕೋಮುವಾದಿ ಕಾರಣಗಳೇ. ಸಂಘ ಪರಿವಾರದ ಒಬ್ಬ ಸದಸ್ಯನ ಉಗ್ರ ಕೋಮುವಾದಿ ಭಾಷಣಕ್ಕೆ ಕೆಲವು ಮುಸ್ಲಿಮ್ ಮೂಲಭೂತವಾದಿಗಳ ಪ್ರತಿಕ್ರಿಯೆಯೂ ಕೋಮುವಾದಿ ಸ್ವರೂಪದ್ದೇ ಆಗಿತ್ತು. ಇದಕ್ಕಿಂತಲೂ ಹೆಚ್ಚಿನ ಆಕ್ಷೇಪಕಾರಿ ಸಂಗತಿಯೆಂದರೆ ತೃಣಮೂಲ ಕಾಂಗ್ರೆಸಿನ ಪಾತ್ರ. ಅದಕ್ಕೆ ಪಶ್ಚಿಮ ಬಂಗಾಲದಲ್ಲಿ ಧ್ರುವೀಕರಣದಿಂದ ಪ್ರಯೋಜನ ಪಡೆಯಬೇಕೆಂದಿದೆ" ಎಂದು ಅವರು ಹೇಳಿದ್ದಾರೆ.

ಟಿಎಂಸಿ ಮತ್ತು ಬಿಜೆಪಿ ಎರಡಕ್ಕೂ ಪಶ್ಚಿಮ ಬಂಗಾಲದ ಹಿತಗಳ ಬಗ್ಗೆ ಏನೇನೂ ಆಸಕ್ತಿಯಿಲ್ಲ. ಟಿಎಂಸಿ ಮುಸ್ಲಿಮ್ ಸಮುದಾಯದ ಸಮಸ್ಯೆಗಳನ್ನು ಕೈಗೆತ್ತಿಕೊಳ್ಳುವಲ್ಲಿ ಸಂಪೂರ್ಣ ವಿಫಲವಾಗಿದೆ, ಬದಲಾಗಿ ಅದು ಮೂಲಭೂತವಾದಿಗಳನ್ನು ತುಷ್ಟೀಕರಿಸಲು ಪ್ರಯತ್ನಿಸುತ್ತಿದೆ. ದುರದೃಷ್ಟವಶಾತ್ ಎರಡೂ ಪಕ್ಷಗಳು ರಾಜಕೀಯ ಲಾಭಕ್ಕಾಗಿ ಧಾರ್ಮಿಕ ಭಾವನೆಗಳನ್ನು ಬಳಸಿಕೊಳ್ಳುತ್ತಿದ್ದಾರೆ ಎಂದು ಬೃಂದಾ ಕಾರಟ್ ಖೇದ ವ್ಯಕ್ತಪಡಿಸಿದ್ದಾರೆ.

ಪಶ್ಚಿಮ ಬಂಗಾಲ ಕೋಮು ಸೌಹಾರ್ದದ ಸಂಕೇತವಾಗಿತ್ತು. ಅದನ್ನು ಟಿಎಂಸಿ ನಾಶ ಪಡಿಸಿದೆ. ಮಾಲ್ದದಲ್ಲಿ ನಡೆದಿರುವುದು ಚುನಾವಣೆಗಳನ್ನು ಗಮನದಲ್ಲಿಟ್ಟುಕೊಂಡೇ. ಟಿಎಂಸಿ ಮತ್ತು ಆರೆಸ್ಸೆಸ್ ಎರಡೂ ಕೋಮುವಾದಿ ಶಕ್ತಿಗಳನ್ನು ಚುನಾವಣಾ ಲಾಭಕ್ಕಾಗಿ ಪ್ರೋತ್ಸಾಹಿಸಲು ದೃಢ ನಿರ್ಧಾರ ಮಾಡಿದಂತಿದೆ ಎಂದು ಬೃಂದಾ ಕಾರಟ್ ಮತ್ತೊಂದು ಪ್ರಶ್ನೆಗೆ ಉತ್ತರಿಸುತ್ತ ಹೇಳಿದರು.

ಬಿಹಾರದ ಚುನಾವಣೆಗಳಲ್ಲಿ ಕೋಮುಜ್ವಾಲೆಯನ್ನು ಹಚ್ಚುವ ಬಿಜೆಪಿ ಪ್ರಯತ್ನವನ್ನು ಅಲ್ಲಿನ ಮತದಾರರು ತಿರಸ್ಕರಿಸಿದ್ದಾರೆ, ಪಶ್ಚಿಮ ಬಂಗಾಲದ ಮತದಾರರೂ ಸಂಕುಚಿತ ರಾಕಜಕಾರಣವನ್ನು ತಿರಸ್ಕರಿಸುವರೇ? ಖಂಡಿತಾ, ಬಂಗಾಲದ ಜನತೆಗೆ ಅದು ನಮ್ಮ ಮನವಿ ಎಂದು ಬೃಂದಾ ಕಾರಟ್ ಹೇಳಿದ್ದಾರೆ.


ಮತ್ತೆ ಲವ್‌ಲೀನ್ ಕೇಸ್: ಯುಡಿಎಫ್ ಸರಕಾರದ ರಾಜಕೀಯ ದುರುದ್ದೇಶದ ಕ್ರಮ–ಸಿಪಿಐ(ಎಂ) ಖಂಡನೆ

ಈ ಹಿಂದೆ ಕೇರಳದ ಕಾಂಗ್ರೆಸ್ ನೇತೃತ್ವದ ಯುಡಿಎಫ್ ಸರಕಾರ ಲವ್‌ಲೀನ್ ಪ್ರಾಜೆಕ್ಟ್‌ನಲ್ಲಿ ಹಗರಣ ನಡೆದಿದೆ ಎಂದು ಅದಕ್ಕೆ ಮೊದಲಿದ್ದ ಎಲ್‌ಡಿಎಫ್ ಸರಕಾರದಲ್ಲಿ ಮಂತ್ರಿಗಳಾಗಿದ್ದ ಪಿಣರಾಯಿ ವಿಜಯನ್ ಮೇಲೆ ಕೇಸು ಹಾಕಿತ್ತು. ಆದರೆ ನವಂಬರ್ 5, 2013ರಂದು ಸಿಬಿಐ ಕೋರ್ಟ್ ಈ ಕೇಸಿನಲ್ಲಿದ್ದ ಆಪಾದನೆಗಳನ್ನು ತಿರಸ್ಕರಿಸಿ ಚಾರ್ಜ್‌ಶೀಟ್ ಹಾಕಲು ಯಾವುದೇ ಆಧಾರಗಳಿಲ್ಲ ಎಂದು ಅದನ್ನು ವಜಾ ಮಾಡಿತ್ತು. ಕುಪಿತಗೊಂಡ ಯುಡಿಎಫ್ ಸರಕಾರ, ಇದರ ವಿರುದ್ಧ ಕೇರಳ ಹೈಕೋರ್ಟಿನಲ್ಲಿ ಪೆಬ್ರುವರಿ 2014ರಲ್ಲಿ ಹಾಕಿದ್ದ ಮರುಪರಿಶೀಲನಾ ಅರ್ಜಿ(ರಿವಿಶನ್ ಪಿಟಿಶನ್) ಯಲ್ಲಿ ತಾನೂ ಭಾಗಿ ಎಂದು ಸೇರಿಕೊಂಡಿತ್ತು. ಆದರೆ ನಂತರ ಏನೂ ನಡೆದಿರಲಿಲ್ಲ.

ಈಗ ಎರಡು ವರ್ಷಗಳ ನಂತರ ಸ್ವತಃ ಹಗರಣಗಳಿಂದ ತೀವ್ರ ಟೀಕೆ ಎದುರಿಸುತ್ತಿರುವ ಯುಡಿಎಫ್ ಸರಕಾರ ಹೈಕೋರ್ಟ್‌ನಲ್ಲಿ ಈ ಬಗ್ಗೆ ಬೇಗನೇ ವಿಚಾರಣೆ ಆರಂಭಿಸಬೇಕು ಎಂದು ಅರ್ಜಿ ಸಲ್ಲಿಸಿದೆ.

ಇದು ಸ್ಪಷ್ಟವಾಗಿ ಮುಂಬರುವ ರಾಜ್ಯ ವಿಧಾನಸಭಾ ಚುನಾವಣೆಗಳ ಹಿನ್ನೆಲೆಯಲ್ಲಿ ನಡೆಸಿರುವ ರಾಜಕೀಯ ದುರುದ್ದೇಶದ ಕ್ರಮ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಖಂಡಿಸಿದೆ.

ನಿರ್ಮಾಣ ಉದ್ದಿಮೆಯಲ್ಲಿ 100ಶೇ. ಎಫ್‌ಡಿಐನಿಂದ ದೇಶೀ ಉದ್ದಿಮೆಯೂ ನಾಶ, ಉದ್ಯೋಗಗಳೂ ನಾಶ–ಕಟ್ಟಡ ಕಾರ್ಮಿಕರ



ಮೋದಿ ಸರಕಾರ ನಿರ್ಮಾಣ ಉದ್ದಿಮೆಯಲ್ಲಿ 100ಶೇ. ಎಫ್‌ಡಿಐ ಗೆ ಅವಕಾಶ ನೀಡಿದ್ದು ಇದು ದೇಶೀ ಕಟ್ಟಡ ನಿರ್ಮಾಣ ಉದ್ದಿಮೆಯನ್ನು ನಾಶ ಪಡಿಸುತ್ತದೆ ಮತ್ತು ಕಟ್ಟಡ ಕಾರ್ಮಿಕರಿಗೆ ಸಿಗುವ ಉದ್ಯೋಗಾವಕಾಶಗಳನ್ನೂ ನಾಶ ಮಾಡುತ್ತದೆ ಎಂದು ಭಾರತ ಕಟ್ಟಡ ನಿರ್ಮಾಣ ಕಾರ್ಮಿಕರ ಒಕ್ಕೂಟ(ಸಿಡಬ್ಲ್ಯುಎಫ್‌ಐ)ದ ಕಾರ್ಯಕಾರಿ ಸಮಿತಿ ಖಂಡಿಸಿದೆ.

ಇದನ್ನು ಪ್ರತಿಭಟಿಸಿ ಫ್ರುಬ್ರುವರಿ 19ರಂದು 'ನಿರ್ಮಾಣ ಉದ್ದಿಮೆಯನ್ನು ಉಳಿಸಿ, ನಿರ್ಮಾಣ ಕಾರ್ಮಿಕರನ್ನು ಉಳಿಸಿ' ಎಂಬ ಘೋಷಣೆಯೊಂದಿಗೆ ಅಖಿಲ ಭಾರತ ಬೇಡಿಕೆ ದಿನಾಚರಣೆ ನಡೆಸಲು ಕರೆ ನೀಡಿದೆ.

ಜನವರಿ 6 ರಿಂದ 8 ರ ವರೆಗೆ ಹರ್ಯಾಣದ ಫತೆಹಾಬಾದ್‌ನಲ್ಲಿ ಸಿಡಬ್ಲ್ಯುಎಫ್‌ಐನ 56ನೇ ರಾಷ್ಟ್ರೀಯ ಕಾರ್ಯಕಾರಿ ಸಮಿತಿಯ ಸಭೆ ನಡೆಯಿತು. ಅದು ಕಟ್ಟಡ ಕಾರ್ಮಿಕರು ಮತ್ತು ದೇಶದ ಎಲ್ಲ ಕಾರ್ಮಿಕರ ಬೇಡಿಕೆಗಳ ಮೇಲೆ ಈ ಕೆಳಗಿನ ಕಾರ್ಯಾಚರಣೆಗಳನ್ನು ನಡೆಸಲು ನಿರ್ಧರಿಸಿತು.

* ಜನವರಿ 19ರಂದು ಕೇಂದ್ರ ಕಾರ್ಮಿಕ ಸಂಘಗಳು ನಡೆಸಿದ ಮೊದಲ ಅಖಿಲ ಭಾರತ ಮುಷ್ಕರದ ಸ್ಮರಣೆಯ ದಿನಾಚರಣೆಯಲ್ಲಿ ಪಾಲ್ಗೊಳ್ಳುವುದ.
* ಫೆಬ್ರುವರಿ 5ರಂದು ಕಳೆದ ಸಪ್ಟಂಬರ್ 2 ರ ದೇಶವ್ಯಾಪಿ ಮುಷ್ಕರದ ಬೇಡಿಕೆಗಳನ್ನು ಈಡೇರಿಸಬೇಕೆಂದೂಗ್ರಹಸಿ ಅಖಿಲ ಭಾರತ ಪ್ರತಿಭಟನಾ ದಇನಾಚರಣೆ
* ಫೆಬ್ರುವರಿ 19 ರಂದು ಮೇಲೆ ಹೇಳಿದಂತೆ 'ನಿರ್ಮಾಣ ಉದ್ದಿಮೆಯನ್ನು ಉಳಿಸಿ, ನಿರ್ಮಾಣ ಕಾರ್ಮಿಕರನ್ನು ಉಳಿಸಿ' ದಿನಾಚರಣೆ.

ಸಿಡಬ್ಲ್ಯುಎಫ್‌ಐ ಕೇಂದ್ರ ಹಣಕಾಸು ಮಂತ್ರಿಗಳಿಗೆ ವಿವಿಧ ಇಲಾಖೆಗಳಲ್ಲಿ ಕಟ್ಟಡ ನಿರ್ಮಾಣ ಕಾಮಗಾರಿಗಳಿಗೆ ಹೆಚ್ಚು ಹಣ ವಿನಿಯೋಗಿಸಬೇಕೆಂದು ಆಗ್ರಹಿಸಿ ಒಂದು ಮನವಿ ಪತ್ರವನ್ನು ಸಲ್ಲಿಸಲು ನಿರ್ಧರಿಸಿದೆ. ಇದೇ ರೀತಿ ಸಂಘಟನೆಯ ರಾಜ್ಯ ಘಟಕಗಳು ತಂತಮ್ಮ ಮುಖ್ಯಮಂತ್ರಿಗಳಿಗೆ ಇಂತಹ ಮನವಿ ಪತ್ರಗಳನ್ನು ಸಲ್ಲಿಸುತ್ತವೆ. ವಿಭಿನ್ನ ರಾಜ್ಯಗಳಲ್ಲಿ ಕಟ್ಟಡ ಕಾರ್ಮಿಕರ ಕಲ್ಯಾಣ ಬೋರ್ಡ್‌ಗಳಲ್ಲಿ ನೊಂದಾಯಿಸಿಕೊಂಡ ಎಲ್ಲ ಫಲಾನುಭವಿಗಳಿಗೂ ಸಮಾನ ಸ್ವರೂಪದ ಸೌಲಭ್ಯಗಳನ್ನು ಒದಗಿಸಬೇಕು ಎಂದೂ ಸಂಘಟನೆ ಕೇಂದ್ರ ಸರಕಾರವನ್ನು ಆಗ್ರಹಿಸಿದೆ.

ಸಿಡಬ್ಲ್ಯುಎಫ್‌ಐ ತೀವ್ರ ಹೋರಾಟಗಳು, ಪ್ರಚಾರಾಂದೋಲನಗಳ ಮೂಲಕ ಕಟ್ಟಡ ಕಾರ್ಮಿಕರ ಆಂದೋಲನವನ್ನು ಬಲಪಡಿಸಲು, ಹೆಚ್ಚೆಚ್ಚು ಮಹಿಳಾ ಮತ್ತು ಯುವ ಕಾರ್ಮಿಕರನ್ನು ಸದಸ್ಯರಾಗಿ ನೋಂದಾಯಿಸಿ ಮುಖಂಡತ್ವಕ್ಕೆ ಬರುವಂತೆ ಪ್ರಯತ್ನ ನಡೆಸಬೇಕು ಎಂದೂ ನಿರ್ಧರಿಸಿರುವುದಾಗಿ ಸಂಘಟನೆಯ ಅಧ್ಯಕ್ಷರಾದ ಆರ್. ಸಿಂಗಾರವಲ್ಲು ಮತ್ತು ಪ್ರಧಾನ ಕಾರ್ಯದರ್ಶಿ ದೆಬಂಜನ್ ಚಕ್ರವರ್ತಿ ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಮುಂಬರುವ ಐದು ರಾಜ್ಯಗಳ, ಅಂದರೆ ಪಶ್ಚಿಮ ಬಂಗಾಲ, ತಮಿಳುನಾಡು, ಕೇರಳ, ಪುದುಚೇರಿ ಮತ್ತು ಅಸ್ಸಾಂ ವಿಧಾನಸಭಾ ಚುನಾವಣೆಗಳಲ್ಲಿ ಎಡ ಮತ್ತು ಪ್ರಜಾಪ್ರಭುತ್ವವಾದಿ ಶಕ್ತಿಗಳಿಗೆ ಬೆಂಬಲ ನೀಡಬೇಕು ಎಂದು ಅವರು ಮನವಿ ಮಾಡಿದೆ.

ಕಟ್ಟಡ ನಿರ್ಮಾಣ ಉದ್ದಿಮೆ ಮತ್ತು ಉದ್ಯೋಗಗಳನ್ನು ಉಳಿಸಬೇಕೆಂಬ ಕರೆಯಲ್ಲದೆ, ಪ್ರಧಾನ ಮಂತ್ರಿ ಆವಾಸ್ ಯೋಜನೆಯಲ್ಲಿ ಕಟ್ಟಡ ಕಾರ್ಮಿಕರಿಗೆ ವಸತಿಗೆ ಸಬ್ಸಿಡಿ ನೀಡಬೇಕು ಎಂದೂ, ಪೆನ್ಶನ್ ಮೊತ್ತವನ್ನು 3000ರೂ.ಗೆ ಏರಿಸಬೇಕು ಮತ್ತು ಮಹಿಳಾ ಕಾರ್ಮಿಕರಿಗೆ ಪೆನ್ಶನ್ ಅರ್ಹತೆಯ ವಯಸ್ಸನ್ನು 55 ವರ್ಷಕ್ಕೆ ಇಳಿಸಬೇಕು ಎಂದೂ ಸಿಡಬ್ಲ್ಯುಎಫ್‌ಐ ಆಗ್ರಹಿಸಿದೆ.

ಜನವರಿ 6ರಂದು ಒಂದು ಬೃಹತ್ ರ್‍ಯಾಲಿಯೊಂದಿಗೆ ಕಾರ್ಯಕಾರಿ ಸಮಿತಿಯ ಸಭೆ ಆರಂಭವಾಗಿತ್ತು.



aAiÀvÉAzÀgÉ EzÀÄ



ಶಾಂತಿಯನ್ನು ಪ್ರೀತಿಸುವವರು ಯುದ್ಧವನ್ನು ಪ್ರೀತಿಸುವವರಷ್ಟೇ ಪರಿಣಾಮಕಾರಿಯಾಗಿ ಸಂಘಟಿಸಲು ಕಲಿಯಬೇಕು.

– ಮಾರ್ಟಿನ್ ಲೂಥರ್ ಕಿಂಗ್

ಅಡಿಗಡಿಗೂ ಎಡವುತ್ತಿರುವ ಸರಕಾರ

ಸಂಪಾದಕೀಯ

ಸರಕಾರಗಳು ಅವುಗಳ ಮುಂದಿರುವ ಸಂಕೀರ್ಣ ಕಾರ್ಯಭಾರಗಳ ದೆಸೆಯಿಂದ ಆಗೊಮ್ಮೆ ಈಗೊಮ್ಮೆ ಎಡವುದು ಸಹಜ. ಆದರೆ ಕರ್ನಾಟಕ ಸರಕಾರ ಹೆಜ್ಜೆ ಹೆಜ್ಜೆಗೂ ಎಡವುತ್ತಿರುವುದು, ತಡವರಸಿಕೊಂಡು ಏಳುವುದು, ಪುನಃ ಎಡವುದರಲ್ಲಿ ರೆಕಾರ್ಡು ಮಾಡಿದೆ ಎಂದು ಹೇಳದೆ ವಿಧಿಯಿಲ್ಲ. ಉಪ ಲೋಕಾಯುಕ್ತ ಅಡಿ ಅವರ ಪದಚ್ಯುತಿ ನಿರ್ಣಯದ ಬಗ್ಗೆ ಇನ್ನೊಂದು ಯೂ-ಟರ್ನ್, ಲೋಕಾಯುಕ್ತ ನೇಮಕ ಪ್ರಕ್ರಿಯೆಯಲ್ಲಿ ನಿರ್ಣಾಯಕ ತ್ವರಿತ ಕ್ರಮದ ಅಭಾವ, ಇಲಾಖೆಗಳ ಅನುದಾನದ ಬಳಕೆಯಲ್ಲಿ ಅತ್ಯಂತ ಕೆಟ್ಟ ಪ್ರಗತಿ, ಸೂಕ್ತ ಕ್ರಮಗಳ ಅಭಾವದಿಂದ ರೈತ ಆತ್ಮಹತ್ಯೆಗಳು ಸಾವಿರ ದಾಟಿರುವುದು – ಈ ವಾರ ಬೆಳಕಿಗೆ ಬಂದ ಸರಕಾರ ಎಡವಿರುವ ಉದಾಹರಣೆಗಳು.

ಉಪ ಲೋಕಾಯುಕ್ತ ನ್ಯಾ. ಅಡಿ ಅವರ ವಿರುದ್ಧ ಪದಚ್ಯುತಿ ನಿರ್ಣಯ ಮಂಡನೆ ಆಗಿದೆ. ಆದರೆ ಅಂಗೀಕೃತವಾಗಿಲ್ಲ ಎಂದು ಹೇಳಿ ಇಡೀ ಪ್ರಕ್ರಿಯೆಯನ್ನು ಹಿಂತೆಗೆದುಕೊಳ್ಳಲು ಕೆಲವೇ ದಿನಗಳ ಹಿಂದೆ ಪ್ರಯತ್ನಿಸಿದ ಸರಕಾರ ಇನ್ನೊಂದು ಯೂ-ಟರ್ನ್ ಮಾಡಿದೆ. ಈಗ ನ್ಯಾ. ಅಡಿ ಅವರ ವಿರುದ್ಧ ಸಾಕ್ಷ್ಯಾಧಾರಗಳು ಇವೆ. ಅದನ್ನು ಸದ್ಯದಲ್ಲೇ ಸ್ಪೀಕರ್ ಮುಖ್ಯ ನ್ಯಾಯಾಧೀಶರಿಗೆ ಮಂಡಿಸಲಿದ್ದಾರೆ ಎಂದು ಕಾಂಗ್ರೆಸ್ ವಲಯಗಳಿಂದ ಕೇಳಿ ಬರುತ್ತಿರುವುದು ಎಂಬುದು ತೀರಾ ಎಡವಟ್ಟಿನ ಬೆಳವಣಿಗೆ. ಸರಕಾರ ಪದಚ್ಯುತಿ ಪ್ರಕ್ರಿಯೆಯನ್ನು ಹಿಂದಕ್ಕೆ ತೆಗೆದುಕೊಳ್ಳಬಯಸುತ್ತದೆಯೇ ಇಲ್ಲವೇ ಮುಂದೆ ಒಯ್ಯಬಯಸುತ್ತದೆಯೇ ಎಂದು ಸ್ಪಷ್ಟ ನಿರ್ಧಾರ ತೆಗೆದುಕೊಳ್ಳಬೇಕು.

ಲೋಕಾಯುಕ್ತ ನೇಮಕದಲ್ಲೂ ಅಷ್ಟೇ. ನಿರ್ಣಾಯಕ ತ್ವರಿತ ಕ್ರಮ ಕೈಗೊಳ್ಳಬೇಕು. ಅಷ್ಟೇ ಅಲ್ಲ, ಕಳಂಕರಹಿತ ವ್ಯಕ್ತಿಯ ನೇಮಕ ಮಾಡಲು ಮುತುವರ್ಜಿ ವಹಿಸಬೇಕು. ಈ ಎರಡೂ ವಿಷಯಗಳ ಬಗೆಗೂ ನಿರ್ಣಯ ತೆಗೆದುಕೊಳ್ಳುವಾಗ ಲೋಕಾಯುಕ್ತ ಸಂಸ್ಥೆಯ, ಸರಕಾರದ ಘನತೆ, ವಿಶ್ವಾಸಾರ್ಹತೆ ಕಡಿಮೆ ಮಾಡುವ ಯಾವುದೇ ಧೋರಣೆ, ಕ್ರಮಗಳಿಗೆ ಮುಂದಾಗಬಾರದು. ಅದನ್ನು ರಾಜಕೀಯಕರಣಗೊಳಿಸಬಾರದು. ಅದು ಬೀದಿ ಜಗಳದ ವಿಷಯವಾಗಬಾರದು. ಪ್ರಮುಖ ವಿರೋಧ ಪಕ್ಷ ಸಹ ಇದಕ್ಕೆ ಬದ್ಧವಾಗಿರಬೇಕು. ಆದರೆ ಆಳುವ ಮತ್ತು ಪ್ರಮುಖ ವಿರೋಧ ಪಕ್ಷಗಳೆರಡೂ ಲೋಕಾಯುಕ್ತ ಸಂಸ್ಥೆಯ ವಿಷಯಗಳಲ್ಲಿ ತರುತ್ತಿರುವ ಕೀಳುಮಟ್ಟದ ರಾಜಕೀಯಕರಣ ಈ ಎರಡೂ ಪಕ್ಷಗಳ ಮತ್ತು ಪಾರ್ಲಿಮೆಂಟರಿ ಪ್ರಜಾಪ್ರಭುತ್ವದ ವಿಶ್ವಾಸಾರ್ಹತೆಯ ದೃಷ್ಟಿಯಿಂದಲೂ ತೀರಾ ಅಪಾಯಕಾರಿ. ಅದನ್ನು ತಕ್ಷಣವೇ ನಿಲ್ಲಿಸಬೇಕು.

ಪರಿಶಿಷ್ಟ ಜಾತಿ ಮತ್ತು ಬುಡಕಟ್ಟು ಅಭಿವೃದ್ಧಿ ಉಪಯೋಜನೆ ಅನುದಾನ ಬಳಕೆಯಾಗಿರುವುದು ಒಂಬತ್ತು ತಿಂಗಳು ಕಳೆದ ನಂತರವೂ ಕೇವಲ ಶೇ. 40 ಎನ್ನುವುದು ತೀರಾ ಆತಂಕಕಾರಿ ಮತ್ತು ಸರಕಾರಕ್ಕೆ ನಾಚಿಕೆಗೇಡಿನ ವಿಷಯ. ಪರಿಶಿಷ್ಟ ಜಾತಿ ಉಪಯೋಜನೆಯ ಅನುದಾನದ ಬಳಕೆ ಕೇವಲ ಶೇ. 39.21. ಪರಿಶಿಷ್ಟ ಬುಡಕಟ್ಟು ಅಭಿವೃದ್ಧಿ ಉಪಯೋಜನೆ ಅನುದಾನ ಬಳಕೆ ಹಂಚಿಕೆಯಾದ ಅನುದಾನದ ಕೇವಲ ಶೇ. 42.59ರಷ್ಟಿದೆ. ಕೆಲವು ಇಲಾಖೆಗಳು ಶೇ 10 ರಷ್ಟು ಸಹ (ಉದಾ: ಮೀನುಗಾರಿಕೆ 17 ರಲ್ಲಿ ಬರಿಯ 2 ಕೋಟಿ ರೂ., ಜಲಸಂಪನ್ಮೂಲ 1709ರಲ್ಲಿ ಬರಿಯ 91 ಕೋಟಿ ರೂ.), ಹೆಚ್ಚಿನ ಇಲಾಖೆಗಳು ಶೆ. 30 ರಷ್ಟು (ಉದಾ: ಲೋಕೋಪಯೋಗಿ 582ರಲ್ಲಿ 77 ಕೋಟಿ ರೂ., ಸಮಾಜ ಕಲ್ಯಾಣ 2935ರಲ್ಲಿ 1140 ಕೋಟಿ ರೂ.) ಸಹ ಖರ್ಚು ಮಾಡಿಲ್ಲ. ಇದು ಪರಿಶಿಷ್ಟ ಜಾತಿ ಮತ್ತು ಬುಡಕಟ್ಟು ಅಭಿವೃದ್ಧಿ ಪರಿಷತ್ ಸಭೆಯಲ್ಲಿ ಮುಖ್ಯ ಮಂತ್ರಿಗಳ ಪ್ರಗತಿ ಪರಿಶಿಲನೆಯ ಸಂದರ್ಭದಲ್ಲಿ ತಿಳಿದು ಬಂದಿದೆ.

ಅನುದಾನದ ಹಂಚಿಕೆಯ ಸುಮಾರು ಶೇ. 54 ರಷ್ಟು ಮಾತ್ರ ಬಿಡುಗಡೆಯಾಗಿದೆ ಎಂಬುದು ಸಹ ತಿಳಿದು ಬಂದಿದೆ. ದಲಿತರ ಮೇಲಿನ ದೌರ್ಜನ್ಯ ಪ್ರಕರಣಗಳಲ್ಲಿ ಶೇ, 7 ರಷ್ಟು ಮಾತ್ರ ಆರೋಪಿಗಳಿಗೆ ಶಿಕ್ಷೆ ಆಗಿರುವ ಬಗ್ಗೆಯೂ ಚರ್ಚೆ ನಡೆಯಿತು ಎಂದು ವರದಿಯಾಗಿದೆ. ಮುಖ್ಯ ಮಂತ್ರಿ ಈ ಬಗ್ಗೆ ಸಮಾಜ ಕಲ್ಯಾಣ ಸಚಿವರು ಮತ್ತು ಸಂಬಂಧಪಟ್ಟ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರು. ಮಾರ್ಚಿನೊಳಗೆ ಇಡಿಯ ಅನುದಾನದ ಬಳಕೆಯಾಗಬೇಕು ಎಂದು ಕಟ್ಟುನಿಟ್ಟಾಗಿ ಹೇಳಿದರು. ಆದರೆ ಇದು ಸರಕಾರ ಅಭಿವೃದ್ಧಿ ಕಾರ್ಯಗಳನ್ನು ನಿರ್ವಹಿಸುತ್ತಿರುವುದರಲ್ಲೂ ಎಡವುತ್ತಿರುವುದಕ್ಕೆ ಹಿಡಿದ ಕನ್ನಡಿ ಎನ್ನಲೇಬೇಕಾಗಿದೆ.



ಕೃಪೆ : ಪಿ. ಮಹಮ್ಮದ್, ವಿಜಯ ಕರ್ನಾಟಕ

ಕಂದಾಯ ಇಲಾಖೆಯ ವರದಿಯ ಪ್ರಕಾರ ಕರ್ನಾಟಕದಲ್ಲಿ 18.6.2015ರಿಂದ ಜನವರಿ 12, 2016 ರ ವರೆಗೆ ಆತ್ಮಹತ್ಯೆ ಮಾಡಿಕೊಂಡ ರೈತರ ಸಂಖ್ಯೆ ಒಂದು ಸಾವಿರ ದಾಟಿದೆ. ಅಂದರೆ ಜೂನ್ ಸುಮಾರಿಗೆ ಆರಂಭವಾದ ರೈತರ ಸರಣಿ ಆತ್ಮಹತ್ಯೆಗಳು ಇನ್ನೂ ನಿಂತಿಲ್ಲ. ಈ ಬಗ್ಗೆ ಸರಕಾರ ಯಾವುದೇ ತುರ್ತಿನ ಕ್ರಮಗಳನ್ನು ಕೈಗೊಂಡಿಲ್ಲ. ಕೈಗೊಂಡ ಕ್ರಮಗಳು ಪರಿಣಾಮಕಾರಿಯಾಗಿಲ್ಲ ಎಂದೇ ಇದರರ್ಥ. ಕಬ್ಬು, ಭತ್ತ, ತೊಗರಿ, ಹತ್ತಿ ಮುಂತಾದ ಬೆಳೆಗಳಿಗೆ ನಿರ್ದಿಷ್ಟವಾದ ಹಾಗೂ ಎಲ್ಲಕ್ಕೂ ಸಾಮಾನ್ಯವಾದ ಯಾವುದೇ ಕ್ರಮವನ್ನು ಕೈಗೊಳ್ಳುವಲ್ಲಿ ಸರಕಾರ ಅಡಿಗಡಿಗೂ ಎಡವುತ್ತಿದೆ. ಈ ಪ್ರಶ್ನೆಗಳನ್ನು ವಿಶ್ಲೇಷಿಸಿ ಇದಕ್ಕೆ ಪರಿಹಾರ ಸೂಚಿಸುವ ಲೇಖನಮಾಲೆ ಈ ವಾರದ ಸಂಚಿಕೆಯಿಂದ ಆರಂಭವಾಗಿದೆ. ಈ ಪ್ರಶ್ನೆಯನ್ನು ಪರಿಶೀಲಿಸುವ ಕರ್ನಾಟಕ ಪ್ರಾಂತ ರೈತ ಸಂಘದ ಪ್ರಧಾನ ಕಾರ್ಯದರ್ಶಿ ಇವು ಆತ್ಮಹತ್ಯೆಗಳಲ್ಲ, ಸರ್ಕಾರೀ ಪ್ರಾಯೋಜಿತ ಕಗ್ಗೊಲೆಗಳು ಎನ್ನುತ್ತಾರೆ. ಈ ಲೇಖನಮಾಲೆಯಲ್ಲಿ ಸೂಚಿಸಲಾದ ಕ್ರಮಗಳನ್ನು ಸರಕಾರ ಕೈಗೊಳ್ಳಬೇಕು. ಇಲ್ಲದಿದ್ದರೆ ಕರ್ನಾಟಕದಲ್ಲಿ ಈ ಸರಕಾರ 'ರೈತರ ಸರಣಿ ಆತ್ಮಹತ್ಯೆಗಳ' ಸರಕಾರ ಎಂದು ಕುಖ್ಯಾತವಾಗುತ್ತದೆ ಎಂದು ಎಚ್ಚರಿಸಬೇಕಾದ ಕಾಲ ಬಂದಿದೆ.

ನಾಳಿನ ಕಾರ್ಯಕ್ರಮಗಳು

ಕಾರ್ಮಿಕ-ರೈತ-ಕೃಷಿಕೂಲಿಕಾರರ ಜಂಟಿ ಪ್ರತಿಭಟನೆ
ಜನವರಿ 19 ಬೆಂಗಳೂರು

ಬಿಎಸ್ಎನ್ಎಲ್ ಗುತ್ತಿಗೆ ಕಾರ್ಮಿಕರ ಪ್ರತಿಭಟನೆ
ಜನವರಿ 20, ಸಂಸತ್ ಸದಸ್ಯರ ಮನೆ ಮುಂದೆ

ಕಾ. ಪ್ರಸನ್ನಕುಮಾರ್ ಗೆ ಶ್ರದ್ಧಾಂಜಲಿ ಸಭೆ
ಜನವರಿ 22, ಸೆಕ್ರೆಟಾರಿಯಟ್ ಕ್ಲಬ್, ಬೆಂಗಳೂರು

ಎಸ್.ಎಫ್.ಐ. ಅಖಿಲ ಭಾರತ ಸಮ್ಮೇಳನ
ಜನವರಿ 22-25, ಸೀಕರ್, ರಾಜಸ್ಥಾನ

ಜನಶಕ್ತಿ 60 ವರ್ಷಗಳ ಹಿಂದೆ

"'ತಾಯಿನಾಡು' ಪತ್ರಿಕೆ ಕೆಂಗಲ್ಲರದಾಯಿತು?"
ಈ ತಲೆ ಬರಹ 1957 ಜನವರಿ 2 ನೇ ವಾರದ ಸಂಚಿಕೆಯಲ್ಲಿ ಗಮನ ಸೆಳೆಯುವಂತಹದ್ದು. ಇದನ್ನು ಗುಪ್ತವಾಗಿ ಕೊಂಡಿದ್ದು ಕೆಂಗಲ್ ಆದರೂ, ಇದು ಬೋರಯ್ಯ ಬಸವಯ್ಯ ವಿಧಾನಸೌಧ ಕಂಟ್ರಾಕ್ಟರ್ ಹೆಸರಲ್ಲಿ ಕೊಳ್ಳಲಾಗಿದೆ. ಇನ್ನು ಮುಂದೆ ಈ ಪತ್ರಿಕೆ ಕಾಂಗ್ರೆಸಿನ ಒಳಗಿನ ಚೆನ್ನಯ್ಯ ಮತ್ತು ವೀರಣ್ಣಗೌಡರ ಗುಂಪುಗಳನ್ನು ಎದುರಿಸುವುದೇ ಆಗಿರುವುದು ಎಂದು ತಿಳಿದು ಬಂದಿದೆ ಎನ್ನುತ್ತದೆ ವರದಿ.

ಇದೇ ಸಂಚಿಕೆಯಲ್ಲಿ
1957ರ ಚುನಾವಣೆಗೆ ಕಮ್ಯುನಿಸ್ಟ್ ಪಕ್ಷದ ಚುನಾವಣಾ ಘೋಷಣೆಯ ಪೂರ್ಣಪಾಠ,
ಕೆ.ಜಿ.ಎಫ್.ನಲ್ಲಿ 11 ಸಾವಿರ ಚಿನ್ನದ ಗಣಿ ಕಾರ್ಮಿಕರ ಮುಷ್ಕರ,
ಚಾ ಎಸ್ಟೇಟು ಮಾಲಿಕರು ಮತ್ತು ಕಾಂಗ್ರೆಸ್ ನಾಯಕರೊಳಗೆ ಚುನಾವಣಾ ನಿಧಿ ವ್ಯಾಪಾರ
ಇತ್ಯಾದಿ ಆಸಕ್ತಿಕಾರಕ ಅಂಶಗಳು ಸಹ ಇವೆ.

ಈ ವಾರ ಚರಿತ್ರೆಯಲ್ಲಿ

ಜನವರಿ 12 1863

ಸ್ವಾಮಿ ವಿವೇಕಾನಂದರ ಜನ್ಮ ದಿನ



ವಿವೇಕಾನಂದರ ಬಗ್ಗೆ ಇ.ಎಂ.ಎಸ್. ಹೀಗೆ ಹೇಳಿದ್ದರು:

ಅವರೊಬ್ಬ ಪಕ್ಕಾ ಪ್ರಜಾಪ್ರಭುತ್ವವಾದಿಯಾಗಿದ್ದರು. ನಿರ್ಭಿಡೆಯ ನಿಲುವಿನ ಸಾಮಾಜಿಕ ಬಂಡಾಯಗಾರರಾಗಿದ್ದರು. ಬಾರತೀಯ ಸಮಾಜದ ಪುನರ್ ನಿರ್ಮಾಣಕ್ಕಾಗಿ ಅಹರ್ನಿಶಿ ದುಡಿಯುತ್ತಿದ್ದ ವೀರ ಸನ್ಯಾಸಿಯಾಗಿದ್ದರು. ಅವರು ಮತ್ತು ಅವರ ಸಹಚರರು ಮಾಡಿದ ಕೆಲಸ, ಗೈದ ಸಾಧನೆ ಆಧುನಿಕ ಕಾರ್ಮಿಕ ವರ್ಗ ಸಮಾಜವಾದಿ ವ್ಯವಸ್ಥೆಗಾಗಿ ದಾಪುಗಾಲು ಹಾಕಲು ಮಹಾ ಮಾರ್ಗವನ್ನು ರೂಪಿಸಿದವು.



● ಮಹಾಂತೇಶ್

ಜನವರಿ 22ರಂದು ಪ್ರಸನ್ನಕುಮಾರ್‌ಗೆ 'ಭಾವಪೂರ್ಣ ನುಡಿನಮನ'

ಸಿಐಟಿಯು ರಾಜ್ಯ ಪ್ರಧಾನ ಕಾರ್ಯದರ್ಶಿಯಾಗಿದ್ದ ಸಂಗಾತಿ ಎಸ್. ಪ್ರಸನ್ನಕುಮಾರ್ ಅವರ ಅಕಾಲಿಕ ನಿಧನಕ್ಕೆ ಜನವರಿ 11 ಹಾಗೂ 12 ರಂದು ಬೆಂಗಳೂರಿನಲ್ಲಿ ನಡೆದ ಸಿಐಟಿಯು ರಾಜ್ಯ ಪದಾಧಿಕಾರಿಗಳ ಹಾಗೂ ರಾಜ್ಯ ಸಮಿತಿ ಸಭೆಯು ತೀವ್ರ ಕಂಬನಿ ಮಿಡಿಯಿತು. ಮತ್ತು ಆಗಲಿದ ನಾಯಕನಿಗೆ ಇದೇ ಜನವರಿ 22 ರಂದು 'ಭಾವಪೂರ್ಣ ನುಡಿನಮನ' ಸಲ್ಲಿಸಲು ನಿರ್ಧರಿಸಿದೆ.

ಬೆಂಗಳೂರಿನ ಕಬ್ಬನ್ ಪಾರ್ಕ್ ಆವರಣದಲ್ಲಿರುವ ಸೆಕ್ರೆಟರಿಯೇಟ್ ಕ್ಲಬ್‌ನಲಿ ಮಧ್ಯಾಹ್ನ 2 ಗಂಟೆಯಿಂದ ನಡೆಯುವ ಈ ಕಾರ್ಯಕ್ರಮದಲ್ಲಿ ಸಿಐಟಿಯು ಅಖಿಲ ಭಾರತ ಪ್ರಧಾನ ಕಾರ್ಯದರ್ಶಿ ತಪನ್‌ಸೇನ್, ಕಾರ್ಮಿಕ ಆಯುಕ್ತರಾದ ಡಾ. ವಿಶ್ವನಾಥ, ಕನಿಷ್ಠವೇತನ ಸಲಹಾ ಮಂಡಳಿ ಅಧ್ಯಕ್ಷೆಯಾದ ಶ್ರೀಮತಿ ಯೋಗೇಶ್ವರಿವಿಜಯ್, ಬೆಂಗಳೂರು ವಿವಿಯ ಶ್ರೀ ಆಲಂಪಲ್ಲಿ ವೆಂಕಟರಾಂ ಕಾರ್ಮಿಕ ಅಧ್ಯಯನಪೀಠದ ನಿರ್ದೇಶಕರಾದ ಡಾ: ನಾರಾಯಣ ಶೆಟ್ಟಿ, ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಜಿ.ವಿ. ಶ್ರೀರಾಮರೆಡ್ಡಿ, ಸಚಿವಾಲಯ ನೌಕರರ ಸಂಘದ ಅಧ್ಯಕ್ಷರಾದ ಮಹಾದೇವಯ್ಯ ಮಠಪತಿ ಸೇರಿದಂತೆ ಹಲವಾರು ಕೇಂದ್ರ ಕಾರ್ಮಿಕ ಸಂಘಗಳ ನಾಯಕರು, ಎಡಪಕ್ಷಗಳ ಹಿರಿಯ ಮುಖಂಡರು, ಸಂಘಟಿತ ಹಾಗೂ ಅಸಂಘಟಿತ ಕಾರ್ಮಿಕ ಸಂಘಗಳ ನಾಯಕರುಗಳು, ಕಾರ್ಯಕರ್ತರುಗಳು ಭಾಗವಹಿಸಲಿದ್ದಾರೆ. ಅಧ್ಯಕ್ಷತೆಯನ್ನು ಸಿಐಟಿಯು ರಾಜ್ಯ ಅಧ್ಯಕ್ಷರಾದ ವಿಜೆಕೆ ನಾಯರ್ ವಹಿಸಲಿದ್ದಾರೆ.

ಇದೇ ಸಂದರ್ಭದಲ್ಲಿ ಪ್ರಸನ್ನ ಕುರಿತಾದ ವಿವಿಧ ಗಣ್ಯರು, ನಾಯಕರುಗಳು, ಅವರ ಒಡನಾಡಿ ಸಂಗಾತಿಗಳು ಬರೆದಿರುವ ಲೇಖನ ಹಾಗೂ ಕವನ ಹಾಗೂ ಅಭಿಪ್ರಾಯ ಮತ್ತು ವಿವಿಧ ಸಮಿತಿಗಳು ಕಳುಹಿಸಿರುವ ಶ್ರದ್ಧಾಂಜಲಿ ಸಂದೇಶ ಒಳಗೊಂಡು ಕಿರುಪುಸ್ತಕವನ್ನು ಅಂದು ಬಿಡುಗಡೆ ಮಾಡಲು ನಿರ್ಧರಿಸಲಾಗಿದೆ. ಮತ್ತು ಸಿಐಟಿಯು ರಾಜ್ಯ ಸಮಿತಿ ಕಚೇರಿಯಾದ 'ಸೂರಿ ಭವನ' ದಲ್ಲಿ ಕಾರ್ಮಿಕ ಕಾರ್ಯಕರ್ತರು ಹಾಗೂ ನಾಯಕರ ಅಧ್ಯಯನಕ್ಕೆ ಸಹಾಯವಾಗಲು 'ಪ್ರಸನ್ನಕುಮಾರ್ ಸ್ಮಾರಕ ಗ್ರಂಥಾಲಯ' ಆರಂಭಿಸಲು ನಿರ್ಧರಿಸಲಾಗಿದೆ. ಇದಲ್ಲದೆ ಕಾರ್ಮಿಕ ವರ್ಗದ ಚಳವಳಿಗಾಗಿ ತಮ್ಮನ್ನು ತಮ್ಮ ಜೀವನವನ್ನು ಅರ್ಪಿಸಿಕೊಂಡಿರುವ ಪೂರ್ಣಕಾಲದ ಕಾರ್ಯಕರ್ತರಿಗೆ ಹಾಗು ಅವರ ಕುಟುಂಬದವರಿಗೆ ಸಂಕಷ್ಟಗಳು ಎದುರಾಗುವ ಸಂದರ್ಭಗಳಲ್ಲಿ ಅಂತಹ ಸಂಗಾತಿಗಳ ಕುಟುಂಬಕ್ಕೆ ಅಗತ್ಯ ನೆರವು ನೀಡಲು ಕಾಂ. ಪ್ರಸನ್ನಕುಮಾರ್ ರವರ ಹೆಸರಲ್ಲಿ ಒಂದು ನಿಧಿಯನ್ನು ಸಂಗ್ರಹಿಸಿ ಪ್ರತ್ಯೇಕವಾಗಿ ನಿರ್ವಹಿಸಲು ರಾಜ್ಯಸಮಿತಿ ತೀರ್ಮಾನ ಮಾಡಿದೆ. ಈ ನಿಧಿಯಿಂದ ಇತರೆ ಪೂರ್ಣವಧಿ ಕಾರ್ಯಕರ್ತರ ಆರೋಗ್ಯದ ಸಂಕಷ್ಟಗಳಿಗೆ ಸಹಾಯ ಮಾಡಲು ತೀರ್ಮಾನಿಸಲಾಗಿದೆ.

ಮಾರ್ಚ್ 11: ಸಹಸ್ರಾರು ಕಾರ್ಮಿಕರ ವಿಧಾನಸೌಧ ಚಲೋ

ಜನವರಿ 11 ಹಾಗೂ 12 ರಂದು ಬೆಂಗಳೂರಿನಲ್ಲಿ ನಡೆದ ಸಿಐಟಿಯು ರಾಜ್ಯ ಪದಾಧಿಕಾರಿಗಳ ಹಾಗೂ ರಾಜ್ಯ ಸಮಿತಿ ಸಭೆ ಹಲವು ಪ್ರಮುಖ ಹೋರಾಟಗಳಿಗೆ ಕರೆಕೊಟ್ಟಿದೆ. ಅವುಗಳಲ್ಲಿ ಪ್ರಮುಖವಾದವು:

- ಜನವರಿ 19 ರಂದು ಕಾರ್ಮಿಕ–ರೈತ–ಕೃಷಿಕೂಲಿಕಾರರ ಜಂಟಿ ಪ್ರತಿಭಟನೆ:
- ಫೆಬ್ರವರಿ 5 2016 ರಂದು ಕೇಂದ್ರ ಕಾರ್ಮಿಕ ಸಂಘಟನೆಗಳ ಜಂಟಿ ಪ್ರತಿಭಟನೆ :
- ಮಾರ್ಚ್ 11, 2016 ರಂದು ಸಹಸ್ರಾರು ಕಾರ್ಮಿಕರ ವಿಧಾನಸೌಧ ಚಲೋ:

ಜನವರಿ 19 ರಂದು ಕಾರ್ಮಿಕ–ರೈತ–ಕೃಷಿಕೂಲಿಕಾರರ ಜಂಟಿ ಪ್ರತಿಭಟನೆ:

ಮುಂಬರುವ ದಿನಗಳಲ್ಲಿ ರೈತಕಾರ್ಮಿಕರ ಸಖ್ಯತೆಯೊಂದಿಗೆ ವಿಶಾಲ ತಳಹದಿಯ ಹೋರಾಟ ರೂಪಿಸಲು ನಿರ್ಧರಿಸಲಾಗಿದೆ. ಈ ಹಿನ್ನೆಲೆಯಲಿ ಸರ್ಕಾರದ ರೈತ ಕಾರ್ಮಿಕ ವಿರೋಧಿ ನೀತಿಗಳ ವಿರುದ್ಧ ದೇಶದಲ್ಲಿ ಮೊಟ್ಟಮೊದಲ ಸಾರ್ವತ್ರಿಕ ಮುಷ್ಕರ ನಡೆಸಿ 10 ಜನ ಹೋರಾಟಗಾರರು ಹುತಾತ್ಮರಾದ ದಿನವಾದ 19 ಜನವರಿ 2016 ರಂದು ದೇಶದ್ಯಾಂತ ರೈತ–ಕೂಲಿಕಾರರು ಹಾಗೂ ಕಾರ್ಮಿಕರ ದಿನವನ್ನಾಗಿ ಆಚರಿಸಲು ಕರೆ ನೀಡಿದೆ. ಆ ದಿನದಂದು ಸಿಐಟಿಯು, ಕರ್ನಾಟಕ ಪ್ರಾಂತ ರೈತ ಸಂಘ, ಕರ್ನಾಟಕ ಪ್ರಾಂತ ಕೃಷಿಕೂಲಿಗಾರರ ಸಂಘಗಳು ಜಂಟಿಯಾಗಿ ಸಾಧ್ಯವಿರುವ ಎಲ್ಲಾ ಜಿಲ್ಲಾ ಕೇಂದ್ರಗಳು ಹಾಗು ತಾಲೂಕು ಕೇಂದ್ರಗಳಲ್ಲಿ ಪ್ರತಿಭಟನೆ ನಡೆಸಬೇಕೆಂದು ಕರೆ ನೀಡಲಾಗಿದೆ.

ಫೆಬ್ರವರಿ 5 2016 ರಂದು ಕೇಂದ್ರ ಕಾರ್ಮಿಕ ಸಂಘಟನೆಗಳ ಜಂಟಿ ಪ್ರತಿಭಟನೆ :

ಸೆಪ್ಟೆಂಬರ್ 2 ರಂದು ದೇಶದ ದುಡಿಯುವ ಜನರು ತೀವ್ರ ರೀತಿಯ ಪ್ರತಿರೊಧವನ್ನು ವ್ಯಕ್ತಪಡಿಸಿದ್ದಾಗ್ಯೂ ಮೋದಿ ನೇತೃತ್ವದ ಕೇಂದ್ರ ಸರಕಾರ ತನ್ನ ನವ ಉದಾರವಾದಿ ನೀತಿಗಳನ್ನು ಮತ್ತಷ್ಟು ತೀವ್ರಗತಿಯಲ್ಲಿ ಹರಿಯಬಿಡುತ್ತಿರುವ ಕ್ರಮವನ್ನು ಜನರಲ್ ಕೌನ್ಸಿಲ್ ಸಭೆ ತೀವ್ರವಾಗಿ ಖಂಡಿಸಿದೆ. ಮೋದಿ ಸರಕಾರದ ವಿರುದ್ಧ ಕಾರ್ಮಿಕ ವರ್ಗ ನಡೆಸುತ್ತಿರುವ ಜಂಟಿ ಹೋರಾಟವನ್ನು ಮತ್ತಷ್ಟು ಮುಂದುವರೆಸಲು ನಿರ್ಧರಿಸಿ 2016 ಫಬ್ರವರಿ 5 ರಂದು ಕೇಂದ್ರ ಕಾರ್ಮಿಕ ಸಂಘಗಳು ಜಂಟಿಯಾಗಿ ಕರೆ ನೀಡಿರುವ ದೇಶದ್ಯಾಂತ ಜಂಟಿ ಕಾರ್ಯಚರಣೆ ಹಾಗೂ ಪ್ರಚಾರಾಂಧೋಲನವನ್ನು ಯಶಸ್ವಿಗೊಳಿಸಲು ಕರೆ ನೀಡಿದೆ. ಸೆಪ್ಟೆಂಬರ್ 2ರ ಮುಷ್ಕರದ ಬೇಡಿಕೆಗಳೊಂದಿಗೆ ಕೇಂದ್ರ ಕಾರ್ಮಿಕ ಸಂಘಟನೆಗಳು ಮುಂಬರುವ ಕೇಂದ್ರ ಬಜೆಟ್ ನಲ್ಲಿ ಪರಿಗಣಿಸಲು ಒತ್ತಾಯಿಸಿ ನೀಡಿರುವ ಸಲಹೆಗಳನ್ನು ಬಜೆಟ್ ನಲ್ಲಿ ಸೇರ್ಪಡೆ ಮಾಡಲು ಒತ್ತಾಯಿಸಿ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲೂ ಪ್ರತಿಭಟನೆ ನಡೆಸಲು ಹಾಗು ಬೇಡಿಕೆಗಳನ್ನು ಕಾರ್ಮಿಕರ ನಡುವೇ ವ್ಯಾಪಕ ಪ್ರಚಾರ ಮಾಡಲು ತೀರ್ಮಾನಿಸಲಾಗಿದೆ. ಜನವರಿ 14 ರಂದು ಬೆಂಗಳೂರಿನಲ್ಲಿ ಕೇಂದ್ರ ಕಾರ್ಮಿಕ ಸಂಘಟನೆಗಳು ಸಭೆಯೊಂದನ್ನು ನಡೆಸಿ ರಾಜ್ಯದಲ್ಲಿ ಈ ಹೋರಾಟ ಯಶಸ್ವಿಗೆ ಶ್ರಮಿಸಲು ತೀರ್ಮಾನಿಸಿವೆ.

ಮಾರ್ಚ್ 11 ರಂದು ಸಹಸ್ರಾರು ಕಾರ್ಮಿಕರ ವಿಧಾನಸೌಧ ಚಲೋ:

ರಾಜ್ಯ ಸರ್ಕಾರದ ಕಾರ್ಮಿಕ ವಿರೋಧಿ ನೀತಿಗಳ ವಿರುದ್ಧ, ಅಸಂಘಟಿತ ಹಮಾಲಿ, ಆಟೋ, ಕಟ್ಟಡ ಕಾರ್ಮಿಕರಿಗೆ ಸಮರ್ಪಕ ಕಲ್ಯಾಣ ಯೋಜನೆಗಳು ಜಾರಿಗೆ ಮತ್ತು ಪ. ಬಂಗಾಳ ಮಾದರಿಯಲ್ಲಿ ಭವಿಷ್ಯನಿಧಿ ಜಾರಿ, ಕನಿಷ್ಠ ವೇತನ 18 ಸಾವಿರ ನಿಗದಿಗಾಗಿ, ಅಂಗನವಾಡಿ, ಬಿಸಿಊಟ, ಆಶಾ ಮುಂತಾದ ಯೋಜನೆಗಳಲ್ಲಿ ಕೆಲಸಮಾಡುವ ನೌಕರರನ್ನೂ ಶೆಡ್ಯೂಲ್ ಪಟ್ಟಿಗೆ ಸೇರಿಸಿ ಕನಿಷ್ಠ ವೇತನ ನಿಗದಿ ಪಡಿಸಲು ಒತ್ತಾಯಿಸಿ, ಬೀಡಿ ಕಾರ್ಮಿಕರಿಗೆ ತುಟ್ಟಿಭತ್ಯೆ ಹೆಚ್ಚಳವನ್ನು ಸ್ಥಗಿತಗೊಳಿಸಿರುವ ಕಾನೂನು ಬಾಹಿರ ಆದೇಶವನ್ನು ಹಿಂದಕ್ಕೆ ಪಡೆಯಲು ಒತ್ತಾಯಿಸಿ, ತಂಬಾಕು ನಿಷೇಧದಿಂದ ಜೀವನಾಧಾರ ಕಳೆದುಕೊಂಡಿರುವ ಲಕ್ಷಾಂತರ ಬೀಡಿ ಕಾರ್ಮಿಕರಿಗೆ ಬದಲಿ ಜೀವನ ವ್ಯವಸ್ಥೆಗೆ ಒತ್ತಾಯಿಸಿ, ರಾಜ್ಯ ಸರ್ಕಾರದ ಬಜೆಟ್ ಅಧಿವೇಶನದ ಪೂರ್ವದಲ್ಲಿ ಒತ್ತಡ ಹಾಕಲು ಮಾರ್ಚ್ 11, 2016ರಂದು ವಿಧಾನ ಸೌಧ ಚಲೋ ನಡೆಸಲು ಸಿಐಟಿಯು ರಾಜ್ಯ ಸಮಿತಿ ಸಭೆಯಲ್ಲಿ ತೀರ್ಮಾನಿಸಲಾಗಿದೆ. ಕಾರ್ಮಿಕರನ್ನು ಬೃಹತ್ ಸಂಖ್ಯೆಯಲ್ಲಿ ಅಣಿನೆರಸಲು ಈಗನಿಂದಲೇ ವ್ಯಾಪಕ ಪ್ರಚಾರ ಪ್ರಕ್ಷೋಭೆಗಳನ್ನು ನಡೆಸಲು ಜಿಲ್ಲಾ ಸಮಿತಿಗಳಿಗೆ ಕರೆ ನೀಡಿದೆ.

ಸ್ಕೀಂ ವರ್ಕರ್ಸ್ ಜಂಟಿ ಹೋರಾಟ :

2016 ಫೆಬ್ರವರಿ 6, 7 ರಂದು 24 ಗಂಟೆ ಯಿಂದ 48 ಗಂಟೆಗಳ ಕಾಲ ಧರಣಿಯನ್ನು ಸಂಸತ್ ಸದಸ್ಯರ ಮನೆ ಮುಂದೆ ನಡೆಸಲು ಕರೆನೀಡಲಾಗಿದೆ.

ಮುಖ್ಯ ಬೇಡಿಕೆಗಳು : ಬಜೆಟ್‌ನಲ್ಲಿ ಅನುದಾನವನ್ನು ಹೆಚ್ಚಿಸುವುದು, 45 ನೇ ಐಎಲ್‌ಸಿಯ ನಿರ್ಣಯವನ್ನು ಜಾರಿಗೊಳಿಸಬೇಕು, ಎಲ್ಲಾ ಸ್ಕೀಂ ವರ್ಕರ್ಸ್‌ರನ್ನು ಖಾಯಂಗೊಳಿಸುವುದು, ಕನಿಷ್ಠ ವೇತನ ತಿಂಗಳಿಗೆ 15000 ನೀಡುವುದು, ಎಲ್ಲಾ ಸಾಮಾಜಿಕ ಸೌಲವತ್ತುಗಳನ್ನು ಮತ್ತು ಪಿಂಚಣಿಯನ್ನು ನೀಡುವುದು, ಖಾಸಗೀಕರಣಕೊಡುವುದನ್ನು ನಿಲ್ಲಿಸಿ ಸ್ಕೀಂ ವರ್ಕರ್ಸ್‌ನ್ನು ಬಲಪಡಿಸುವುದು.

ಮಾರ್ಚ್–10, 2016 ಬೃಹತ್ ವಿಧಾನಸೌಧ ಚಲೋ:

ಕಾಯಕನಿಧಿಯಡಿ ನಿವೃತ್ತಿ ಪರಿಹಾರ ಹಾಗೂ ಸಮವಸ್ತ್ರ ಸೌಲಭ್ಯಗಳ ಜಾರಿ, ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯಿಂದ ಸರಕಾರವೇ ಎಲ್ಲಾ ಹಮಾಲರಿಗೆ ಭವಿಷ್ಯ ನಿಧಿ ಮತ್ತು ಗುರುತಿನ ಚೀಟಿ ಸೌಲಭ್ಯಗಳ ಜಾರಿ ಸೇರಿದಂತೆ ನೆನಗುದಿಗೆ ಬಿದ್ದಿರುವ ಪ್ರಮುಖ ಬೇಡಿಕೆಗಳಿಗಾಗಿ ಒತ್ತಾಯಿಸಿ ಮಾರ್ಚ–10, **2016** ರಂದು "ಬೃಹತ್ ವಿಧಾನಸೌಧ ಚಲೋ" ನಡೆಸಲು ತಿರ್ಮಾನಿಸಲಾಗಿದೆ.

ಜನವರಿ 20ರಂದು ಸಂಸತ್ ಸದಸ್ಯರ ಮನೆ ಮುಂದೆ ಬಿಎಸ್‌ಎನ್‌ಎಲ್ ಗುತ್ತಿಗೆ ಕಾರ್ಮಿಕರ ಪ್ರತಿಭಟನೆ

ಬಿಎಸ್‌ಎನ್‌ಎಲ್‌ನಲ್ಲಿ ಗುತ್ತಿಗೆ ಆಧಾರದಲ್ಲಿ ಕೆಲಸ ಮಾಡುತ್ತಿರುವ ಕೇಬಲ್, ಹೌಸ್‌ಕೀಪಿಂಗ್ ಹಾಗೂ ಸೆಕ್ಯೂರಿಟಿ ಕಾರ್ಮಿಕರ ಬೇಡಿಕೆಗಳನ್ನು 'ಸಂಸತ್ತಿನಲ್ಲಿ' ಪ್ರಸ್ತಾಪಿಸಲು ಎಲ್ಲಾ ಸಂಸತ್ ಸದಸ್ಯರನ್ನು ಆಗ್ರಹಿಸಿ ಮತ್ತು ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ಸಂಸತ್ ಸದಸ್ಯರ ಕಚೇರಿಗಳ ಮುಂದೆ ರಾಜ್ಯದಂತ ಜನವರಿ 20 ರಂದು ಪ್ರತಿಭಟನೆ ನಡೆಸಿ ಗಮನ ಸೆಳೆಯಲು ಬಿಎಸ್‌ಎನ್‌ಎಲ್ ನಾನ್‌ಪರ್ಮನೆಂಟ್ ವರ್ಕರ್ಸ್ ಯೂನಿಯನ್ ರಾಜ್ಯ ಸಮಿತಿ ಸಭೆಯಲ್ಲಿ ನಿರ್ಧರಿಸಲಾಗಿದೆ

ಬೇಡಿಕೆಗಳು...

- ಎಲ್ಲಾ ಕೇಬಲ್, ಹೌಸ್‌ಕೀಪಿಂಗ್ ಹಾಗೂ ಸೆಕ್ಯೂರಿಟಿ ಕಾರ್ಮಿಕರಿಗೂ ಕುಶಲ ವೇತನ ನಿಗದಿಯಾಗಬೇಕು.
- ಕನಿಷ್ಟ ವೇತನ 18 ಸಾವಿರ ಜಾರಿಯಾಗಬೇಕು.
- ಹೊಸ ಅಧಿಸೂಚನೆ ಅನ್ವಯ ಎಲ್ಲಾ ಕಾರ್ಮಿಕರಿಗೂ ಕನಿಷ್ಟ 20 ಸಾವಿರ ಬೋನಸ್ ನೀಡಲು ಕ್ರಮವಹಿಸಬೇಕು.
- 10 ವರ್ಷಗಳಿಂದ ಗುತ್ತಿಗೆ ಆಧಾರದಲ್ಲಿ ಕೆಲಸ ಮಾಡುತ್ತಿರುವ ಕಾರ್ಮಿಕರು ಕಾಯಂಗೊಳ್ಳಬೇಕು.
- ಬಿ.ಎಸ್.ಎನ್.ಎಲ್ ಖಾಸಗೀಕರಣ ಕೈ ಬಿಡಬೇಕು.
- ಗುತ್ತಿಗೆ ಕಾರ್ಮಿಕರಿಗೆ ಕೆಲಸ ನಿರಾಕರಣೆ ನಿಲ್ಲಬೇಕು.
- ಇಎಸ್‌ಐ ಹಾಗೂ ಭವಿಷ್ಯ ನಿಧಿ, ಗ್ರಾಚುಟಿ, ಹೆರಿಗೆ ರಜೆ, ವಾರದ ರಜೆ ಸೇರಿದಂತೆ ಎಲ್ಲಾ ಕಾರ್ಮಿಕ ಕಾನೂನುಗಳು ಕಡ್ಡಾಯವಾಗಿ ಜಾರಿಯಾಗಬೇಕು.
- ಎಲ್ಲಾ ಸರ್ಕಾರಿ– ಹಾಗೂ ಸಾರ್ವಜನಿಕ ಉದ್ಯಮಗಳಲ್ಲಿ ಬಿಎಸ್‌ಎನ್‌ಎಲ್ ಸೇವೆ ಜಾರಿ ಮಾಡಬೇಕು.

23 ಉದ್ದಿಮೆಗಳಿಗೆ ಕನಿಷ್ಠ ವೇತನ ಕರಡು ಅಧಿಸೂಚನೆ

ರಾಜ್ಯದ ಈ ಕೆಳಗಿನ 23 ಉದ್ದಿಮೆಗಳಿಗೆ ರಾಜ್ಯ ಸರಕಾರ ದಿನಾಂಕ : 20.11.2015 ಕನಿಷ್ಟ ವೇತನ ಪರಿಷ್ಕರಿಸಿ ಕರಡು ಅಧಿ ಸೂಚನೆಯನ್ನು ಹೊರಡಿಸಿದೆ.

1) ಗೃಹ ಕೃತ್ಯ ಕಾರ್ಮಿಕರು 2) ಪ್ರೊಕ್ಯೂರ್‌ಮೆಂಟ್, ಪ್ರೊಸೆಸಿಂಗ್ ಅಂಡ್ ಡಿಸ್ಟ್ರಿಬ್ಯೂಷನ್ ಆಪ್ ಮಿಲ್ಕ್ 3) ಮದ್ಯ ತಯಾರಿಕೆ 4) ಪ್ಲಾಸ್ಟಿಕ್, ಪಾಲಿ ಪ್ಲಾಸ್ಟಿಕ್ ರಬ್ಬರ್ ಮತ್ತು ಪಿವಿಸಿ ಪೈಪ್ಸ್ ಮ್ಯಾನ್ಯುಫ್ಯಾಕ್ಚರಿಂಗ್ 5) ಸ್ಪನ್ ಪೈಪ್, ಕಾಂಕ್ರೀಟ್ ಪೈಪ್, ಸ್ಯಾನಿಟರಿ ಫಿಟಿಂಗ್ಸ್ ಪಿ.ಸಿ.ಸಿ ಆರ್.ಸಿ.ಎಸ್ ಪೋಲ್ಸ್ ಮತ್ತು ಆರ್.ಸಿ.ಸಿ ಪೈಪ್ಸ್ ಮ್ಯಾನ್ಯುಫ್ಯಾಕ್ಚರಿಂಗ್ 6) ಪಬ್ಲಿಕ್ ಮೋಟಾರ್ ಟ್ರಾನ್ಸ್ ಪೋರ್ಟ್ 7) ರಸ್ತೆಗಳ ನಿರ್ಮಾಣ ಅಥವಾ ನಿರ್ವಹಣಾ ಮತ್ತು ಕಟ್ಟಡಗಳ ನಿರ್ಮಾಣದಲ್ಲಿ 8) ಗ್ಲಾಸ್ ಅಂಡ್ ಗ್ಲಾಸ್‌ವೇರ್ 9) ಆಯುರ್ವೇದಿಕ್ ಮತ್ತು ಅಲೋಪಥಿಕ್ ಔಷಧಿ ತಯಾರಿಕೆ 10) ಪ್ರೈವೇಟ್ ಫೈನಾನ್ಸ್ ಕಾರ್ಪೋರೇಷನ್ ಮತ್ತು ಚಿಟ್‌ಫಂಟ್ 11) ಎಲೆಕ್ಟ್ರಾನಿಕ್ಸ್ 12) ಲಾಂಡ್ರಿ 13) ಸ್ಟೀಲ್, ಅಲ್ಮೇರಾ, ಟೇಬಲ್, ಕುರ್ಚಿ ಇತ್ಯಾದಿ ಪೀಠೋಪಕರಣಗಳ ತಯಾರಿಕೆ 14) ಹೋಟೆಲ್ 15) ಕ್ಲಬ್ 16) ಎಲೆಕ್ಟ್ರೋ ಪ್ಲೇಟಿಂಗ್ 17) ಟಿಂಬರ್ ಡಿಪೋ 18) ಸಿನಿಮ 19) ಮಿನಿ ಸಿಮೆಂಟ್ ಪ್ಲಾಂಟ್ 20) ಎರೇಟೆಡ್ ವಾಟರ್ ಮ್ಯಾನ್ಯುಫ್ಯಾಕ್ಚರಿಂಗ್ 21) ವೃತಿಪರ ಔಷಧ, ಗ್ರಾಹಕ ವಸ್ತುಗಳ ಮತ್ತು ಸೇವೆಗಳ ಮಾರಾಟ ಪ್ರತಿನಿಧಿ 22) ಆಸ್ಪತ್ರೆ ಮತ್ತು ನರ್ಸಿಂಗ್ ಹೋಂ 23) ಆಹಾರ ಸಂಸ್ಕರಣೆ, ಆಹಾರ ಪದಾರ್ಥಗಳ ಪ್ಯಾಕ್ ಮಾಡುವುದು, ಕಾಫಿ ಮತ್ತು ಸಾಂಬಾರ್ ಪದಾರ್ಥಗಳನ್ನು ಪ್ಯಾಕ್ ಮಾಡುವುದು.

ಎರಡು ತಿಂಗಳ ನಿಗದಿತ ಅವಧಿಯೊಳಗೆ ಈ ಕರಡು ಅಧಿಸೂಚನೆಗಳಿಗೆ ಸಂಬಂಧಿಸಿದ ಸಂಘಗಳು ಸೂಕ್ತ ಆಕ್ಷೇಪಣೆಗಳನ್ನು ಸಲ್ಲಿಸಬೇಕು. ಆಕ್ಷೇಪಣೆಗಳನ್ನು ಸಲ್ಲಿಸಲು ರಾಜ್ಯ ಕೇಂದ್ರವನ್ನು ಸಂಪರ್ಕಿಸಿ ಮಾರ್ಗದರ್ಶನ ಪಡೆಯಬಹುದು. ಈಗಾಗಲೇ ನಾವು ಒತ್ತಾಯಿಸುತ್ತಿರುವ ಅಕುಶಲ ಕಾರ್ಮಿಕರಿಗೆ ರೂ. 18,000/– ಕನಿಷ್ಟವೇತನ ನಿಗದಿ ಪಡಿಸಲು ಒತ್ತಾಯಿಸಬೇಕು. ಎಂದು ಸಿಐಟಿಯು ರಾಜ್ಯ ಸಮಿತಿ ಕರೆ ನೀಡಿದೆ.

ಬೋನಸ್ ಪಾವತಿ ಕಾಯ್ದೆಗೆ ತಿದ್ದುಪಡಿ

ಬೋನಸ್ ಪಾವತಿ ಕಾಯ್ದೆ–1965ಕ್ಕೆ ಕೇಂದ್ರ ಸರ್ಕಾರ 31.12.2015 ರಲ್ಲಿ ತಿದ್ದುಪಡಿ ಮಾಡಿದೆ. ಈ ತಿದ್ದುಪಡಿಯು ದಿನಾಂಕ 1.4.2014 ರಿಂದ ಪೂರ್ವನ್ವಯವಾಗಿ ಜಾರಿಗೆ ಬರುತ್ತದೆ. ಇದು ಕಾರ್ಮಿಕ ಚಳವಳಿಯ ನಿರಂತರ ಹೋರಾಟಕ್ಕೆ ದೊರೆತಿರುವ ಅಲ್ಪ ಪ್ರಮಾಣದ ಜಯವಾಗಿದೆ.

ಬೋನಸ್ ಪಡೆಯಲು ಅರ್ಹತೆ: ಈ ತಿದ್ದುಪಡಿಯ ಆಧಾರದಲ್ಲಿ ಮಾಸಿಕ 21,000/– ರೂವರೆಗೂ ಮೂಲ ವೇತನ ಹಾಗು ತುಟ್ಟಿಭತ್ಯೆಯನ್ನು ಗಳಿಸುವ ಕಾರ್ಮಿಕರು ಬೋನಸ್ ಪಡೆಯಲು ಅರ್ಹರಾಗುತ್ತಾರೆ.

ವಿವೇಕಾನಂದರನ್ನು ಮೂರ್ತೀಕರಿಸಬೇಡಿ :

—ಡಾ. ವಾಸುದೇವ ಬೆಳ್ಳೆ

ವಿವೇಕಾನಂದರ ಜಯಂತಿಯನ್ನು ಎಸ್‌ಎಫ್‌ಐ ಮತ್ತಿತರ ಸಂಘಟನೆಗಳು ರಾಜ್ಯಾದ್ಯಂತ ಆಚರಿಸಿದ್ದು ಮಂಗಳೂರು, ಗಂಗಾವತಿ, ಹಾವೇರಿ, ಹುಬ್ಬಳ್ಳಿ ಗಳಿಂದ ವರದಿಗಳು ಬಂದಿವೆ.

ವಿವೇಕಾನಂದರು ತುಂಬ ಕ್ರಿಯಾಶೀಲರಾಗಿದ್ದ ಸ್ಫೂರ್ತಿಯ ಚಿಲುಮೆಯಂತಿದ್ದ ವ್ಯಕ್ತಿ. ಅವರನ್ನು ಅವರ ಜಯಂತಿಯ ಹೆಸರಲ್ಲಿ ಮೂರ್ತೀಕರಿಸಿ ಸ್ಥಗಿತಗೊಳಿಸಲಾಗುತ್ತಿದೆ. ಅವರ ಜೀವಂತಿಕೆಯನ್ನು ಅಲ್ಲಗೆಳೆಯಲಾಗುತ್ತಿದೆ; ಆ ಮೂಲಕ ಅವರ ವಿಚಾರಗಳನ್ನು ಮರೆಮಾಚಲಾಗುತ್ತಿದೆ. ಅವರ ನಿಜ ವಿಚಾರಗಳನ್ನು ಬಹಿರಂಗಗೊಳಿಸಿ ಚರ್ಚಿಸುವುದರ ಮೂಲಕ ಅವರ ಜನ್ಮದಿನ ಆಚರಿಸಿದರೆ ಅದು ಅರ್ಥಪೂರ್ಣವಾಗುವುದು ಎಂದು ಲೇಖಕ ಡಾ. ವಾಸುದೇವ ಬೆಳ್ಳೆ ಹೇಳಿದರು.

ಅವರು ಎಸ್‌ಎಫ್‌ಐ ಮತ್ತು ಡಿವೈಎಫ್‌ಐ ದ.ಕ ಜಿಲ್ಲಾ ಸಮಿತಿಗಳ ವತಿಯಿಂದ ಮಂಗಳೂರಿನ 'ವಿಕಾಸ'ದಲ್ಲಿ ಜನವರಿ 12ರಂದು ನಡೆದ ವಿವೇಕಾನಂದ ಜಯಂತಿ ಸಂಬಂಧವಾದ 'ಅಸಹಿಷ್ಣುತೆ ಮತ್ತು ವಿವೇಕಾನಂದರು' ಕುರಿತಾದ ವಿಚಾರಗೋಷ್ಠಿಯನ್ನು ಉದ್ದೇಶಿಸಿ ಮಾತನಾಡುತ್ತಿದ್ದರು.

ಭಾರತದ ಇತಿಹಾಸವನ್ನು ಒರಿಯಂಟಲಿಸ್ಟರು ಹಾಗೂ ಕ್ಯಾಂಬ್ರಿಜ್ ನೆಲೆಯ ಇತಿಹಾಸಕಾರರು ನೋಡುವ ಎರಡೂ ದೃಷ್ಠಿಗಳಲ್ಲೂ ಭಾರತದ ಇತಿಹಾಸವನ್ನು ಹೀಗಳಿಸಿ ನಿರೂಪಿಸುವ ಕ್ರಮವನ್ನು ವಿವೇಕಾನಂದರು ಗ್ರಹಿಸಿದರು. 19ನೇ ಶತಮಾನದಲ್ಲಿ ರಾಜಾರಾಮ ಮೋಹನ್‌ರಾಯ್‌ರು ಆರಂಭಿಸಿದ ಸುಧಾರಣಾ ಚಳುವಳಿಗೆ ಪೂರಕವಾಗಿಯೂ ವಿವೇಕಾನಂದರ ಚಿಂತನೆಗಳು ಭಾರತವನ್ನು ಆಧುನಿಕ ಯುಗಕ್ಕೆ ಕೊಂಡೊಯ್ಯುವಲ್ಲಿ ಮಹತ್ವದ ಪಾತ್ರ ವಹಿಸಿವೆ ಎಂದು ಅವರು ವಿವರಿಸಿದರು.

ವಿಚಾರ ಗೋಷ್ಠಿಯಲ್ಲಿ ಮಾತನಾಡಿದ ಸಮುದಾಯ ಸಂಘಟನೆಯ ಮುಖಂಡರಾದ ವಾಸುದೇವ ಉಚ್ಚಿಲ ಅವರು, ವಿವೇಕಾನಂದರ ವಿಚಾರಗಳು 19ನೆಯ ಶತಮಾನದ ಸಾಮಾಜಿಕ ರಾಜಕೀಯ ಸಂಘರ್ಷಗಳ ಹಿನ್ನೆಲೆಯಲ್ಲಿ, ಬ್ರಿಟಿಷ್ ಹಾಗೂ ದೇಶೀಯ ಶೋಷಕರ ಸಾಂಸ್ಕೃತಿಕ ನಿಲುವಿಗೆ ವಿರೋಧವಾಗಿ ಮೂಡಿ ಬಂದಿವೆ ಎಂದು ವಿವರಿಸಿದರು.

ಡಿವೈಎಫ್‌ಐ ದ.ಕ ಜಿಲ್ಲಾ ಸಮಿತಿ ಕಾರ್ಯದರ್ಶಿ ಸಂತೋಷ್ ಬಜಾಲ್ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಎಸ್‌ಎಫ್‌ಐ ದ.ಕ ಜಿಲ್ಲಾ ಸಮಿತಿ ಅಧ್ಯಕ್ಷ ನಿತಿನ್ ಕುತ್ತಾರ್, ಕಾರ್ಯದರ್ಶಿ ಚರಣ್ ಪಂಜಿ ಮೊಗರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

ವಿವೇಕಾನಂದ ದೇಶದ ಆಸ್ತಿ

ಸ್ವಾಮಿ ವಿವೇಕಾನಂದರು ಭಾರತ ದೇಶದ ಆಸ್ತಿಯೇ ಹೊರತು ಯಾವುದೋ ಒಂದು ಧರ್ಮದ ಆಸ್ತಿಯಲ್ಲ ಎಂದುಎಸ್.ಎಫ್.ಐರಾಜ್ಯ ಕಾರ್ಯದರ್ಶಿ ಗುರುರಾಜ ದೇಸಾಯಿ ಹೇಳಿದರು. ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲ್ಲೂಕು ಎಸ್.ಎಫ್.ಐ ಸಂಘಟನೆ, ಜನತಾ ಸೇವಾ ಶಿಕ್ಷಣ ಸಂಸ್ಥೆಯಲ್ಲಿ ಆಯೋಜಿಸಲಾಗಿದ್ದ ಸ್ವಾಮಿ ವಿವೇಕಾಂದರ 153 ನೇ ಜನ್ಮ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ವಿವೇಕಾನಂದರು ಚಿಕಾಗೋದಲ್ಲಿ ಪ್ರತಿನಿಧಿಸಿದ್ದು ಭಾರತವನ್ನೇ ಹೊರತು ಹಿಂದು ರಾಷ್ಟ್ರವನ್ನಲ್ಲ. ಭಾರತದ ಪರಿಸ್ಥಿತಿ ಮತ್ತು ಸರ್ವಧರ್ಮಗಳ ಸಮನ್ವಯದ ಬಗ್ಗೆ ಹೇಳುವ ಮೂಲಕ ಭಾರತದ ಐಕ್ಯತೆಯನ್ನು ಎತ್ತಿ ಹಿಡಿಯುವ ಕೆಲಸ ಮಾಡಿದ್ದರು. ಆದರೆ ಅದನ್ನು ತಿರುಚಿ ಹೇಳಲಾಗುತ್ತಿದೆ. ಅಷ್ಟೇ ಅಲ್ಲದೆ 'ಏಳಿ ಎದ್ದೇಳಿ, ಗುರಿ ಮುಟ್ಟುವ ವರೆಗೂ ನಿಲ್ಲದಿರಿ' ಎಂದು ಹೇಳಿರುವುದು ಹಿಂದು ಧರ್ಮದ ಬಗ್ಗೆ ಅಲ್ಲ. ಭಾರತದಲ್ಲಿರುವ ಬಡತನ, ಶಿಕ್ಷಣದ ಅಸಮಾನತೆ, ಆರ್ಥಿಕ ಅಸಮಾನತೆ, ಶೋಷಣೆ, ದೌರ್ಜನ್ಯದ ವಿರುದ್ಧ ಯುವಕರು ಸಿಡಿದೇಳ ಬೇಕು. ಐಕ್ಯತೆಯ ಭಾರತವನ್ನು ಕಟ್ಟ ಬೇಕು ಎಂದು ಹೇಳಿದ್ದಾರೆ. ಎಂದು ಗುರುರಾಜ ದೇಸಾಯಿ ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ಧ ಕಾಲೇಜಿನ ಪ್ರಾಂಶುಪಾಲರಾದಾ ರಾಧಾ ಜನಾದ್ರಿ ಮಾತನಾಡಿ ವಿವೇಕಾನಂದರ ನಿಜವಾದ ಇತಿಹಾಸ ತಿಳಿದು ದೇಶಕಟ್ಟುವ ಕೆಲಸ ಮಾಡಬೇಕೆ ಹೊರತಾಗಿ ದೇಶ ಒಡೆಯುವ ಕೆಲಸ ಮಾಡಬಾರದು. ವಿದ್ಯಾರ್ಥಿಗಳು ಅಧ್ಯಯನಶೀಲರಾಗಿ ದೇಶದ ಬಗ್ಗೆ ಕಾಳಜಿ ಮಾಡಬೇಕೆಂದು ಕರೆ ನೀಡಿದರು, ತಾಲ್ಲೂಕ ಕಾರ್ಯದರ್ಶಿ ಗ್ಯಾನೇಶ್ ಕಡಗದ್ ಮಾತನಾಡಿ ವಿವೇಕಾನಂದರು ಯುವಕರ ಸ್ಪೂರ್ತಿ ನಾವೆಲ್ಲ ಅವರ ಆಶಯಗಳನ್ನು ನನಸಾಗಿಸುವ ನಿಟ್ಟಿನಲ್ಲಿ ಕೆಲಸ ಮಾಡೋಣ ಎಂದರು.

ವೇದಿಕೆಯ ಮೇಲೆ ಜಿಲ್ಲಾ ಅಧ್ಯಕ್ಷ ಅಮರೇಶ್ ಕಡಗದ್, ಬಾಳಪ್ಪ ಹುಲೀ ಹೈದರರ್, ತಾಲ್ಲೂಕಾಧ್ಯಕ್ಷ ಮಂಜುನಾಥ್ ಡಗ್ಗಿ, ದುರಗೇಶ್ ಡಗ್ಗಿ, ಉಪನ್ಯಾಸಕರಾದ ಶರಣಪ್ಪ, ಶಿವಕುಮಾರ, ಮರಿನಾಗಡಗ್ಗಿ ಸೇರಿದಂತೆ ಅನೇಕರಿದ್ದರು.

ಯುವಶಕ್ತಿಯ ಭಾರತದಲ್ಲಿ ವಿವೇಕಾನಂದ ಪ್ರಸ್ತುತ

21ನೇ ಶತಮಾನ ಯುವಶಕ್ತಿಯ ಶತಮಾನ, ಭಾರತದೇಶ ಪ್ರಜಾಪ್ರಭುತ್ವ ಬಲಿಷ್ಠವಾಗಿ ಸಮಾನತೆ ಬರಬೇಕು, ಯುವಜನತೆಗೆ ಪ್ರಾತಿನಿಧ್ಯ ದೊರೆಯಬೇಕು, ಈ ನಿಟ್ಟಿನಲ್ಲಿ ಸ್ವಾಮಿ ವಿವೇಕಾನಂದರು ನಮಗೆ ಆದರ್ಶವಾಗಬೇಕು, ಹಾಗಾಗಿ ಯುವ ಶಕ್ತಿ ತುಂಬಿರುವ ಭಾರತದಲ್ಲಿ ವಿವೇಕಾನಂದ ಪ್ರಸ್ತುತ ಎಂದು ಹಾವೇರಿ ಜಿಲ್ಲೆಯ ಹೊಯ್ಸಳ ಐಟಿಐ ಕಾಲೇಜಿನ ಪ್ರಾಂಶುಪಾಲರಾದ ಕೃಷ್ಣ ಜವಳಿ ಹೇಳಿದರು.

ಹಾವೇರಿ ನಗರದ ಸಿ.ಬಿ.ಕೊಳ್ಳಿ ಕಾಲೇಜಿನಲ್ಲಿ ಎಸ್‌ಎಫ್‌ಐ ಹಾವೇರಿ ಜಿಲ್ಲಾ ಸಮಿತಿ, ಸಿ.ಬಿ.ಕೊಳ್ಳಿ ಪಾಲಿಟೆಕ್ನಿಕ್ ಕಾಲೇಜು ಸಂಯುಕ್ತ ಆಶ್ರಯದಲ್ಲಿ ನಡೆಸಿದ ಸ್ವಾಮಿ ವಿವೇಕಾನಂದರ ಜನ್ಮದಿನಾಚರಣೆಯಲ್ಲಿ ಭಾಗವಹಿಸಿ ಮಾತನಾಡಿದರು.

ಉಪನ್ಯಾಸಕರಾದ ಮುಕ್ತಾನಂದ ಹಿರೇಮನಿ ಮಾತನಾಡಿ "ಚಿಕಾಗೊದಲ್ಲಿ ಸರ್ವದರ್ಮ ಸಮ್ಮೇಳನಕ್ಕೆ ಹೋದ ಬಗ್ಗೆ ಹೇಳುವ ಮೂಲಭೂತ ವಾದಿಗಳು, ಅಲ್ಲಿ ಹೋಗಲು ಪಟ್ಟಕಷ್ಟದ, ಸನಾತನಿಗಳಿಂದ ಎದುರಿಸಿದ ವಿರೋಧಗಳ ಬಗ್ಗೆ ಮೌನವಾಗಿದ್ದಾರೆ. ಕೋಮು ಗಲಭೆಗಳು, ಧರ್ಮ ಧರ್ಮಗಳ ಮಧ್ಯೆ ಜಾತಿಯ ಹೆಸರಲ್ಲಿ ಸಮಾಜದಲ್ಲಿ ಅಲ್ಲೋಲ ಕಲ್ಲೋಲ ಉಂಟು ಮಾಡಲು ಮೂಲಭೂತವಾದಿಗಳು ಹೊರಟಿದ್ದಾರೆ. ಪುರೋಹಿತಶಾಹಿ ವ್ಯವಸ್ಥೆಯನ್ನು ವಿರೋಧಿಸುವ ಮೂಲಕ ದೇವರು ಭಕ್ತರ ನಡುವೆ ಪೂಜಾರಿ ಏಕೆ ಎಂದು ಪ್ರಶ್ನಿಸಿದವರು ವಿವೇಕಾನಂದರವರು" ಎಂದು ಹೇಳಿದರು.

ಎಸ್‌ಎಫ್‌ಐ ಜಿಲ್ಲಾ ಅಧ್ಯಕ್ಷರಾದ ರೇಣುಕಾ ಕಹಾರ ಪ್ರಾಸ್ತಾವಿಕವಾಗಿ ಮಾತನಾಡಿದರು, ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಸಿಬಿ ಕೊಳ್ಳಿ ಪಾಲಿಟೆಕ್ನಿಕ್ ಕಾಲೇಜಿನ ಪ್ರಾಂಶುಪಾಲರಾದ ಪ್ರೋ ಬಿ.ಚೆನ್ನಪ್ಪ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು.. ವೇದಿಕೆಯ ಮೇಲೆ ಕಾಲೇಜಿನ ಉಪನ್ಯಾಸಕರಾದ ಯು.ಎನ್.ಹೊಸಗೌಡ್ರ ವೇದಿಕೆ ಮೇಲಿದ್ದರು. ಹಾಗೂ ಕಾಲೇಜಿನ ಸಿಬ್ಬಂದಿ ವರ್ಗ ಮತ್ತು ವಿದ್ಯಾರ್ಥಿಗಳು ಭಾಗವಹಿಸಿದ್ದರು. ಕಾರ್ಯಕ್ರಮದ ನಿರೂಪಣೆಯನ್ನು ಸುವರ್ಣಾ ಬಣಕಾರ ಮಾಡಿದರು.

ಹುಬ್ಬಳಿಯಲ್ಲಿ ಶ್ರೀ ಜಗದ್ಗುರು ಮೂರುಸಾವಿರ ಮಠ ವಿದ್ಯಾವರ್ಧಕ ಸಂಘದ ಮಹಿಳಾ ವಿಶ್ವವಿದ್ಯಾಲಯದ ಚರ್ಚಾ ವಿಭಾಗ, ರಾಷ್ಟ್ರೀಯ ಸೇವಾ ಘಟಕ, ವಿದ್ಯಾರ್ಥಿ ಕಲ್ಯಾಣ ಆಶ್ರಯದಲ್ಲಿ ವಿವೇಕಾನಂದರ ಜನ್ಮದಿನಾಚರಣೆ ಕಾರ್ಯಕ್ರಮ ನಡೆಯಿತು. ಮುಖ್ಯ ಅತಿಥಿಗಳಾಗಿ ನಿವೃತ್ತ ಪ್ರಾಚಾರ್ಯರಾದ ಎಸ್.ಆರ್. ಆರ್ಶಿರವರು, ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಿಶ್ವವಿದ್ಯಾಲಯದ ಪ್ರಾಚಾರ್ಯರರಾದ ಎಂ.ಎಂ. ದೇಶಪಾಂಡೆ ವಹಿಸಿದ್ದರು. ಕಾಲೇಜು ವಿದ್ಯಾರ್ಥಿಗಳು, ಉಪನ್ಯಾಸಕರು ಭಾಗವಹಿಸಿದ್ದರು.

ಉಳಿದಂತೆ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಎಸ್‌ಎಫ್‌ಐ. ಡಿವೈಎಫ್‌ಐ, ವಿವಿಧ ಸಂಘಟನೆಗಳು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಮೂಲಕ ವಿವೇಕಾನಂದರ ಜನ್ಮ ದಿನಾಚರಣೆಯನ್ನು ಅರ್ಥಪೂರ್ಣವಾಗಿ ಆಚರಿಸಲಾಗಿದೆ.



ಬೇಡಿಕೆ ಈಡೇರಿಸದ ಸರ್ಕಾರದ ವಿರುದ್ಧ ರಾಜ್ಯದ ವಿವಿದೆಡೆ ಅತಿಥಿ ಉಪನ್ಯಾಸಕರ ಪ್ರತಿಭಟನೆ

ಅತಿಥಿ ಉಪನ್ಯಾಸಕರ ಸೇವೆಯನ್ನು ವಿಲೀನಗೊಳಿಸಬೇಕು. ಸೇವೆಯನ್ನು ವಿಲೀನಗೊಳಿಸುವ ಸಂಬಂಧ ಕಾನೂನು ತೊಡಕುಗಳ ನಿವಾರಣೆಗಾಗಿ ಹಿರಿಯ ಸಾಹಿತಿಗಳಾದ ನಾಡೋಜ ಬರಗೂರು ರಾಮಚಂದ್ರಪ್ಪನವರ ಅಧ್ಯಕ್ಷತೆಯಲ್ಲಿ ವಿಧಾನ ಪರಿಷತ್ ಸದಸ್ಯರು ಹಾಗೂ ಅತಿಥಿ ಉಪನ್ಯಾಸಕರ ಸಂಘದ ಪದಾಧಿಕಾರಿಗಳು ಒಳಗೊಂಡ ತಜ್ಞರ ಸಮಿತಿ ರಚಿಸಬೇಕು.

ವಿಲೀನಗೊಳ್ಳುವವರೆಗೆ ವೇತನವನ್ನು ಮಾಸಿಕ ರೂ. 25 ಸಾವಿರ ರೂಪಾಯಿಗಳಿಗೆ ಹೆಚ್ಚಿಸಿ, ವರ್ಷದ 12 ತಿಂಗಳೂ ನೀಡಬೇಕು. ಸೇವಾ ಹಿರಿತನ ಮತ್ತು ವಯೋಮಿತಿ ಆಧಾರದಲ್ಲಿ ನೇಮಕಾತಿ ಮಾಡಬೇಕು. ಮಹಿಳಾ ಉಪನ್ಯಾಸಕರಿಗೆ ವೇತನ ಸಹಿತ 3 ತಿಂಗಳ ಹೆರಿಗೆ ರಜೆ ನೀಡಬೇಕು. ಎಂದು ಆಗ್ರಹಿಸಿ ಜನವರಿ 13ರಂದು ರಾಜ್ಯದ ವಿವಿಧ ತಾಲ್ಲೂಕುಗಳಲ್ಲಿ ಕರ್ನಾಟಕ ರಾಜ್ಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಅತಿಥಿ ಉಪನ್ಯಾಸಕರ ಸಂಘ ಹಾಗೂ ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್ (ಡಿ.ವೈ.ಎಫ್.ಐ) ನೇತೃತ್ವದಲ್ಲಿ ಪ್ರತಿಭಟನೆ ನಡೆಸಿ ಸರ್ಕಾರವನ್ನು ಆಗ್ರಹಿಸಿದ್ದಾರೆ.



ಅತಿಥಿ ಉಪನ್ಯಾಸಕರ ಪದವಿ ತರಗತಿ ಬಹಿಷ್ಕಾರ ಮತ್ತು ಪ್ರತಿಭಟನೆಯನ್ನು ಹಿಂದಕ್ಕೆ ಪಡೆಯಬೇಕೆಂದಿರುವ ಉನ್ನತ ಶಿಕ್ಷಣ ಸಚಿವರಾದ ಟಿ.ಬಿ.ಜಯಚಂದ್ರರವರು, ಮೊದಲು ಅತಿಥಿ ಉಪನ್ಯಾಸಕ ಮುಖಂಡರ ಜೊತೆ ಮಾತುಕತೆಗೆ ತಕ್ಷಣದಲ್ಲೇ ದಿನಾಂಕ ನಿಗದಿ ಮಾಡಿ ಮಾತುಕತೆಗೆ ಆಹ್ವಾನಿಸಬೇಕು. ಆನಂತರ ತರಗತಿ ಬಹಿಷ್ಕಾರ ಮತ್ತು ಪ್ರತಿಭಟನೆ ಹಿಂದಕ್ಕೆ ಪಡೆಯುವ ಬಗ್ಗೆ ತೀರ್ಮಾನಿಸುತ್ತೇವೆಂದು ಕರ್ನಾಟಕ ರಾಜ್ಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಅತಿಥಿ ಉಪನ್ಯಾಸಕರ ಸಂಘ ಈ ಮೂಲಕ ರಾಜ್ಯ ಸರಕಾರಕ್ಕೆ ಎಚ್ಚರಿಕೆ ನೀಡಿದೆ.

ಉನ್ನತ ಶಿಕ್ಷಣ ಸಚಿವರ ಆಪ್ತಕಾರ್ಯದರ್ಶಿರವರು ಒಳಗೊಂಡ ಸಭೆ ನಡೆಸುವ ಬಗ್ಗೆ ಯಾವುದೇ ಪ್ರಕ್ರಿಯೆಗಳು ನಡೆಯದೆ, ಈಗ ದಿಢೀರನೆ ಸಹಾಯಕ ಪ್ರಾಧ್ಯಪಕರ ಹುದ್ದೆಯ ಸ್ಫರ್ಧಾತ್ಮಕ ಪರೀಕ್ಷೆಯ ಕರಡು ಪ್ರಸ್ತಾವ ವೇಳಾ ಪಟ್ಟಿ ಪ್ರಕಟಿಸಿಲಾಗಿದೆ. ಸದ್ಯದಲ್ಲೇ ಸ್ವರ್ಧಾತ್ಮಕ ಪರೀಕ್ಷೆ ನಡೆಸಿ ನೂತನವಾಗಿ ಖಾಯಂ ಉಪನ್ಯಾಸಕರನ್ನು ನೇಮಿಸಿಕೊಳ್ಳುವುದರಿಂದ ಕಳೆದ ಹಲವಾರು ವರ್ಷಗಳಿಂದ ಸೇವೆ ಸಲ್ಲಿಸುತ್ತಿರುವ

ಪುಟ 10 ಕ್ಕೆ

ಅತಿಥಿ ಅಂಕಣ



ವಿ.ಎನ್. ಲಕ್ಷ್ಮೀನಾರಾಯಣ

ಸಾಂಸ್ಕೃತಿಕ ಸಹಾಯಧನದ ರಾಜಕೀಯ

ಇಂದಿನ ಜಾಗತೀಕರಣದ ರಾಜಕೀಯ–ಆರ್ಥಿಕ ನೀತಿಯಲ್ಲಿ ಯಾವುದೇ ದೇಶದ ಬರಹಗಾರ–ಕಲಾವಿದರ ಉತ್ತಮ ಸಾಂಸ್ಕೃತಿಕ ಅಭಿವ್ಯಕ್ತಿಗಳಿಗೆ ಅಮೆರಿಕ ಮತ್ತು ಯುರೋಪಿನ ಅನೇಕ ಸಾರ್ವಜನಿಕ ಹಾಗೂ ಖಾಸಗಿ ಫೌಂಡೇಶನುಗಳು, ಟ್ರಸ್ಟ್‌ಗಳು ಸಹಾಯಧನ–ಅನುದಾನ ಮತ್ತು ನಾನಾ ಬಗೆಯ (ವಿತರಣೆ ಇತ್ಯಾದಿ) ಬೆಂಬಲ ನೀಡುವುದು ಸರ್ವೇ ಸಾಮಾನ್ಯ ಎನಿಸಿದೆ. ಇವುಗಳಲ್ಲಿ ಕೆಲವನ್ನು ಎನ್.ಜಿ.ಓ. ಸಂಸ್ಥೆಗಳ ಮುಖೇನ ವಿತರಿಸಿದರೆ ಇನ್ನು ಕೆಲವು ನೆರವನ್ನು ನೇರವಾಗಿ ಕಲಾವಿದರಿಗೆ, ಸಾಂಸ್ಕೃತಿಕ ತಂಡಗಳಿಗೆ ಕೊಡ ಮಾಡುವುದನ್ನು ಕಾಣಬಹುದು. ಸಾಹಿತ್ಯ, ಕಲೆ, ಸಿನಿಮಾ ಮುಂತಾದ ಸಾಂಸ್ಕೃತಿಕ ಅಭಿವ್ಯಕ್ತಿಗಳ ಉದ್ದೇಶ ಸ್ಪಷ್ಟವಾಗಿ ಜನಪರವಾಗಿದ್ದಾಗಲೂ, ಅಥವಾ ಜನಪರ ರಾಜಕೀಯ ಹೋರಾಟಗಳನ್ನು ಎಗ್ಗಿಲ್ಲದೆ ಸಮರ್ಥಿಸುವಂಥ ಸಾಂಸ್ಕೃತಿಕ ಅಭಿವ್ಯಕ್ತಿಗಳೇ ಆಗಿದ್ದಾಗಲೂ ಹಣ ಸಹಾಯ ಈ ಅನುದಾನ–ಸಹಾಯ ಧನಗಳು ಸರಾಗವಾಗಿ ಹರಿದು ಬರುತ್ತವೆ. ಇಂತಹ ಸಹಾಯ ಧನ ಮೇಲ್ನೋಟಕ್ಕೆ 'ನಿಸ್ವಾರ್ಥ' 'ತಟಸ್ಥ' ಇದ್ದ ಹಾಗೇ ಕಾಣುವುದು ಮಾತ್ರವಲ್ಲ, ಜನಪರ ಹೋರಾಟಗಳಿಗೆ ನೇರವಾಗಿ ಬೆಂಬಲ ಕೊಡುವಂತೆಯೂ ತೋರುತ್ತದೆ. ಅಥವಾ ಕಲಾವಿದರ ರಾಜಕೀಯ ನಿಲುವನ್ನು ನಿಯಂತ್ರಿಸಿದಂತೆ ಅಥವಾ ಅವರ ಅಭಿಪ್ರಾಯವನ್ನು ನಿರ್ದೇಶಿಸದಂತೆ, ಮೆದುಗೊಳಿಸಿದಂತೆಯೂ ತೋರುವುದಿಲ್ಲ. ಆದರೆ ಇದರ ಹಿಂದಿರುವ ರಾಜಕೀಯ ನಯ ವಂಚನೆಯ ವಾಸ್ತವ ಮೇಲೆ ಕಾಣಿಸುವಷ್ಟು ಸರಳವಾಗಿರುವುದಿಲ್ಲ.

ಇತ್ತೀಚೆಗೆ ಬೆಂಗಳೂರಿನ ಬಾದಾಮಿ ಹೌಸ್‌ನಲ್ಲಿ ಸಮುದಾಯ ಏರ್ಪಡಿಸಿದ್ದ ಪ್ಯಾಲೆಸ್ತೀನ್ ಸಂಘರ್ಷ ಕುರಿತಾದ 'ಫೈವ್ ಬ್ರೋಕನ್ ಕ್ಯಾಮರಾಸ್' ಎಂಬ ಡಾಕ್ಯುಮೆಂಟರಿ ಚಿತ್ರ ಪ್ರದರ್ಶನಕ್ಕೆ ಆಹ್ವಾನಿತನಾಗಿ ಹೋಗಿದ್ದೆ. ಇದನ್ನು ಬೆಂಗಳೂರಿನಲ್ಲಿ ಜನವರಿ 13–16ರಲ್ಲಿ ನಡೆಯಲಿದ್ದ 'ಪ್ಯಾಲೆಸ್ತೀನ್ ಫ್ರೀಡಂಜಾಥಾ'ದ ಪೂರ್ವಭಾವಿ ಕಾರ್ಯಕ್ರಮವಾಗಿ ಚಿತ್ರಪ್ರದರ್ಶನವನ್ನು ಹಮ್ಮಿಕೊಳ್ಳಲಾಗಿತ್ತು. ಚಿತ್ರ ಪ್ರದರ್ಶನದ ನಂತರ ನಡೆದ ಸಂವಾದದಲ್ಲಿ ಚಿತ್ರಕ್ಕೆ ನೋಡುಗರಿಂದ ಬಂದ ಮತ್ತು ನನ್ನದೇ ಪ್ರತಿಕ್ರಿಯೆಗಳ ಹಿನ್ನೆಲೆಯಲ್ಲಿ, ಸಾಂಸ್ಕೃತಿಕ (ಅದರಲ್ಲೂ ಅಮೆರಿಕ–ಯುರೋಪಿಯನ್ ಸಂಸ್ಥೆಗಳ) ಸಹಾಯಧನ–ಅನುದಾನಗಳ ರಾಜಕೀಯದ ಬಗ್ಗೆ, ಈ ಚಿತ್ರದ ನಿರ್ದಿಷ್ಟ ಉದಾಹರಣೆ ಇಟ್ಟುಕೊಂಡು, ಮಂಡಿಸಿದ ಕೆಲವು ವಿಚಾರಗಳು ಇಲ್ಲಿವೆ.

ಐದು ಮುರಿದ ಕ್ಯಾಮೆರಾಗಳ ಕತೆ

'ಫೈವ್ ಬ್ರೋಕನ್ ಕ್ಯಾಮರಾಸ್' ಪ್ಯಾಲೆಸ್ತೀನಿನ 'ಬಿಲಿನ್' ಎಂಬ ಪುಟ್ಟ ಹಳ್ಳಿಯಲ್ಲಿ ನಡೆಯುವ ಸಾಂಸಾರಿಕ– ಸಾಮಾಜಿಕ– ರಾಜಕೀಯ ವಿದ್ಯಮಾನಗಳನ್ನು ದಾಖಲಿಸುವ (ಇಂಗ್ಲಿಷ್ ಸಬ್ ಟೈಟಲ್‌ಗಳೊಂದಿಗಿನ) 90 ನಿಮಿಷಗಳ ಅರಾಬಿಕ್–ಹಿಬ್ರೂ ಚಿತ್ರ. ತನ್ನ ಮಗುವಿನ ಜನನ ಮತ್ತು ಬೆಳವಣಿಗೆಯನ್ನು ಚಿತ್ರೀಕರಿಸಲೆಂದು ಅರಬ್ ರೈತ ಕುಟುಂಬದ ಏಮದ್ ಬ್ಯುರಾಂತ್ ಎಂಬಾತ ಕೊಂಡುಕೊಂಡ ವೀಡಿಯೊ ಕ್ಯಾಮರಾ 5 ವರ್ಷಗಳ ಅವಧಿಯಲ್ಲಿ ಮಗುವಿನ ಬೆಳವಣಿಗೆಯನ್ನಲ್ಲದೆ ಹಳ್ಳಿಯಲ್ಲಿ ನಡೆಯುವ ಕ್ರೀಡೆ, ಉತ್ಸವ ಮತ್ತು ತಮ್ಮ ಗ್ರಾಮದ ಭೂಮಿಯನ್ನು ಆಕ್ರಮಿಸಿಕೊಳ್ಳುವ ಇಸ್ರೇಲ್ ಸರ್ಕಾರದ ವಿರುದ್ಧ ನಡೆಯುವ ಗ್ರಾಮಸ್ಥರ ಪ್ರತಿಭಟನೆಗಳನ್ನೂ ದಾಖಲಿಸಲು ಬಳಕೆಯಾಗುತ್ತದೆ. ಚಿತ್ರ ನಿರ್ಮಾಣದ ಯಾವ ಉದ್ದೇಶವನ್ನೂ ಇಟ್ಟುಕೊಳ್ಳದೆ ಸುಮ್ಮನೆ ಕಂಡದ್ದನ್ನು ದಾಖಲಿಸುತ್ತಾ ಹೋಗುವ ಈ ಪ್ರಕ್ರಿಯೆಯಲ್ಲಿ 5 ವರ್ಷಗಳಲ್ಲಿ ಒಟ್ಟು 5 ಕ್ಯಾಮರಾಗಳು ದಮನಕಾರಿ ಇಸ್ರೇಲೀ ಪೋಲೀಸರ/ಸೈನಿಕರ ಬಲ ಪ್ರಯೋಗದಿಂದಾಗಿ ಧ್ವಂಸವಾಗುತ್ತವೆ. ಬ್ಯುರಾಂತ್ ಸಂಗ್ರಹಿಸಿದ ಈ ಚಿತ್ರ ಸಾಮಗ್ರಿಯನ್ನು ಇಸ್ರೇಲಿನ ಗೈ ಡೇವಿಡಿಯ ನಿರ್ದೇಶನದ ಸಹಯೋಗದಲ್ಲಿ ಪೂರಕ ಚಿತ್ರಿಕರಣ ಬಳಸಿ ಈ ಸಾಕ್ಷ್ಯ ಚಿತ್ರವನ್ನು ತಯಾರಿಸಲಾಗಿದೆ. ಗ್ರಾಮಸ್ಥರ ನ್ಯಾಯಯುತ, ಅಹಿಂಸಾತ್ಮಕ ಪ್ರತಿಭಟನೆಗಳನ್ನು ಹಿಂಸಾತ್ಮಕವಾಗಿ ಹತ್ತಿಕ್ಕುವ ಪೊಲೀಸ್/ಸೈನಿಕ ಕಾರ್ಯಾಚರಣೆಯಲ್ಲಿ ಸಂಭವಿಸುವ ಗ್ರಾಮಸ್ಥರ ಸಾವು–ನೋವುಗಳ, ಬೆಳೆಯುವ ಮಕ್ಕಳ ಅಸಹಾಯಕ ಕ್ರೋಧದ ಪ್ರತೀಕಗಳಾಗಿ, ಧ್ವಂಸಗೊಳ್ಳುವ ಕ್ಯಾಮರಾಗಳು ಚಿತ್ರದಲ್ಲಿ ಬಳಕೆಯಾಗಿವೆ.

ವಿಶ್ವದಲ್ಲೇ ಅತ್ಯಂತ ದೀರ್ಘಕಾಲೀನ ಜೀವಂತ ರಾಜಕೀಯ ಸಂಘರ್ಷವೆನಿಸಿರುವ ಪ್ಯಾಲೆಸ್ತೀನ್ ಸ್ವಾತಂತ್ರ್ಯ ಹೋರಾಟ, ಇಸ್ರೇಲ್ ಸರ್ಕಾರದ ಆಕ್ರಮಣಕಾರಿ ಒತ್ತುವರಿ, ಬಲಾತ್ಕಾರ ಭೂಸ್ವಾಧೀನ



ಮತ್ತು ಸ್ವಾತಂತ್ರ್ಯ ಹರಣಗಳ ವಿರುದ್ಧ ಸ್ಥಳೀಯ ಜನರ ಪ್ರತಿರೋಧ ಈ ಚಿತ್ರದ ಹಿನ್ನೆಲೆ–ಮುನ್ನೆಲೆಯಾಗಿವೆ.

ದಮನಿತರ ಪರ ಕಲಾನುಭವ, ಆದರೆ..

ವೈಯಕ್ತಿಕ ಸ್ತರದಲ್ಲಿ ಸ್ವಜನ–ಸ್ವಗ್ರಾಮ–ಸ್ವದೇಶ ಪ್ರೇಮಗಳ ಕೌಟುಂಬಿಕ ದಾಖಲೆಗಳಾಗಿ ಸಂಗ್ರಹವಾದ ಈ ಚಿತ್ರ ಸಾಮಗ್ರಿ ಒಂದು ಸಿನಿಮಾರೂಪ ಪಡೆಯುವಾಗ ಆಧುನಿಕೋತ್ತರ ಚಿಂತನೆಗಳ ರಾಜಕೀಯ ಹೆಣಿಗೆಗೆ ಒಳಪಟ್ಟಿರುವ ಅಂಶ ಚಿತ್ರವೀಕ್ಷಣೆಯಲ್ಲಿ ಗಮನಕ್ಕೆ ಬರುತ್ತದೆ. ಈ ಚಿತ್ರದ ತಯಾರಿಕೆ, ವಿತರಣೆ ಮತ್ತು ಮಾನ್ಯತೆಗಳ ಸಂದರ್ಭಗಳಲ್ಲಿ ಅಂತಾರಾಷ್ಟ್ರೀಯ ಸಂಸ್ಥೆಗಳು ಪ್ರತ್ಯಕ್ಷವಾಗಿ–ಪರೋಕ್ಷವಾಗಿ ಪ್ರತಿನಿಧಿಸುವ ರಾಜಕೀಯ ಧೋರಣೆ, ಸೈದ್ಧಾಂತಿಕ ನಿಲುವು ಮತ್ತು ಹಿತಾಸಕ್ತಿಗಳು ಕೆಲಸ ಮಾಡಿರುವುದು ಗುಟ್ಟಾಗೇನೂ ಇಲ್ಲ. ಆದರೂ ಚಿತ್ರದ ಮೇಲ್ಪದರದಲ್ಲಿ ಅಥವಾ ಒಟ್ಟಾರೆಯಾಗಿ ಬಿಂಬಿತವಾಗುವ ಕಲಾನುಭವದ ಆಚೆಗೂ ನೋಡದಿದ್ದರೆ ಚಿತ್ರ ಸಾಮಗ್ರಿಗೂ ಅದನ್ನು ಬಳಸಿ ಸಂಕಲಿಸಿದ ಚಿತ್ರಕೃತಿಗೂ ಮಧ್ಯೆ ಅಂತರ್ಗತವಾಗಿರುವ ರಾಜಕೀಯ ಅರ್ಥವಾಗುವುದಿಲ್ಲ.

ಇಸ್ರೇಲೀ ಪೋಲೀಸರೊಂದಿಗಿನ ಅಹಿಂಸಾತ್ಮಕ ಸಂಘರ್ಷದಲ್ಲಿ ಬಂಧನಕ್ಕೊಳಗಾಗುವ ಸೋದರರ, ತಂದೆಯ ಸಹಾಯಕ್ಕೆ ಧಾವಿಸಬೇಕೊ, ಕ್ಯಾಮರಾದಲ್ಲಿ ದಾಖಲಿಸಬೇಕೊ ಎಂಬ ದ್ವಂದ್ವವನ್ನು ಎದುರಿಸುತ್ತಲೇ, ಪೋಲೀಸರ ಪ್ರತಿರೋಧದ ನಡುವೆಯೂ ಹಿಂಸೆ–ದೌರ್ಜನ್ಯಗಳನ್ನು ಚಿತ್ರೀಕರಿಸುವ ಪತ್ರಕರ್ತ, ತನಗೆ ತಗುಲಬೇಕಾದ ಗುಂಡು ಕ್ಯಾಮರಾಕ್ಕೆ ತಗುಲಿ ಪ್ರಾಣ ಉಳಿಯುವ ಸಂದರ್ಭ, ಅನುದಿನವೂ ನಿರಾತಂಕವಾಗಿ ಮರಹತ್ತಿ ಕುಳಿತುಕೊಳ್ಳುವ ಸ್ವಚ್ಛಂದ ಹಕ್ಕಿಗಳ ಚಿತ್ರ, ಅಷ್ಟೆ ಸ್ವಚ್ಛಂದವಾಗಿ ಆಕಾಶದಲ್ಲಿ ಸುತ್ತು ಹಾಕುವ ರಣಹದ್ದುಗಳ ಚಿತ್ರ, ದೈತ್ಯ ಯಂತ್ರಗಳು ಬೇರುಸಹಿತವಾಗಿ ಕಿತ್ತು ಬೇರೆಡೆಗೆ ಸಾಗಿಸುವ ಜೀವಂತ ಆಲಿವ್ ಮರಗಳ ಚಿತ್ರಗಳನ್ನು ಗಮನಿಸಿದಾಗ ಚಿತ್ರಕರ್ತ ದಮನಿತರಾದ ಪ್ಯಾಲೆಸ್ತೀನೀ ಜನರ ಮುಖವಾಣಿಯಾಗುತ್ತಾನೆ.

ಆದರೆ ಮಕ್ಕಳ ಕಣ್ಮಣಿಯಾಗಿದ್ದ ಶಾಂತಿಪ್ರಿಯ ಯುವಕ 'ಫಿಲ್' ಪೋಲೀಸರ ಗುಂಡಿಗೆ ಬಲಿಯಾದಾಗ ಪತ್ರಕರ್ತನ ಮಗ ಕೇಳುವ 'ಅಪ್ಪಾ ಪೋಲೀಸರನ್ನೇಕೆ ಚಾಕುವಿನಿಂದ ಇರಿದು ಕೊಲ್ಲಬಾರದು?' ಎಂಬ ಪ್ರಶ್ನೆಗೆ ತಂದೆ ಕೊಡುವ ಉತ್ತರದ ಹಿಂದಿರುವ ಅಸಹಾಯಕತೆಯಲ್ಲಿ ದಮನ ಪರವಾದ ಹಿಂಸಾತ್ಮಕ ರಾಜಕೀಯವನ್ನು ಎದುರಿಸಲು ಏಕಮುಖವಾದ ಶಾಂತಿಯುತ ರಾಜಕೀಯ ಸರಿಯೆಂದು ನಂಬುವಂತೆ ದಮನಿತರಿಗೆ ತುಂಬಾ ನವಿರಾಗಿ ಸಲಹೆ ಮಾಡುವ ಹವಣಿಕೆ ಕಾಣಿಸುತ್ತದೆ. ತೀವ್ರವಾಗಿ ಗಾಯಗೊಳ್ಳುವ ಪತ್ರಕರ್ತ–ಚಿತ್ರಗ್ರಾಹಕ ಪ್ರಾಣ ಉಳಿಯಬೇಕಾದರೆ ದುಬಾರಿಯಾದರೂ ಉತ್ತಮ ವೈದ್ಯಕೀಯ ಸೌಲಭ್ಯಗಳಿಗಾಗಿ ಇಸ್ರೇಲೀ ಆಸ್ಪತ್ರೆಗೇ ಹೋಗಬೇಕೆನ್ನುವ ಅನಿವಾರ್ಯತೆ, ಚಿತ್ರೀಕರಣ ಮಾಡಿತೊಂದರೆ ತಂದುಕೊಳ್ಳುವುದು ವಿವೇಕವಲ್ಲವೆಂದು ಹೇಳುವ ಹೆಂಡತಿಯ ಬುದ್ಧಿವಾದ, ಪುಟ್ಟ ಹುಡುಗ ಮುಳ್ಳುಬೇಲಿಯ ಬಳಿಯಲ್ಲಿರುವ ಪೋಲೀಸನ ಕೈಗೆ ಶಾಂತಿ ಬಯಕೆಯ ಹಸಿರು ಕಡ್ಡಿಯನ್ನು ಕೊಡುವ ಚಿತ್ರ, ಇಸ್ರೇಲೀ ಸರ್ಕಾರದ ದಮನಕರ ರಾಜಕೀಯ ಚಾರಿತ್ರಿಕವಾಗಿ ಅನಿವಾರ್ಯ ವಾಸ್ತವವಾಗಿದೆ ಎಂದು ಒಪ್ಪಿಕೊಳ್ಳಬೇಕೆಂಬ ಸಲಹೆಯನ್ನು ನೋಡುಗರ ಮುಂದಿಡುತ್ತವೆ.

ರಕ್ತ ಕೆಂಪನ್ನು ಆಲಿವ್ ಎಲೆಗಳಿಂದ ಮರೆಮಾಡುವ ರಾಜಕೀಯ

ಸಾಕಷ್ಟು ತೊಂದರೆಗಳ ಮಧ್ಯೆ, ಪ್ರಾಣವನ್ನು ಪಣಕ್ಕಿಟ್ಟು ಬ್ಯೂರ್ನಾತ್ ಕಲೆಹಾಕುವ ಚಿತ್ರ ಸಾಮಗ್ರಿಯಲ್ಲಿನ ದಮನಕರ ಹಿಂಸೆಯ ರಕ್ತ ಕೆಂಪನ್ನು ಯೋಜಿತ ರೀತಿಯಲ್ಲಿ ನಿರ್ವಹಿಸಿದ ಕಲಾಚಳಕಗಳು, ಆಲಿವ್ ಎಲೆಗಳ ಶಾಂತಿ ಹಸಿರಿನಿಂದ ಮರೆಮಾಡಿ, ನ್ಯಾಯ–ಅನ್ಯಾಯಗಳ, ಸರಿ–ತಪ್ಪುಗಳ ತೀಕ್ಷ್ಣ ವ್ಯತ್ಯಾಸವನ್ನು ಎರಡೂ ಅಲ್ಲದ ಅಥವಾ ಹೌದೆನಿಸುವ ಬೂದಿಬಣ್ಣಕ್ಕೆ ತಿರುಗಿಸಿ ಮಸಕುಗೊಳಿಸುತ್ತವೆ. ಈಮದ್ ಬ್ಯೂರ್ನಾತ್ ತನ್ನ 'ಬಡ' ವಿಡಿಯೊ ಕ್ಯಾಮರಾಗಳಲ್ಲಿ ದಾಖಲಿಸಿಕೊಂಡ ಚಿತ್ರ ಸಾಮಗ್ರಿಯನ್ನು ಸಿನಿಮಾ ಭಾಷೆಯಲ್ಲಿ ಸಾಕ್ಷ್ಯ ಚಿತ್ರವಾಗಿ ಸಂಕಲಿಸುವಾಗ ಮತ್ತೆ ಚಿತ್ರೀಕರಿಸಿ ಸೇರಿಸಿದ ಚಿತ್ರಿಕೆಗಳು, ಬಳಸಿರುವ ಧ್ವನಿ ನಿರೂಪಣೆಯಲ್ಲಿನ ಯೋಚನಾ ಧಾಟಿ, ಚಿತ್ರದ ತಯಾರಿಕೆಗೆ ಸಹಾಯಧನ ಒದಗಿಸಿರುವ ನ್ಯೂಇಸ್ರೇಲೀ ಸಿನಿಮಾ ಫಂಡ್, ಅಮೆರಿಕಾದ ಜಾರ್ಜಿಯಾ, ಫೋರ್ಡ್ ಫೌಂಡೇಶನ್‌ನಂಥ ಸಂಸ್ಥೆಗಳ ಸಹಾಯಧನ, ಇಸ್ರೇಲಿನಲ್ಲಿನ ಯುವಕರಿಗೆ ತೋರಿಸುವಾಗ ಮತ್ತು ಆಸ್ಕರ್ ಪ್ರಶಸ್ತಿಯ ಸ್ಪರ್ಧೆಗೆಂದು ಆಯ್ಕೆ ಮಾಡುವಾಗ ಹಿಬ್ರ್ಯೂ ಮತ್ತು ಅರಬ್ ಭಾಷೆಗಳ ಆವೃತ್ತಿಗಳ ಈ ಚಿತ್ರವನ್ನು ಇಸ್ರೇಲ್–ಅರಬ್ ಚಿತ್ರವೆಂದು ಅಧಿಕೃತವಾಗಿ ಘೋಷಿಸಿದ್ದು ಇವೆಲ್ಲಾ ಚಿತ್ರದ ರಾಜಕೀಯ ಉದ್ದೇಶಗಳನ್ನು, ಚಿತ್ರ ಪ್ಯಾಲೆಸ್ತೀನೀ ಜನರ ಪರವಾಗಿದ್ದಂತೆ ತೋರಿಯೂ ನಿಜವಾಗಿ ದಮನಕರ ಪರವಾಗಿರುವಂತೆ ತಿರುಚಲು ಬಳಸಿಕೊಂಡ ಅಂಶಗಳೆಂದು ನನಗೆ ತೋರುತ್ತದೆ. ನೊಬೆಲ್ ಪ್ರಶಸ್ತಿಗಳಾಗಲಿ, ಆಸ್ಕರ್ ಪ್ರಶಸ್ತಿಗಳಾಗಲಿ ಎಂದೂ ದಮನಿತರ ಬಿಡುಗಡೆಯ ಪರವಾದ ಅಸಂಧಿಗ್ಧ ರಾಜಕೀಯವನ್ನು ಬೆಂಬಲಿಸಿಲ್ಲ. ಪ್ಯಾಲೆಸ್ತೀನ್ ಜನರ ಪರವಾದ, ಇಸ್ರೇಲ್ ಸರ್ಕಾರದ ಕ್ರೌರ್ಯವನ್ನು ಅಸಂದಿಗ್ಧವಾಗಿ ಬಿಂಬಿಸುವ, ಇದೇ ಅವಧಿಯಲ್ಲಿ ತಯಾರಾದ ಚಿತ್ರಗಳು, ಉದಾ. 'ಟಿಯರ್ಸ್ ಆಫ್ ಗಾಜ಼ಾ' ಆಸ್ಕರ್ ಪ್ರಶಸ್ತಿ ಸ್ಪರ್ಧೆಗೆ ಪರಿಗಣಿತವಾಗಿಲ್ಲ ಎಂಬುದು ಕೇವಲ ಆಕಸ್ಮಿಕವಲ್ಲ.

ಈ ಚಿತ್ರದಲ್ಲಿ ಕಂಡು ಬರುವ ಇಸ್ರೇಲಿ ಪೋಲೀಸರ/ಸೈನಿಕರ ಬರ್ಬರತೆ, ವಾಸ್ತವವಾಗಿ ಅದರ ಹಿಂದಿರುವ ಇಸ್ರೇಲೀ ಸರ್ಕಾರದ ದಮನಕಾರಿ ರಾಜಕೀಯ ನೀತಿಯ ಮೆದು ಚಿತ್ರಣ ಮಾತ್ರ. ಇಂದು ನಿಜವಾಗಿ ಅಲ್ಲಿ ನಡೆಯುತ್ತಿರುವ ನರಮೇಧಕ್ಕೆ ಹೋಲಿಸಿದರೆ ಈ ಬರ್ಬರತೆಯ ಚಿತ್ರಣ ಕ್ಷುಲ್ಲಕ ಅಥವಾ ಪೇಲವವಾದದು. ಇದು ನಮ್ಮದೇ ದೇಶದ ಬಡವರ 'ಕಾನೂನುಬಾಹಿರ' ಕಾಲೋನಿಗಳನ್ನು ರಿಯಲ್ ಎಸ್ಟೇಟ್ ಮಾಫಿಯಾಗಳ ಪರವಾದ ಸರ್ಕಾರ ಧ್ವಂಸ ಮಾಡುವ 'ಕಾರ್ಯಾಚರಣೆ'ಗಳ ಕ್ರೌರ್ಯಕ್ಕಿಂತ ಭಾರೀ ಹೆಚ್ಚಿನದೇನಲ್ಲ. ಪ್ಯಾಲೆಸ್ತೀನಿ ಜನರ ಇಂತಹ ಬವಣೆಗಳ ಚಿತ್ರಣವನ್ನು ನಮ್ಮ ಮುಂದಿಡುತ್ತಲೇ, ಪ್ಯಾಲೆಸ್ತೀನ್ ಜನರ ಸಂಘರ್ಷ ಇಷ್ಟು ದೀರ್ಘಕಾಲದಿಂದ ಏಕೆ ನಡೆಯುತ್ತಿದೆ? ಇಂತಹ ಬರ್ಬರತೆಯ ಹಿಂದಿರುವ ಇಸ್ರೇಲಿ ಪ್ರಭುತ್ವದ ಹಿತಾಸಕ್ತಿಗಳು ಯಾವುವು? ಮುಂತಾದ ಮೂಲ ಪ್ರಶ್ನೆಗಳ ಬಗ್ಗೆ ಒಂದು ಡಾಕ್ಯುಮೆಂಟರಿ ಚಿತ್ರದಲ್ಲಿ ನಿರೀಕ್ಷಿಸಬಹುದಾದ ಕನಿಷ್ಟ ಪ್ರಸ್ತಾಪವೂ ಕಂಡು ಬರುವುದಿಲ್ಲ. ವಿಶ್ವಸಂಸ್ಥೆಯ ಇಸ್ರೇಲಿ–ಪರ ಪ್ಯಾಲೆಸ್ತೀನಿ–ವಿರೋಧಿ ಖಾಜಿ ನ್ಯಾಯದ ಹಿಂದಿರುವ ಅಮೆರಿಕನ್ ಪ್ರಭುತ್ವದ ಪಾತ್ರದ ಬಗೆಗಂತೂ ಗಡಚಿಕ್ಕುವ ಮೌನ ಇದೆ. ಜನಪರವಾಗಿ, ನಿರಾಯುಧರಾದ ಗ್ರಾಮಸ್ಥರೇ ಕೈಗೆತ್ತಿಕೊಳ್ಳುವ ಹೋರಾಟದ ಬಗೆಗಿನ ಇಂಥ ಡಾಕ್ಯುಮೆಂಟರಿ ಚಿತ್ರದಲ್ಲಿ ಇಂತಹ ರಾಜಕೀಯ ಆಯಾಮದ ಪೂರ್ಣ ಗೈರುಹಾಜರಿಯ ರಾಜಕೀಯ, ಕಣ್ಣಲ್ಲಿ ಕಣ್ಣಿಟ್ಟು ನೋಡಿದರೆ ಮಾತ್ರ ಕಾಣುವಂಥದ್ದು. ಆದ್ದರಿಂದ ಕಲಾಸಂವೇದನೆಯ ಜೊತೆಗೆ ರಾಜಕೀಯ ಪ್ರಜ್ಞೆಯನ್ನೂ ಕೂಡಿಸಿ ಸೂಕ್ಷ್ಮವಾಗಿ, ಆಳವಾಗಿ, ನೋಡಿ ಕಂಡುಕೊಳ್ಳಬೇಕಾದ್ದು.

ಕಲಾಸ್ವಾದನೆಯ ಜತೆ ರಾಜಕೀಯ ಎಚ್ಚರ

ಪ್ಯಾಲೆಸ್ತೀನ್ ಜನರ ಪರವಾದ ರಾಜಕೀಯ ಪ್ರಜ್ಞೆಯ ಜನರ ಪಾಲಿಗೆ ಈ ಚಿತ್ರ ತೊಡಕುಗಳ ನಡುವೆಯೂ ಹೇಳಬೇಕಾದ್ದನ್ನು ಹೇಳಲು ಯತ್ನಿಸುವ ವಾಸ್ತವ ಚಿತ್ರ. ಚಿತ್ರವನ್ನು ನೋಡಿದ ಯಹೂದಿ ಸೈನಿಕರ ಪ್ರಕಾರ ಪೋಲೀಸ್/ಸೈನಿಕ ಕಾರ್ಯಾಚರಣೆಯ ಆಕ್ರಮಣದ ಚಿತ್ರಿಕೆಗಳು ಚಿತ್ರಕ್ಕಾಗಿ ಸೃಷ್ಟಿಸಿಕೊಂಡ ಕಲ್ಪಿತ ದೃಶ್ಯಗಳು ಮಾತ್ರ. ಅವರ ಪ್ರಕಾರ 'ಫಿಲ್' ಸತ್ತಿದ್ದು ಗೋಲಿಬಾರ್‌ನಿಂದ ಅಲ್ಲ, ಆಕಸ್ಮಿಕ ಗುಂಡೇಟಿನಿಂದ. ಆಕಾಶದಲ್ಲಿ ನಿಂತು ಮಾನವೀಯತೆ/ಪ್ರಜಾಪ್ರಭುತ್ವದ ಕನಸನ್ನು ಕಾಣಬೇಕೆನ್ನುವ 'ಅಪೊಲಿಟಿಕಲ್' ಸಜ್ಜನರಿಗೆ ಈ ಚಿತ್ರಕೊಡುವ (ಊಹಿಸಬಹುದಾದ) ಸಂದೇಶ 'ಗಡಿಗಳನ್ನು ಮೀರಿದ ಶಾಂತಿಯುತ ಸಹಬಾಳ್ವೆ.'

ಸಾಹಿತ್ಯ, ಸಿನಿಮಾ, ಚಿತ್ರಕಲೆಗಳೂ ಸೇರಿದಂತೆ ಎಲ್ಲ ಕಲಾ ಪ್ರಕಾರಗಳನ್ನೂ ಧನ ಸಹಾಯದ ಮೂಲಕ ತನ್ನ ತೆಕ್ಕೆಗೆ ತೆಗೆದುಕೊಂಡು, ದಮನಿತರ–ಶೋಷಿತರ ಬಾಯಿಂದ ಅಸಂಧಿಗ್ಧವಾಗಿ ವ್ಯಕ್ತವಾಗಬಹುದಾದ ವಾಸ್ತವವನ್ನು ಸಂಧಿಗ್ಧಗೊಳಿಸಿ, ಕಪ್ಪು–ಬಿಳುಪಿನ ನೇರಸತ್ಯವನ್ನು 'ಬೂದುಸತ್ಯ'ವನ್ನಾಗಿಸಿ ದಮನಿತರ–ಶೋಷಿತರ ಬಾಯಲ್ಲಿ ದಮನಕರೇ ಗಟ್ಟಿಯಾಗಿ ಹೇಳುವ ರಾಜಕೀಯದ ಇಂದಿನ 'ಬೂದು ವಿಶ್ವ'ದಲ್ಲಿ ರಾಜಕೀಯ ಎಚ್ಚರವನ್ನಿಟ್ಟುಕೊಂಡು ನೋಡಬೇಕಾದ ಗಮನಾರ್ಹ ಸಾಕ್ಷ್ಯಚಿತ್ರ 'ಫೈವ್ ಬ್ರೋಕನ್ ಕ್ಯಾಮರಾಸ್'

ಹಾಗೆಯೇ ಜನಪರ, ಪ್ರಗತಿಪರ ಎಂಬಂತೆ ತೋರುವ ಸಾಂಸ್ಕೃತಿಕ ಅಭಿವ್ಯಕ್ತಿಗಳನ್ನು ರಾಜಕೀಯದ ಬಗ್ಗೆ ರಾಜಕೀಯ ಎಚ್ಚರವನ್ನಿಟ್ಟುಕೊಂಡು, (ಅದರಲ್ಲೂ ವಿಶೇಷವಾಗಿ, ವಿದೇಶೀ ಮೂಲದ (ಅಮೆರಿಕ–ಯುರೋಪಿನ) ಫೌಂಡೇಶನುಗಳ, ಟ್ರಸ್ಟುಗಳ ಅನುದಾನ, ಸಹಾಯಧನಗಳು ಇದ್ದಾಗಲಂತೂ ಇನ್ನಷ್ಟು ಎಚ್ಚರಿಕೆಯಿಂದ) ಆಸ್ವಾದಿಸಬೇಕಾದ–ವಿಮರ್ಶಿಸಬೇಕಾದ ಅಗತ್ಯ ಇದೆ ಎಂಬುದಕ್ಕೂ ಈ ಚಿತ್ರದ ವೀಕ್ಷಣೆ ಉತ್ತಮ ನಿದರ್ಶನವಾಗಿದೆ. ■



ಆರ್ಥಿಕ ಪರಿಸ್ಥಿತಿ ಕಳವಳಕಾರಿ

ದೇಶದ ಆರ್ಥಿಕ ಪರಿಸ್ಥಿತಿ ಕಷ್ಟಕರವಾಗಿದೆ ಎಂಬುದು ಈಗ ಹೊರಬಂದಿರುವ ಎರಡು ಅಂಕಿ–ಅಂಶಗಳಿಂದ ಕಾಣ ಬರುತ್ತಿದೆ. ಮೊದಲನೆಯದು, ಕೈಗಾರಿಕಾ ಉತ್ಪಾದನಾ ಸೂಚ್ಯಂಕ. ಅದು ನವಂಬರ್ 2015ರಲ್ಲಿ 3.2ಶೇ.ದಷ್ಟು ಸಂಕುಚಿತಗೊಂಡಿದೆ. ಎರಡನೆಯದು, ಚಿಲ್ಲರೆ ಬೆಲೆ ಸೂಚ್ಯಂಕ. ಇದು ಡಿಸೆಂಬರ್‌ನಲ್ಲಿ 5.61ಶೇ. ಏರಿಕೆ ದಾಖಲಿಸಿದೆ.

ಕೈಗಾರಿಕಾ ಉತ್ಪಾದನೆಯ ಸೂಚ್ಯಂಕ ಇಳಿಕೆ ಕಳವಳಕಾರಿ. ಏಕೆಂದರೆ ಸರಕುಗಳ ತಯಾರಿಕೆಯ ವಲಯದಲ್ಲಿ 4.4.ಶೇ. ಇಳಿಕೆಯಾಗಿದೆ, ಬಂಡವಾಳ ಸರಕುಗಳ ವಲಯ 24ಶೇ. ಇಳಿಕೆ ಕಂಡಿದೆ. ಇದು ಹೂಡಿಕೆಗಳು ಬರುತ್ತಿಲ್ಲ ಎಂಬುದರ ಸ್ಪಷ್ಟ ಸೂಚನೆ. ಕೈಗಾರಿಕಾ ಉತ್ಪಾದನೆ ಇಳಿಕೆ ರಫ್ತುಗಳು ಸತತವಾಗಿ ಇಳಯುತ್ತಿರುವದರಿಂದಲೂ ಆಗಿದೆ. ಡಿಸೆಂಬರ್ 2014ರ ನಂತರ ಸತತ 12ನೇ ತಿಂಗಳಲ್ಲೂ ರಫ್ತು ಇಳಿಮುಖಗೊಂಡಿದೆ, 5ಶೇ.ದಷ್ಟು ನಕಾರಾತ್ಮಕ ಬೆಳವಣಿಗೆ ತೋರಿಸುತ್ತಿದೆ. ದೇಶದೊಳಗೂ ಬೇಡಿಕೆ ಇಲ್ಲದ್ದರಿಂದ ಉತ್ಪಾದನೆಗೆ ಉತ್ತೇಜನೆ ಸಿಗುತ್ತಿಲ್ಲ.

ಜಾಗತಿಕವಾಗಿ ಕಾಣುತ್ತಿರುವ ಆರ್ಥಿಕ ನಿಧಾನಗತಿ ನಮ್ಮ ಆರ್ಥಿಕದ ಮೇಲೆ ಮತ್ತು ರಫ್ತುಗಳ ಮೇಲೆ ನೇರ ಪರಿಣಾಮ ಬೀರಿದೆ. 'ಮೇಕ್ ಇನ್ ಇಂಡಿಯಾ'ದ ಬಗ್ಗೆ ಉದ್ದುದ್ದ ಮಾತುಗಳೆಲ್ಲ ಭಾರತಕ್ಕೆ ವಿದೇಶಿ ಬಂಡವಾಳವನ್ನು ಆಕರ್ಷಿಸುವುದರ ಮೇಲೆ ನಿಂತಿವೆ.

> ಕರ್ಷಕ ಸಂಕಟ ಮತ್ತು ಆಹಾರವಸ್ತುಗಳ ಬೆಲೆಗಳು ಏರುತ್ತಿರುವ ಸಂದರ್ಭದಲ್ಲಿ ಜನಗಳಿಗೆ ಸಾರ್ವಜನಿಕ ವಿತರಣಾ ವ್ಯವಸ್ಥೆ ಅತ್ಯಂತ ಅಗತ್ಯ. ಆದರೆ ಆಹಾರ ಭದ್ರತಾ ಕಾನೂನನ್ನು ಜಾರಿ ಮಡುತ್ತಿರುವ ರೀತಿ ನೋಡಿದರೆ ಬಡಜನರ ಸ್ಥಿತಿ ಚಿಂತಾಜನಕವಾಗಿ ಕಾಣುತ್ತದೆ.

ಆದರೆ ಜಾಗತಿಕ ಅರ್ಥಿಕ ಪರಿಸ್ತಿತಿಯನ್ನು ನೋಡಿದರೆ ಇದು ಸಾಧ್ಯವಾಗುವ ಸಂಭವ ಕಡಿಮೆ. ವಿದೇಶಿ ಹಣ ಕೇವಲ ಸಟ್ಟಾಕೋರ ಹಣಕಾಸು ವಲಯಗಳು, ಶೇರು ಮಾರುಕಟ್ಟೆಗಳು ಮತ್ತು ಕರೆನ್ಸಿ ಮಾರುಕಟ್ಟೆಗಳಿಗೆ ಮಾತ್ರ ಬರುತ್ತಿದೆ.

ಭಾರತದ್ದು ಜಗತ್ತಿನಲ್ಲೇ ಅತ್ಯಂತ ವೇಗವಾಗಿ ಬೆಳೆಯುತ್ತಿರುವ ಆರ್ಥಿಕ ವ್ಯವಸ್ಥೆ ಎಂದು ಮೋದಿ ಸರಕಾರ ಹೇಳಿಕೊಳ್ಳುತ್ತಿದೆ. ಆದರೆ ಈ ಹಿಂದೆ ಜಿಡಿಪಿ ಬೆಳವಣಿಗೆ ದರ 8ರಿಂದ 8.5ಶೇ. ಇರುತ್ತದೆ ಎಂದು ಲೆಕ್ಕ ಹಾಕಿದ್ದನ್ನು ಸರಕಾರದ ವರ್ಷದ ಮಧ್ಯಂತರ ವಿಮರ್ಶೆಯಲ್ಲಿ 7.2ಶೇ. ಇರುತ್ತದೆ(ಬಜೆಟ್ ವೇಳೆಗೆ) ಎನ್ನಲಾಗಿದೆ. ಆದರೆ ಇದೂ ಸಂದೇಹಾಸ್ಪದ. ಏಕೆಂದರೆ ಈ ಅಂಕಿ–ಅಂಶಗಳು ಬುಡಮಟ್ಟದ ವಾಸ್ತವತೆಗಳಿಗೆ ಅನುಗುಣವಾಗಿರುವಂತೆ ಕಾಣುತ್ತಿಲ್ಲ–ಕೈಗಾರಿಕಾ ಉತ್ಪಾದನೆಯಲ್ಲೂ, ಕೃಷಿ ಉತ್ಪಾದನೆಯಲ್ಲೂ.

2016ರಲ್ಲಿ ಜಾಗತಿಕ ಆರ್ಥಿಕ ಹಿಂಜರಿತದ ಲಕ್ಷಣಗಳಿರುವಾಗ, ಮೋದಿ ಸರಕಾರ ತನ್ನ ದಿವಾಳಿಕೋರ ಧೋರಣೆಗಳ ವಿಮರ್ಶೆ ಮಾಡಬೇಕಾಗುತ್ತದೆ. ಈಗ ಸಾರ್ವಜನಿಕ ಹೂಡಿಕೆಯನ್ನು ಹೆಚ್ಚಿಸಬೇಕಾಗಿದೆ. ಆದರೆ ಅದಕ್ಕೆ ಸಂಪನ್ಮೂಲ ಸಂಗ್ರಹಿಸಲು ಶ್ರೀಮಂತರ ಮೇಲೆ ತೆರಿಗೆ ಹಾಕಬೇಕಾಗುತ್ತದೆ ಮತ್ತು ಸಾರ್ವಜನಿಕ ಖರ್ಚುಗಳಲ್ಲಿ ಕಡಿತ ಮಾಡುವುದನ್ನು ನಿಲ್ಲಿಸಬೇಕಾಗುತ್ತದೆ. ಆದರೆ ಸಂಪ್ರದಾಯಶರಣ ಹಣಕಾಸು ನಂಬಿಕೆಗಳಿಗೆ ಬದ್ಧವಾಗಿರುವ ಈ ಸರಕಾರ ಮುಂಬರುವ ಬಜೆಟಿನಲ್ಲಿ ಇದನ್ನು ಮಾಡಬಹುದು ಎಂಬ ಸಂಕೇತಗಳೇನೂ ಇಲ್ಲ.

ಚಿಲ್ಲರೆ ಹಣದುಬ್ಬರ ಕಳೆದ ಒಂಭತ್ತು ತಿಂಗಳಲ್ಲೇ ಅತಿ ಹೆಚ್ಚು ಮಟ್ಟವನ್ನು ತಲುಪಿದೆ. ಇದು ಮುಖ್ಯವಾಗಿ ಆಹಾರದ ಬೆಲೆಗಳಲ್ಲಿ ತೀವ್ರ ಏರಿಕೆಯಿಂದಾಗಿ ಆಗಿದೆ. ಬೇಳೆಕಾಳುಗಳ ಬೆಲೆಗಳಲ್ಲಿ 46ಶೇ. ಏರಿಕೆಯಾಗಿದೆ. ಮುಂಗಾರು ಬೆಳೆಗಳ ಉತ್ಪಾದನೆ 3ಶೇ.ದಷ್ಟು ಇಳಿದಿದೆ. ಎರಡು ಸತತ ಬರದ ವರ್ಷಗಳಿಂದಾಗಿ ಈ ವರ್ಷ ಕೃಷಿ ಬೆಳವಣಿಗೆಯ ಸಂಭವವೂ ಕಡಿಮೆ. ಅಂದರೆ ಆಹಾರವಸ್ತುಗಳ ಬೆಲೆಗಳು ಸಡಿಲಗೊಳ್ಳಬಹುದು ಎಂಬ ಸಂಕೇತಗಳೂ ಇಲ್ಲ.

ಇಂತಹ ಕರ್ಷಕ ಸಂಕಟ ಮತ್ತು ಆಹಾರವಸ್ತುಗಳ ಬೆಲೆಗಳು ಏರುತ್ತಿರುವ ಸಂದರ್ಭದಲ್ಲಿ ಜನಗಳಿಗೆ ಸಾರ್ವಜನಿಕ ವಿತರಣಾ ವ್ಯವಸ್ಥೆ ಅತ್ಯಂತ ಅಗತ್ಯ. ಆದರೆ ಆಹಾರ ಭದ್ರತಾ ಕಾನೂನನ್ನು ಜಾರಿ ಮಡುತ್ತಿರುವ ರೀತಿ ನೋಡಿದರೆ ಬಡಜನರ ಸ್ಥಿತಿ ಚಿಂತಾಜನಕವಾಗಿ ಕಾಣುತ್ತದೆ. ಈ ಕಾನೂನನ್ನು ಸಪ್ಟಂಬರ್ 2013ರಲ್ಲಿ ಅಂಗೀಕರಿಸಲಾಯಿತು. ಅದು ಗ್ರಾಮೀಣ ಪ್ರದೇಶಗಳಲ್ಲಿ 75ಶೇ. ಮತ್ತು ನಗರ ಪ್ರದೇಶಗಳಲ್ಲಿ 50ಶೇ., ಒಟ್ಟಾಗಿ ಸರಾಸರಿ 67ಶೇ. ಜನಸಂಖ್ಯೆಯನ್ನು ಒಳಗೊಳ್ಳುವಂತದ್ದು. ಆದರೆ ಅದನ್ನು ಇನ್ನೂ ದೇಶಾದ್ಯಂತ ಜಾರಿಗೆ ತಂದಿಲ್ಲ. 11 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳು ಅದನ್ನು ಇನ್ನು ಜಾರಿಗೆ ತರಬೇಕಾಗಿದೆಯಷ್ಟೇ. ಕೆಲವು ಕೇವಲ ಭಾಗಶಃ ಮಾಡಿವೆ. ಬಿಜೆಪಿ ನೇತೃತ್ವದ ಸರಕಾರ ಅಧಿಕಾರ ವಹಿಸಿಕೊಂಡ ಮೇಲೆ ರಾಜ್ಯಗಳಿಗೆ ಇದರ ಜಾರಿಗೆ ಮೂರು ಬಾರಿ ದಿನಾಂಕಗಳನ್ನು ವಿಸ್ತರಿಸಲಾಗಿದೆ. ಈಗ ಇದರ ಜಾರಿಗೆ ಕೊನೆಯ ದಿನಾಂಕವನ್ನು ಎಪ್ರಿಲ್ 1, 2016ಕ್ಕೆ ಇಡಲಾಗಿದೆ. ಈ ಕಾನೂನಿನ ಅರೆಬರೆ ಜಾರಿಯಿಂದಾಗಿ ಆಹಾರ ವಸ್ತುಗಳ ವಿತರಣೆಯೂ ಸೀಮಿತಗೊಳ್ಳುತ್ತದೆ, ಅಲ್ಲದೆ ತಪ್ಪು ಅರ್ಹತಾ ಮಾನದಂಡಗಳಿಂದಾಗಿ ಹಲವರನ್ನು ಇದರಿಂದ ಹೊರಗಿಡಲಾಗುತ್ತದೆ.

ಇಂತಹ ಸಮಯದಲ್ಲಿ ಸರಿಯಾದ ಸಾರ್ವಜನಿಕ ವಿತರಣಾ ವ್ಯವಸ್ಥೆಯ ಅಭಾವದಿಂದಾಗಿ ಗ್ರಾಮೀಣ ಬಡವರು ತೆರಬೇಕಾದ ಬೆಲೆ ಏನೆಂಬುದಕ್ಕೆ ಉತ್ತರಪ್ರದೇಶದ ಬುಂದೇಲಖಂಡದಲ್ಲಿ ಬಡವರ ಶೋಚನೀಯ ಪರಿಸ್ಥಿತಿ ಒಂದು ಮನಕಲಕುವ ಉದಾಹರಣೆ. ಸಾರ್ವಜನಿಕ ವಿತರಣಾ ವ್ಯವಸ್ಥೆಗೆ ಸಂಬಂಧಪಟ್ಟಂತೆ ಅತ್ಯಂತ ಕೆಟ್ಟ ಪರಿಸ್ಥಿತಿಯಿರುವ ರಾಜ್ಯಗಳಲ್ಲಿ ಉತ್ತರ ಪ್ರದೇಶವೂ ಒಂದು. ಇಲ್ಲಿ ಆಹಾರ ಪೂರೈಕೆಯಲ್ಲಿ ಬಹುಭಾಗ ಭ್ರಷ್ಟ ಅಧಿಕಾರಿಗಳು ಮತ್ತು ವ್ಯಾಪಾರಿಗಳ ಪಾಲಾಗುತ್ತದೆ. ಆಹಾರ ಭದ್ರತಾ ಕಾನೂನು ಸರಿಯಾಗಿ ಜಾರಿಯಾಗಿದ್ದರೆ ಬುಂದೇಲಖಂಡದ 80 ಶೇ. ಜನತೆ ಇದರ ವ್ಯಾಪ್ತಿಗೆ ಬರುತ್ತಿದ್ದರು. ಬದಲಾಗಿ, ಬರವನ್ನು ಎದುರಿಸುತ್ತಿರುವ ಇಲ್ಲಿನ ಬಡವರನ್ನು ಹಸಿವನ್ನು ಹಿಂಗಿಸಲು ಹುಲ್ಲು ತಿನ್ನಬೇಕಾದ ಪರಿಸ್ಥಿತಿಗೆ ಇಳಿಸಲಾಗಿದೆ.

ಮೋದಿ ಸರಕಾರ ಆಹಾರ ಭದ್ರತಾ ಕಾನೂನನ್ನು ಸರಿಯಾಗಿ ಜಾರಿಗೆ ತರಲು ಯಾವುದೇ ತುರ್ತನ್ನು ತೋರಿಲ್ಲ. ಬಹುಶಃ ಅದಕ್ಕೆ ಹಣಕಾಸು ಕೊರತೆಯನ್ನು ಕಡಿತ ಮಾಡುವ ತನ್ನ ಗೀಳಿನಿಂದಾಗಿ ಈ ಕಾನೂನು ಜಾರಿಯಾಗದೆ ಆಹಾರ ಸಬ್ಸಿಡಿಗೆಂದು ನೀಡಿರುವ ಹಣ ಖರ್ಚಾಗದೆ ಉಳಿದರೆ ಪರವಾಗಿಲ್ಲ, ಒಳ್ಳೆಯದೇ ಎಂದನಿಸಿರಬಹುದು.

ಆರ್ಥಿಕ ನಿಧಾನಗತಿಯನ್ನು ನಿಲ್ಲಿಸಿ ಬೇಡಿಕೆಗೆ ಮತ್ತೆ ಉತ್ತೇಜನೆ ದೊರೆಯುವಂತಾಗಬೇಕಾದರೆ ಮೂಲರಚನೆ ಮತ್ತು ಕೃಷಿಯಲ್ಲಿ ಸಾರ್ವಜನಿಕ ಹೂಡಿಕೆ ಗಮನಾರ್ಹವಾಗಿ ಹೆಚ್ಚಬೇಕು. ಅದರೊಂದಿಗೆ ಗ್ರಾಮೀಣ ಸಂಕಟವನ್ನು ಪರಿಹರಿಸಬೇಕಾದರೆ ಸಾಮಾಜಿಕ ವಲಯದ ಖರ್ಚುಗಳಿಗೆ ಮತ್ತು ಆಹಾರ ಭದ್ರತೆಗೆ ಮತ್ತು ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಕಾನೂನಿನ ಜಾರಿಗೆ ಹೆಚ್ಚಿನ ಹಣ ಒದಗಿಸ ಬೇಕಾಗುತ್ತದೆ. ●

> ಕೈಗಾರಿಕಾ ಉತ್ಪಾದನೆಯ ಸೂಚ್ಯಂಕ ಇಳಿಯುತ್ತಲೇ ಇದೆ. ಅದೇ ವೇಳೆಗೆ ಚಿಲ್ಲರೆ ಬೆಲೆ ಸೂಚ್ಯಂಕ ಏರುತ್ತಲೇ ಇದೆ, ಮುಖ್ಯವಾಗಿ ಆಹಾರವಸ್ತುಗಳ ಬೆಲೆಗಳಲ್ಲಿ ಸತತ ಏರಿಕೆಗಳಿಂದಾಗಿ. ಅಲ್ಲದೆ 2016ರಲ್ಲಿ ಜಾಗತಿಕ ಆರ್ಥಿಕ ಹಿಂಜರಿತದ ಲಕ್ಷಣಗಳಿವೆ. ಇಂತಹ ಸನ್ನಿವೇಶದಲ್ಲಿ ಮೋದಿ ಸರಕಾರ ತನ್ನ ದಿವಾಳಿಕೋರ ಧೋರಣೆಗಳ ವಿಮರ್ಶೆ ಮಾಡಬೇಕಾಗುತ್ತದೆ. ಆದರೆ ಶ್ರೀಮಂತ–ಪರ ಹಣಕಾಸು ನಮಬಿಕೆಗಳಿಗೆ ಬದ್ಧವಾಗಿರುವ ಈ ಸರಕಾರ ಮುಂಬರುವ ಬಜೆಟಿನಲ್ಲಿ ಇದನ್ನು ಮಾಡಬಹುದು ಎಂಬ ಸಂಕೇತಗಳೇನೂ ಇಲ್ಲ.



ಪ್ರಕಾಶ ಕಾರಟ್

ಗಜೇಂದ್ರಗಡದಲ್ಲಿ ಅತ್ಯಾಚಾರಿ ಆರೋಪಿಗೆ ಕಠಿಣ ಶಿಕ್ಷೆ ನೀಡಲು ಆಗ್ರಹಿಸಿ ಪ್ರತಿಭಟನೆ



ಮಹಿಳೆಯ ಮೇಲೆ ಅತ್ಯಾಚಾರವೆಸಗಿ ಪರಾರಿಯಾದ ಆರೋಪಿ ರವಿ ಸಿದ್ದಪ್ಪ ಬಂಡಿ ಬಂಧನವಾಗಿದ್ದು ಕಠಿಣ ಶಿಕ್ಷೆ ನೀಡಬೇಕೆಂದು ಒತ್ತಾಯಿಸಿ ಎಸ್‌ಎಫ್‌ಐ, ಡಿವೈಎಫ್‌ಐ ಹಾಗೂ ಕರ್ನಾಟಕ ಪ್ರಾಂತ ಕೃಷಿಕೂಲಿಕಾರರ ಸಂಘಟನೆಗಳ ಜಂಟಿ ನೇತೃತ್ವದಲ್ಲಿ ಗದಗ ಜಿಲ್ಲೆಯ ಗಜೇಂದ್ರಗಢದಲ್ಲಿ ಜನವರಿ 13ರಂದು ಪ್ರತಿಭಟನೆ ನಡೆಸಲಾಯಿತು.

ಬರ್ಹಿದೆಸೆಗೆ ತೆರಳಿದ್ದ ಮಹಿಳೆಯ ಬಾಯಿ ಮುಚ್ಚಿ ಹೊತ್ತುಕೊಂಡು ಹೋದ ಆರೋಪಿಯು ಹತ್ತಿರವಿರುವ ಅಮ್ಮನ ಕೆರೆಯಲ್ಲಿ ಅತ್ಯಾಚಾರವೆಸಗಿ ಪರಾರಿಯಾದ ಅಮಾನುಷ ಘಟನೆ ನೆಡೆದಿದೆ. ಅತ್ಯಾಚಾರಿಯು ಉಣಚಗೇರಿಯ ನಿವಾಸಿಯಾಗಿದ್ದು ಈ ಹಿಂದೆಯು ಇದೇ ರೀತಿ ಹಲವು ಅಪರಾಧ ಕೃತ್ಯಗಳಲ್ಲಿ ಹಳ್ಳಿಯರಿಂದ ಧರ್ಮದೇಟು ತಿಂದರೂ ಬುದ್ದಿ ಕಲಿಯದ ಈತ ಮತ್ತೊಂದು ಹೀನ ಕೃತ್ಯವೆಸಗಿರುವುದು ಮಹಿಳೆಯರಲ್ಲಿ ಇನ್ನಷ್ಟು ಆತಂಕ ಸೃಷ್ಟಿಸಿವೆ. ಇದರ ಪರಿಣಾಮದ ಭಾಗವಾಗಿಯೇ ಈ ಘಟನೆ ಸಂಭವಿಸಿದೆ. ಸುಲಭ ಶೌಚಾಲಯ ಕಟ್ಟಿಸಿ 4 ವರ್ಷ ಕಳೆದರೂ ಅದಕ್ಕೆ ಮೂಲಭೂತ ಸೌಲಭ್ಯ ನೀಡದೇ ಇರುವುದಕ್ಕೆ ಪುರಸಭೆಯ ಆಡಳಿತದ ವೈಖರಿಯೇ ಕಾರಣ.

ಪ್ರತಿಭಟನೆಯನ್ನು ಉದ್ದೇಶಿಸಿ ಡಿವೈಎಫ್‌ಐನ ಜಿಲ್ಲಾ ಸಂಚಾಲಕ ಪೀರು ರಾಠೋಡ ಮಾತನಾಡಿ ಸ್ಥಳಿಯ ಉಣಚಗೇರಿ ಜನತಾ ಪ್ಲಾಟನಲ್ಲಿ ಬಹಿರ್ದೆಸೆಗೆ ಮಹಿಳೆಯರಿಗೆ ಸುಲಭ ಶೌಚಾಲಯದ ವ್ಯವಸ್ಥೆ ಇಲ್ಲದೇ ಇರುವುದರಿಂದ ಕತ್ತಲಲ್ಲಿ ಬಯಲು ಶೌಚಾಲಯವನ್ನೆ ಅವಲಂಬಿಸಬೇಕಾದ ದುರ್ಗತಿ ಎದುರಾಗಿದೆ. ಆದರೂ ಪುರುಸಭೆ ಆಡಳಿತ ಕಣ್ಣು ಮುಚ್ಚಿಕೊಂಡು ಕುಳಿತಿರುವುದು ಈ ಘಟನೆಗೆ ಕುಮ್ಮಕ್ಕು ನೀಡಿದಂತಿದೆ.

ಗಜೇಂದ್ರಗಡದ ಹಲವು ವಾರ್ಡಗಳಲ್ಲಿ ಮಹಿಳಾ ಶೌಚಾಲಯ ಇಲ್ಲದೇ ಇತಂಹ ಘಟನೆಗಳು ನಡೆ–ಯುತ್ತಿದ್ದು ಬೆಳಕಿಗೆ ಬಾರದೆ ಮಾನ ಮರ್ಯಾದೆಗೆ ಅಂಜಿ ತಮ್ಮ ಮೇಲಿನ ದೌರ್ಜನ್ಯ, ಪ್ರಕರಣಗಳನ್ನು ನಡೆದರೂ ನಡೆಯದಂಗೆ ಬದುಕು ಸಾಗಿಸುವಂತಾಗಿದೆ. ಮಹಿಳೆಯರು ಇಂತಹ ಘಟನೆಗಳಿಗೆ ಹೆದರದೆ ಆರೋಪಿಗಳು ವಿರುದ್ಧ ಸಿಡಿದೇಳ ಬೇಕೆಂದು ಒತ್ತಾಯಿಸಿದರು.

ಈ ಸಂದರ್ಭದಲ್ಲಿ ಸಿಪಿಐ(ಎಂ)ನ ಪುರಸಭಾ ಸದಸ್ಯ ಎಂ ಎಸ್ ಹಡಪದ ಮಾತನಾಡಿ ಇಂತಹ ಘಟನೆಗಳು ಎಲ್ಲಿಯೂ ಕೂಡಾ ನಡೆಯಬಾರದು. ಮೂಲ ಸೌಕರ್ಯಕ್ಕಾಗಿ ಹಲವು ಬಾರಿ ಅಲ್ಲಿಯ ಜನರು ಸಂಘಟನೆಗಳ ನೇತೃತ್ವದಲ್ಲಿ ಪ್ರತಿಭಟನೆ ಮಾಡಿ ಮನವಿ ಕೊಟ್ಟರೂ ಆಡಳಿತಕ್ಕ ಕಣ್ಣು ಕಾಣದಂದತಾಗಿದೆ. ಈಗಲಾದರೂ ಮಹಿಳೆಯರಿಗೆ ರಕ್ಷಣೆ ಕೊಡುವ ನಿಟ್ಟನಲ್ಲಿ ಕೆಲಸ ಮಾಡಬೇಕೆಂದು ಒತ್ತಾಯಿಸಿದರು.

ಈ ಸಂದರ್ಭದಲ್ಲಿ ಕೃಷಿಕೂಲಿಕಾರರ ತಾಲೂಕಾ ಅಧ್ಯಕ್ಷ ಬಾಲು ರಾಠೋಡ ಮಾತನಾಡಿದರು. ಪ್ರತಿಭಟನೆಯಲ್ಲಿ ಸಂಘಟನೆಗಳ ಮುಖಂಡರಾದ ಮಾರುತಿ ಚಿಟಗಿ, ಎಂ.ಬಿ ಸೊಂಪೂರ, ಶಿವಾಜಿ ಗಡ್ಡದ, ಮಾನವ್ವ ರಾಠೋಡ, ಫಯಾಜಹ್ಮದ ತೆ–ಊಟದ, ಸಾವಿತ್ರಿ ಲಮಾಣಿ, ಮಾನವ್ವ ರಾಠೋಡ, ಹನಮವ್ವ ಮಾತಿನ, ಶೋಭಾ ಚವ್ಹಾಣ, ರತ್ನಾ ಬಡೀಗೇರ, ಸೋನವ್ವ ರಾಠೋಡ, ಮುತ್ತು ಲಮಾಣಿ ಯಮನೂರಪ್ಪ, ಯಲ್ಲಪ್ಪ ಗದ್ದಿ, ಪರಶು ಗದ್ದಿ, ಶರಣು ಕಿಟಗೇರಿ, ಶಿವು ಚವ್ಹಾಣ, ಶಂಕರಗೌಡ ಗೌಡ್ರ, ವಿರೇಶ ಬಡಿಗೇರ, ಶಿಲ್ಪಾ ಪೂಜಾರ ಮುಂತಾದವರು ಪಾಲ್ಗೊಂಡಿದ್ದರು. ●

ಹೆಲಿಕಾಪ್ಟರ್ ತೋರಿಸಿ ವಾಚು ಮಾಯ ಮಾಡಿದ ತುಮಕೂರಿನ 'ಮೇಕ್ ಇನ್ ಇಂಡಿಯಾ' ಜಾದೂ

ಕೆ.ಈ. ಸಿದ್ದಯ್ಯ

ಇತ್ತೀಚೆಗೆ ತುಮಕೂರಿನಲ್ಲಿ ಒಂದು ಜಾದೂ ಕಾರ್ಯಕ್ರಮ ನಡೆಯಿತು. ಅದರ ಹೆಸರು 'ಮೇಕ್ ಇನ್ ಇಂಡಿಯಾ'. ಅದನ್ನು ಮಾಡಿದ್ದು ನಮೋ ಜಾದೂಗಾರ. ತುಮಕೂರಿನ ಜನಕ್ಕೆ ಆಕಾಶ ತೋರಿಸಿ ನಿಮ್ಮ ಊರಿನಲ್ಲಿ ತಯಾರಿಸಿದ ಹೆಲಿಕಾಪ್ಟರ್ ಅಲ್ಲಿ ಹಾರಲಿದೆ ಎಂದ. ಜನ ಭಾರೀ ಚಪ್ಪಾಳೆ ಹೊಡೆದರು. ಆಕಾಶದಲ್ಲಿ ಹೆಲಿಕಾಪ್ಟರ್ ಆಗಲಿ ನೆಲದಲ್ಲಿ ಕಾರ್ಖಾನೆಯಾಗಲಿ ಇರಲಿಲ್ಲ. ಆದರೂ ಜಾದುಗಾರನ ಜಾದೂಗೆ ಜನ ಚಪ್ಪಾಳೆ ಹೊಡೆದಿದ್ದರು. ಜಾದೂಗಾರ ಹೋದ 3–4 ದಿನಗಳ ನಂತರ ಎಚ್.ಎಂ.ಟಿ. ಅಂತಿಮವಾಗಿ ಮುಚ್ಚುವ ನಿರ್ಧಾರವನ್ನು ಕೇಂದ್ರ ಸಚಿವ ಸಂಪುಟ ಕೈಗೊಂಡಿದೆ ಎಂಬ ಸುದ್ದಿ ಬಂತು. ಎಚ್.ಎ.ಎಲ್.ಗೆ ಹಾಕಿದ 'ಕಲ್ಲು' ಮಾತ್ರ ಇತ್ತು. ಇಲ್ಲ. 600 ಎಕ್ರೆ ಭೂಮಿಯನ್ನು ಜಿಲಾಧಿಕಾರಿಗಳು ಎಚ್.ಎ.ಎಲ್.ಗೆ ಕೊಟ್ಟಿದ್ದಷ್ಟೇ ಈ ವರೆಗಿನ ವಾಸ್ತವ. 'ವಾಚ್‌ನಲ್ಲಿ ಹೋದ ಮಾನ, ಹೆಲಿಕಾಪ್ಟರಿನಿಂದ ಬರಬಹುದು' ಅಂದುಕೊಂಡಿರಬೇಕು ಜನ!

ತುಮಕೂರಿನ ಪ್ರತಿಷ್ಠಿತ ಎಚ್.ಎಂ.ಟಿ (ಹಿಂದೂಸ್ಥಾನ್ ಮೆಷಿನ್ ಟೂಲ್ಸ್) ವಾಚ್ ಕಂಪನಿಯ ಕಾರ್ಖಾನೆಯ ಬಾಗಿಲು ಸದ್ಯಕ್ಕೆ ಮುಚ್ಚಲಿದೆ. ಕೇಂದ್ರ ಸರ್ಕಾರ ಎಲ್ಲಾ ಎಚ್.ಎಂ.ಟಿ ವಾಚ್ ಕಾರ್ಖಾನೆಗಳನ್ನು ಮತ್ತು ಎಚ್.ಎಂ.ಟಿ ಬೇರಿಂಗ್ಸ್ ಕಾರ್ಖಾನೆಯನ್ನು ಮುಚ್ಚಲು ಆದೇಶಿಸಿದೆ. 1961ರಲ್ಲಿ ಸ್ಥಾಪನೆಯಾದ ಸಾರ್ವಜನಿಕ ಉದ್ದಿಮೆ ಎಚ್.ಎಂ.ಟಿ. ವಾಚ್ ಕಂಪನಿ ಇದೀಗ ಶಾಶ್ವತವಾಗಿ ಮುಚ್ಚಿ ಹೋಗಲಿದ್ದು ಕಾಲಗರ್ಭ ಸೇರಲಿದೆ.

ತುಮಕೂರಿನ ಎಪಿಎಂಸಿ ಮಾರುಕಟ್ಟೆ ಪಕ್ಕ ಹಾಗೂ ಅಗ್ನಿಶಾಮಕ ಠಾಣೆ ಎದುರು 120 ಎಕರೆ ಪ್ರದೇಶದಲ್ಲಿ ಹರಡಿಕೊಂಡಿರುವ ಎಚ್.ಎಂ.ಟಿ ವಾಚ್ ಕಾರ್ಖಾನೆ ಒಂದು ಕಾಲಕ್ಕೆ 'ದೇಶದ ಸಮಯ ಪಾಲಕ' ಎಂದು ಜನಜನಿತ ಆಗಿತ್ತು. ಶ್ರೀನಗರ, ಬೆಂಗಳೂರು ಮತ್ತು ತುಮಕೂರು, ರಾಣಿಭಾಗ್ ಹೀಗೆ ನಾಲ್ಕು ಕಡೆ ಎಚ್.ಎಂ.ಟಿ. ಕೈಗಡಿಯಾರ ಕಾರ್ಖಾನೆಗಳು ಕೆಲಸ ನಿರ್ವಹಿಸುತ್ತಿದ್ದವು. ಇವುಗಳ ಪೈಕಿ ತುಮಕೂರು ಎಚ್.ಎಂ.ಟಿ. ಕಾರ್ಖಾನೆ ನಾಲ್ಕನೆಯ ಘಟಕವಾಗಿ 1978ರಲ್ಲಿ ಸ್ಥಾಪನೆಯಾಗಿ, ಇತ್ತೀಚಿನ ವರ್ಷಗಳಲ್ಲಿ ಅತ್ಯಂತ ಸಕ್ರಿಯವಾಗಿದ್ದ ಘಟಕ. ಪೂರ್ಣ ಉತ್ಪಾದನೆ ಮಾಡುತ್ತಿದ್ದಾಗ 2180 ಕಾರ್ಮಿಕರನ್ನು ಹೊಂದಿತ್ತು. 10 ಸಾವಿರಕ್ಕೂ ಹೆಚ್ಚು ಕಾರ್ಮಿಕರಿಗೆ ಪರೋಕ್ಷ ಉದ್ಯೋಗ ಒದಗಿಸಿತ್ತು.

4 ಕೋಟಿ ವಾಚು ತಯಾರಿಸಿದ ಘಟಕ

ತುಮಕೂರು ಕಾರ್ಖಾನೆ ವರ್ಷಕ್ಕೆ ಸುಮಾರು 20 ಲಕ್ಷ ವಾಚು ತಯಾರಿಸುವ ಸಾಮರ್ಥ್ಯ ಹೊಂದಿತ್ತು. 1978ರಿಂದ 2013–14 ವರೆಗೆ ರೂ. 1350 ಕೋಟಿ ಮೌಲ್ಯದ ಸುಮಾರು 4 ಕೋಟಿ ವಾಚುಗಳನ್ನು ತಯಾರಿಸಿದೆ. ಆರಂಭದಲ್ಲಿ ಕೀಲಿ ಕೊಡುವ ಮತ್ತು ಅಟೊಮ್ಯಾಟಿಕ್ ಗಡಿಯಾರಗಳ ಬಿಡಿಭಾಗಗಳ ತಯಾರಿಯಲ್ಲಿ ತೊಡಗಿದ್ದು, 1986ರಲ್ಲಿ ಕ್ವಾರ್ಟ್ಸ್ ವಾಚುಗಳ ತಯಾರಿಕೆಯನ್ನು ಆರಂಭಿಸಿತ್ತು. 1990ರ ದಶಕದಲ್ಲಿ ಕ್ವಾರ್ಟ್ಸ್ ವಾಚುಗಳ ಮುಖ್ಯ ಉತ್ಪಾದನಾ ಘಟಕವಾಗಿತ್ತು. 2005ರ ಹೊತ್ತಿಗೆ ಹೆಚ್ಚಿನ ಉತ್ಪಾದನಾ ಚಟುವಟಿಕೆಗಳನ್ನು ಬೆಂಗಳೂರು ಮತ್ತು ಇತರ ಘಟಕಗಳಿಂದ ತುಮಕೂರಿಗೆ ವರ್ಗಾಯಿಸಿಲಾಗಿತ್ತು.

ದೇಶದ ಸ್ವಾತಂತ್ರ್ಯದ ನಂತರದ 2–3 ದಶಕಗಳಲ್ಲಿ ಸಾರ್ವಜನಿಕ ಕ್ಷೇತ್ರದ ಕಾರ್ಖಾನೆಗಳು 'ಆಧುನಿಕ ಭಾರತದ ದೇವಾಲಯಗಳು' ಎಂಬ ಉನ್ನತ ಸ್ಥಾನ ನೀಡಿ, ಕೈಗಾರಿಕಾ ಸ್ವಾವಲಂಬನೆ ಸ್ಥಾಪಿಸುವ ನೀತಿ ಅನುಸರಿಸಲಾಗುತ್ತಿತ್ತು. 'ಮೇಡ್ ಇನ್ ಇಂಡಿಯಾ' ಘೋಷಣೆಯನ್ನು ನಿಜವಾಗಿಯೂ ಬಹಳ ಮಟ್ಟಿಗೆ ಜಾರಿ ಮಾಡಲಾಗಿತ್ತು. ಎಚ್.ಎಂ.ಟಿ ಸೇರಿದಂತೆ ಕರ್ನಾಟಕದ ಹೆಮ್ಮೆಯ ಸಾರ್ವಜನಿಕ ಕ್ಷೇತ್ರದ ಕಾರ್ಖಾನೆಗಳನ್ನು ಈ ಅವಧಿಯಲ್ಲಿ ಸ್ಥಾಪಿಸಲಾಗಿತ್ತು. 1980ರ ದಶಕದ ಮಧ್ಯಭಾಗದಲ್ಲಿ ಐ.ಎಂ.ಎಫ್. ಸಾಲದೊಂದಿಗೆ ಉದಾರೀಕರಣದ ನೀತಿಗಳು ಆರಂಭವಾದವು. 1990–1992ರ ಹೊತ್ತಿಗೆ ಪಿ.ವಿ.ನರಸಿಂಹರಾವ್–ಮನಮೋಹನ ಸಿಂಗ್ ನೇತೃತ್ವದ ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ಜಾಗತಿಕರಣ, ಉದಾರೀಕರಣ ಮತ್ತು ಖಾಸಗೀಕರಣದ ನೀತಿಗಳ ಪೂರ್ಣ ಜಾರಿಯಾಗುತ್ತಿದ್ದಂತೆ ದೇಶದ ಸಾರ್ವಜನಿಕ ಉದ್ದಿಮೆಗಳು ಸೊರಗತೊಡಗಿದವು. ಈ ಅವಧಿಯಲ್ಲಿ ಎಚ್.ಎಂ.ಟಿ. ಕಾರ್ಮಿಕರಿಗೆ ನೀಡುತ್ತಿದ್ದ ಗೃಹ ಸಾಲವನ್ನು ನಿಲ್ಲಿಸಿದ್ದು ಗಾಳಿ ಎತ್ತ ಬೀಸುತ್ತಿದೆ ಎಂಬುದನ್ನು ಸೂಚಿಸುವಂತಿತ್ತು.


ವಾಜಪೇಯಿ ನೇತೃತ್ವದ ಎನ್‌ಡಿಎ ಸರ್ಕಾರದ ಅವಧಿಯಲ್ಲಿ ಬಂಡವಾಳ ಹಿಂತೆಗೆತಕ್ಕೆನೇ (ಅಂದರೆ ಸಾರ್ವಜನಿಕ ಉದ್ದಿಮೆಗಳನ್ನು ಮುಚ್ಚಲೆಂದೇ) ಒಬ್ಬ ಕ್ಯಾಬಿನೆಟ್ ದರ್ಜೆಯ ಸಚಿವರನ್ನು ನೇಮಿಸಲಾಯಿತು. ಅರುಣ್ ಶೌರಿ, ದೇಶದ ನವರತ್ನಗಳೆಂದೇ ಖ್ಯಾತಿ ಪಡೆದಿದ್ದ ಸಾರ್ವಜನಿಕ ಉದ್ದಿಮೆಗಳಿಂದ ಬಂಡವಾಳ ಹಿಂತೆಗೆದುಕೊಳ್ಳುವುದಕ್ಕೆ ಚಾಲನೆ ನೀಡಿದರು. ಇದರ ಪರಿಣಾಮವೇ ಇಂದು ಎಚ್.ಎಂ.ಟಿಯಂತಹ ಬೃಹತ್ ಕಾರ್ಖಾನೆಗಳು ಮುಚ್ಚಲು ಕಾರಣವಾಗಿದೆ. ಬಂಡವಾಳ ಹಿಂತೆಗೆತ ಸಚಿವ ಅರುಣ್ ಶೌರಿ ಮೊದಲ ಬಾರಿಗೆ ದೇಶವ್ಯಾಪಿ 'ವಿ.ಆರ್.ಎಸ್' (ಸ್ವಯಂ ನಿವೃತ್ತಿ ಯೋಜನೆ)ಯನ್ನು ಜಾರಿಗೆ ತಂದರು.

ಉದಾರೀಕರಣಕ್ಕೆ ಬಲಿ

ಈ ಹೊತ್ತಿಗೆ ಕ್ವಾರ್ಟ್ಸ್ ವಾಚುಗಳ, ವೈವಿಧ್ಯಮಯ ವಿನ್ಯಾಸ, ಭಾರೀ ಮಾರ್ಕೆಟಿಂಗ್‌ಗೆ ಒತ್ತು ಕೊಟ್ಟಿದ್ದ ಟೈಟಾನ್‌ನಂಥ ಕಂಪನಿಗಳ ಮತ್ತು ಉದಾರೀಕರಣದಿಂದ ಆಮದಾದ ಅಗ್ಗದ ಡಿಜಿಟಲ್ ಎಲ್.ಸಿ.ಡಿ. ನಿಂದ ಹಿಡಿದು ಸ್ವಿಸ್ ವಾಚುಗಳ ಭರಾಟೆಯಿಂದ ಎಚ್‌ಎಂಟಿ ಮಾರುಕಟ್ಟೆ ಪಾಲು ಕುಗ್ಗತೊಡಗಿತು. ಎಚ್‌ಎಂಟಿ ಕೈಗಡಿಯಾರಗಳು ಮೂಲೆಗೆ ಸೇರಿದವು. ಇದರ ಜೊತೆಗೆ ಟೈಟಾನ್ ಮತ್ತಿತರ ಖಾಸಗಿ ವಿದೇಶಿ ಕಂಪನಿಗಳಿಗೆ ಮಾರುಕಟ್ಟೆ ಒದಗಿಸಲು ಅವರ ಲಾಬಿ ಅಧಿಕಾರಶಾಹಿ/ರಾಜಕಾರಣಿಗಳನ್ನು ಮೂಲಕ ಎಚ್.ಎಂ.ಟಿ.ಯನ್ನು ದುರ್ಬಲಗೊಳಿಸಿದವು ಎಂಬ ಅಪಾದನೆಗಳು ಕೂಡ ಕೇಳಿಬಂದಿವೆ. ಇವುಗಳಲ್ಲಿ ಉತ್ತಮ ಅಧಿಕಾರಿಗಳ, ಎಂಜಿನಿಯರುಗಳ, ನುರಿತ ತಂತ್ರಜ್ಞರ ಕೆಲಸಗಾರರನ್ನು ಖಾಸಗಿ ರಂಗ ಸೆಳೆಯುವುದು, ಅಂತಹ ಹುದ್ದೆಗಳಿಗೆ ಹೊಸ ನೇಮಕ ವಿಳಂಬ ಮಾಡುವುದು ಇತ್ಯಾದಿ ಸೇರಿತ್ತು. ಇದರ ನಡುವೆಯೂ ತುಮಕೂರು ಎಚ್.ಎಂ.ಟಿ. ಕುಂಟುತ್ತಾ ಸಾಗುತ್ತಾ ಬಂತು.

ಸರಕಾರದ ಮಲತಾಯಿಯ ಧೋರಣೆ ಮತ್ತು 'ವಿ.ಆರ್.ಎಸ್'ಗೆ ಕೊಡುತ್ತಿದ್ದ ಒತ್ತು ನೋಡಿ ಗಾಬರಿಯಾದ ಎಚ್.ಎಂ.ಟಿ. ಕಾರ್ಮಿಕರು ಸ್ವಯಂ ನಿವೃತ್ತಿ ಪಡೆಯತೊಡಗಿದರು. 1997ರಿಂದ 13 ಬಾರಿ 'ವಿ.ಆರ್.ಎಸ್' ಯೋಜನೆ ತರಲಾಯಿತು. ಸುಮಾರು

ಪುಟ 10 ಕ್ಕೆ



ಎಚ್.ಎಂ.ಟಿ.ಯ 'ಆತ್ಮಹತ್ಯೆ'ಯ ಕತೆ

ವಸಂತರಾಜ ಎನ್.ಕೆ.

ಎಚ್.ಎಂ.ಟಿ. ಆತ್ಮಹತ್ಯೆ ಮಾಡಿಕೊಂಡಿದೆಯೇ? ಹೌದು ಅಂತಾರೆ ಕೇಂದ್ರ ಸರಕಾರ, ಸಾರ್ವಜನಿಕ ಉದ್ದಿಮೆಗಳ ಪುನಶ್ಚೇತನ ಮಂಡಳಿ, ಆರ್ಥಿಕ ತಜ್ಞರು, ಉದ್ಯಮ ನಿರ್ವಹಣಾ ಪರಿಣತರು. ಇವರ ಪ್ರಕಾರ ವಾಚಿನಂತಹ ಜನರ ದಿನಬಳಕೆಯ ವಸ್ತುಗಳನ್ನು ತಯಾರಿಸುವ ಉದ್ಯಮ ಜನರ ಬದಲಾಗುತ್ತಿರುವ ಆದ್ಯತೆಗಳು, ಬೇಕು–ಬೇಡಗಳು, ಫ್ಯಾಶನುಗಳನ್ನು ಅರಿತುಕೊಂಡು ಹೊಸ ಉತ್ಪನ್ನಗಳನ್ನು ವಿನ್ಯಾಸ ಮಾಡಿ ತಯಾರಿಸಿ ಅದನ್ನು ಅವರಿಗೆ ಮಾರುವ ತಂತ್ರಗಳನ್ನು ಕರಗತ ಮಾಡಬೇಕು. ಅದೇ ಸಮಯದಲ್ಲಿ ಹೊಸ ತಂತ್ರಜ್ಞಾನದ ಅವಿಷ್ಕಾರದಲ್ಲಿ ಸಂಶೋಧನೆ–ಅಭಿವೃದ್ಧಿಯಲ್ಲಿ ತೊಡಗಬೇಕು. ಎಚ್.ಎಂ.ಟಿ. ಇವುಗಳಲ್ಲಿ ಹಲವನ್ನು ಸರಿಯಾಗಿ ನಿಭಾಯಿಸಲಿಲ್ಲ. ಆದ್ದರಿಂದ ಅದರ ನಿರ್ಗಮನ ಅನಿವಾರ್ಯವಾಗಿತ್ತು ಅಂತಾರೆ ಅವರು. ದಿನಬಳಕೆಯ ವಸ್ತುಗಳ ಉತ್ಪಾದನಾ ಕ್ಷೇತ್ರದಲ್ಲಿ ಸರಕಾರ ಹಣ ತೊಡಗಿಸುವ ಅಗತ್ಯ ಇಲ್ಲ. ಸರಕಾರ ಆಯಕಟ್ಟಿನ (ಸ್ಟ್ರಾಟೆಜಿಕ್) ದೇಶಕ್ಕೆ ಆದ್ಯತೆಯ ಕ್ಷೇತ್ರದಲ್ಲಿ ಮಾತ್ರ ಹಣ ತೊಡಗಿಸಬೇಕು ಅಂತಾರೆ ಇನ್ನೂ ಕೆಲವರು.

ಆದರೆ ಎಚ್.ಎಂ.ಟಿ.ಗೆ ಮಾರ್ಕೆಟಿಂಗ್ ಕರಗತವಾಗಿರಲಿಲ್ಲ. ತಂತ್ರಜ್ಞಾನ ಬದಲಾವಣೆಗೆ ಹೊಂದಿಕೊಳ್ಳಲಿಲ್ಲ. ಪೈಪೋಟಿಯನ್ನು ಎದುರಿಸುವುದು ಗೊತ್ತಿರಲಿಲ್ಲ ಎಂಬ ಎಲ್ಲಾ ಸಾರ್ವಜನಿಕ ಉದ್ದಿಮೆಗಳ ವಿರುದ್ಧ ಸರ್ವೇಸಾಮಾನ್ಯವಾಗಿ ಮಾಡುವ ಸಾಮಾನ್ಯೀಕೃತ ಆಪಾದನೆಗಳು ನಿಜವಲ್ಲ ಎಂದು ಅದರ ಇತಿಹಾಸ ಪರಿಶೀಲಿಸಿದರೆ ತಿಳಿಯುತ್ತದೆ.

ಮೂರು ದಶಕಗಳ ಸಫಲ ಕಾರ್ಯಾಚರಣೆ

ಎಚ್.ಎಂ.ಟಿ. 1961ರಲ್ಲಿ ಆರಂಭವಾಗಿ ಮೂರು ದಶಕಗಳ ಕಾಲ ಭಾರತದ ವಾಚು ಮಾರುಕಟ್ಟೆಯ ಶೇ. 90ನ್ನು ತನ್ನದಾಗಿಸಿಕೊಂಡಿತ್ತು. ವಾಚುಗಳಿಗೆ ಮಾರುಕಟ್ಟೆಯನ್ನು ಸೃಷ್ಟಿಸಿತ್ತು ಎಂದರೆ ಹೆಚ್ಚು ಸರಿಯಾದೀತು. 1980ರ ದಶಕದಲ್ಲಿ ಎಚ್.ಎಂ.ಟಿ. ವಾಚುಗಳಲ್ಲಿ ಕೆಲವು ಮಾಡೆಲ್ ಗಳಿಗೆ ಕೆಲವು ವಾರಗಳ ಕಾಲ ಕಾಯಬೇಕಾಗಿತ್ತು. ಕೀಲಿ ಕೊಡುವ ಮತ್ತು ಅಟೊಮ್ಯಾಟಿಕ್ ವಾಚುಗಳ ನಿಖರ ಬಿಡಿಭಾಗಗಳ ಸೂಕ್ಷ್ಮ ಇಂಜಿನೀಯರಿಂಗ್ ನಿರ್ವಹಣೆಯನ್ನು ದೊಡ್ಡ ಪ್ರಮಾಣದ ಉತ್ಪಾದನೆಯ ಕೌಶಲ್ಯವನ್ನು ಕರಗತ ಮಾಡಿಕೊಂಡಿತ್ತು. ಅದು ಅತ್ಯುತ್ತಮ ಇಂಜಿನೀಯರುಗಳು, ಮ್ಯಾನೇಜರುಗಳು, ತಂತ್ರಜ್ಞರುಗಳನ್ನು ಹೊಂದಿತ್ತು ಎಂದು ಎಚ್.ಎಂ.ಟಿ.ಗೆ 1990ರ ದಶಕದಲ್ಲಿ ಗಂಭೀರ ಪೈಪೋಟಿ ಕೊಟ್ಟು ಸೋಲಿಸಿದ ಟೈಟಾನ್ ನ ಸ್ಥಾಪಕ ಕ್ಸೆರೆಕ್ಸ್ ದೇಸಾಯಿ ಅವರೇ ಒಪ್ಪಿಕೊಳ್ಳುತ್ತಾರೆ.

ಎಚ್.ಎಂ.ಟಿ. ಮಾತ್ರವಲ್ಲ, ಕೆಲವು ವಾಚುಗಳ ಮಾಡೆಲ್ ಗಳ (ಜವಾಹರ್, ಪೈಲಟ್, ಸೋನಾ ಇತ್ಯಾದಿ) ಹೆಸರುಗಳೂ ಅತ್ಯಂತ ಜನಪ್ರಿಯ ಬ್ರಾಂಡಾಗಿದ್ದವು. ಮನೆಮಾತಾಗಿದ್ದವು. ಅವುಗಳನ್ನು ಹೊಂದಿರುವುದು ಹೆಮ್ಮೆಯ ಮಾತಾಗಿತ್ತು. ಇದು ಉತ್ತಮ ಮಾರ್ಕೆಟಿಂಗ್ ಇಲ್ಲದೆ ಸಾಧ್ಯವಾಗುತ್ತಿರಲಿಲ್ಲ. ಕೀಲಿ ಕೊಡುವ ವಾಚಿನಿಂದ ಅಟೊಮ್ಯಾಟಿಕ್ ವಾಚುಗಳ ತಂತ್ರಜ್ಞಾನದ ಸ್ಥಿತ್ಯಂತರವನ್ನೂ ಸಹ ಎಚ್.ಎಂ.ಟಿ. ಸಮರ್ಥವಾಗಿ ನಿರ್ವಹಿಸಿತ್ತು. 1980ರ ದಶಕದಲ್ಲಿ ಹೊಸದಾಗಿ ಬಂದ ಖಾಸಗಿ ರಂಗದ ಅಲ್ವಿನ್–ಸೀಕೊ, ಟೈಟಾನ್ ಮತ್ತು ಟೈಮೆಕ್ಸ್ ಗಳ ಪೈಪೋಟಿಯನ್ನೂ ಸಹ ಅದು ಎದುರಿಸಿತ್ತು.

ಪುಟ 10 ಕ್ಕೆ

ಎಚ್.ಎ.ಎಲ್. ತುಮಕೂರು ಏಕೆ ನಂಬಲರ್ಹವಲ್ಲ ?

ಎಚ್.ಎ.ಎಲ್. ತುಮಕೂರು ಘಟಕ ಅತ್ಯಾಧುನಿಕ ಲಘು ಹೆಲಿಕಾಪ್ಟರ್ ಗಳನ್ನು 3 ವರ್ಷಗಳಲ್ಲಿ ಉತ್ಪಾದನೆ ಮಾಡಲಿದೆ. ಅದಕ್ಕೆ 4 ಸಾವಿರ ಕೋಟಿ ಹೂಡಲಾಗುವುದು. ಅದು 4 ಸಾವಿರ ಜನಕ್ಕೆ ಉದ್ಯೋಗ ಕೊಡಲಿದೆ ಎನ್ನಲಾಗಿದೆ. ಇತ್ತೀಚೆಗೆ ಎಫ್.ಡಿ.ಐ. ಉದಾರೀಕರಣದ ಭಾಗವಾಗಿ ರಕ್ಷಣಾ ಕ್ಷೇತ್ರವನ್ನು ವಿದೇಶಿ ಮತ್ತು ದೇಶಿ ಖಾಸಗಿ ರಂಗಕ್ಕೆ ತೆರೆಯಲಾಗಿದೆ. ರಕ್ಷಣಾ ಉತ್ಪನ್ನಗಳ ಖರೀದಿ ನೀತಿಯಲ್ಲಿ ಮಾಡಿರುವ ಬದಲಾವಣೆಗಳ ನಂತರ ದೇಶೀಯ ತಂತ್ರಜ್ಞಾನ ಮತ್ತು ದೇಶದಲ್ಲಿಯೇ ತಯಾರಿಸಬೇಕೆಂಬ ಒತ್ತನ್ನು ಬಹಳ ಮಟ್ಟಿಗೆ ತೆಗೆದು ಬಿಡಲಾಗಿದೆ. ಎಚ್.ಎ.ಎಲ್.ನಿಂದ ಖರೀದಿ ಮಾಡಬೇಕೆಂದಿಲ್ಲ. ಅಂಬಾನಿ, ಟಾಟಾ ಮುಂತಾದ ಖಾಸಗಿ ರಂಗದ ದೈತ್ಯ ಕಂಪನಿಗಳಿಗಾಗಿಯೇ ಈ ಬದಲಾವಣೆಗಳನ್ನು ಮಾಡಲಾಗಿದ್ದು ಅವು ಇಂತಹ ಆರ್ಡರುಗಳನ್ನು ಬಾಚಿಕೊಳ್ಳುವ ಸಾಧ್ಯತೆ ಹೆಚ್ಚು. ಕಳೆದ ಒಂದು ದಶಕದಿಂದ ಹಂತ ಹಂತವಾಗಿ ಬರುತ್ತಿರುವ ಈ ನೀತಿಯಿಂದ ಎಚ್.ಎ.ಎಲ್.ನ ಉತ್ಪಾದನಾ ಸಾಮರ್ಥ್ಯ ಈಗಾಗಲೇ ಸಾಕಷ್ಟು ಖಾಲಿ ಬಿದ್ದಿದೆ. ಎಚ್.ಎಂ.ಟಿ ಮಶೀನ್ ಟೂಲ್ಸ್ ನ ಹಲವು ಕಾರ್ಖಾನೆಗಳು ಸಹ ಸಂಕಷ್ಟದಲ್ಲಿದ್ದು ಅವಕ್ಕೂ ಎಚ್.ಎಂ.ಟಿ ವಾಚ್ ಗೆ ಬಂದ ಗತಿ ಬಂದರೆ ಆಶ್ಚರ್ಯವಿಲ್ಲ. ಆದರೆ ಜೋಕ್ ಎಂದರೆ ಎಚ್.ಎಂ.ಟಿ ಮಶೀನ್ ಟೂಲ್ಸ್ 'ಮೇಕ್ ಇನ್ ಇಂಡಿಯಾ'ಕ್ಕೆ ಆದ್ಯತೆಯ ಕ್ಷೇತ್ರವಾದ್ದರಿಂದ ಅದರ ಪುನಶ್ಚೇತನಕ್ಕ ಹೆಚ್ಚಿನ ಬಂಡವಾಳ ಮತ್ತು ಹೊಸ ತಂತ್ರಜ್ಞಾನ ಒದಗಿಸುವ ಮೂಲಕ ಎಲ್ಲಾ ಪ್ರಯತ್ನಗಳನ್ನು ಮಾಡಲಾಗುವುದು ಎಂದಿದ್ದಾರೆ. ಇದನ್ನೇ ಎಚ್.ಎಂ.ಟಿ ವಾಚ್ ಬಗ್ಗೆ ಹಿಂದೆ ಹೇಳಲಾಗಿತ್ತು ಎಂಬುದು ಜೋಕಿನ ಭಾಗ.



ಕಂದಾಯ ಇಲಾಖೆಯ ವರದಿಯ ಪ್ರಕಾರ ಕರ್ನಾಟಕದಲ್ಲಿ 18.6.2015ರಿಂದ ಜನವರಿ 12, 2016 ರ ವರೆಗೆ ಆತ್ಮಹತ್ಯೆ ಮಾಡಿಕೊಂಡ ರೈತರ ಸಂಖ್ಯೆ ಒಂದು ಸಾವಿರ ದಾಟಿದೆ. ಅದೀಗ 1002 ಎಂದು ಮಾಧ್ಯಮಗಳಲ್ಲಿ ವರದಿಯಾಗಿದೆ. ರಾಜ್ಯದ ಇತಿಹಾಸದಲ್ಲಿ ಕಂಡು ಕೇಳರಿಯದಷ್ಟು ಪ್ರಮಾಣದಲ್ಲಿ ರೈತರ ಆತ್ಮಹತ್ಯೆಗಳು ನಡೆಯುತ್ತಿವೆ ಎನ್ನಲಾಗಿದೆ. ಏಕಿದು? ಇದನ್ನು ಪರಿಶೀಲಿಸುವ ಕರ್ನಾಟಕ ಪ್ರಾಂತ ರೈತ ಸಂಘದ ಪ್ರಧಾನ ಕಾರ್ಯದರ್ಶಿ ಅವರ ದೀರ್ಘ ಲೇಖನದ ಒಂದು ಭಾಗವನ್ನು ಇಲ್ಲಿ ನಮ್ಮ ಓದುಗರಿಗಾಗಿ ಪ್ರಕಟಿಸುತ್ತಿದ್ದೇವೆ. ಇವು ಆತ್ಮಹತ್ಯೆಗಳಲ್ಲ, ಸರ್ಕಾರೀ ಪ್ರಾಯೋಜಿತ ಕಗ್ಗೊಲೆಗಳು ಎನ್ನುತ್ತಾರೆ ಅವರು.

ರೈತರ ಆತ್ಮಹತ್ಯೆಗಳ ಸಂಖ್ಯೆ ಏರುತ್ತಲೇ ಇದೆಯೇಕೆ?

ಯು. ಬಸವರಾಜು

ಮುಖ್ಯಮಂತ್ರಿಗಳೇ ಸ್ವತ: ಕೈಮುಗಿದು ಕೇಳಿಕೊಂಡರೂ, ದೀರ್ಘಾವದಿ, ಮದ್ಯಮಾವಧಿ ಸಾಲದ ಮೇಲಿನ ಬಡ್ಡಿ ಮನ್ನಾ ಮಾಡುವುದಾಗಿ ಘೋಷಿಸಿದ್ದರೂ, (ಹೌದು, ಇದೀಗ ಅದಕ್ಕೊಂದು ಶರತ್ತು ಬಂದಿದೆ ಯಾರು ಅಸಲನ್ನು ಪೂರ್ತಿಯಾಗಿ ಕಟ್ಟುತ್ತಾರೋ ಅವರಿಗೆ ಮಾತ್ರ ಬಡ್ಡಿಮನ್ನಾ ಎಂದಿದ್ದಾರೆನ್ನಿ !) ರಾಜ್ಯ ಸರಕಾರ ಮೀಟರ್ ಬಡ್ಡಿ ವ್ಯವಹಾರದ ದಂಧೆಯ ಮೇಲೆ ಗದೆ ಎತ್ತಿದ್ದಾಗಲೂ, ವಿರೋಧ ಪಕ್ಷಗಳು ಮತ್ತು ಮಠಾಧೀಶರು ಮುಂತಾದವರು ಮನವಿ ಮಾಡಿಕೊಂಡಾಗಲೂ ಯಾಕೆ ಈ ರೈತರ ಆತ್ಮಹತ್ಯೆಗಳು ಮುಂದುವರೆದಿವೆ? ಅದೇ ರೀತಿ, ಈ ಅವಧಿಯಲ್ಲೇಕೆ ದೇಶವ್ಯಾಪ್ತಿಯಾಗಿ ಬಿರುಸುಗೊಂಡಿವೆ ? ಇದರ ಹಿಂದಿನ ಕಾರಣಗಳೇನು ಮತ್ತು ತಕ್ಷಣದ ಪರಿಹಾರಗಳೇನು? ಈ ಕುರಿತು ರಾಜ್ಯದಾದ್ಯಂತ ಮತ್ತು ದೇಶದಾದ್ಯಂತ ಗಂಭಿರವಾದ ಚರ್ಚೆಗಳು ನಡೆದಿವೆ.

ಕೇಂದ್ರ ಹಾಗೂ ರಾಜ್ಯ ಸರಕಾರಗಳ ಕೆಲ ಮಂತ್ರಿಗಳು ಈ ಬೆಳವಣಿಗೆಗಳ ಕುರಿತು ಹಗುರವಾಗಿ ಪ್ರತಿಕ್ರಿಯೆ ವ್ಯಕ್ತಪಡಿಸಿ ನಾಗರೀಕ–ರಿಂದ ಮುಖಕ್ಕೆ ಇಕ್ಕಿಸಿಕೊಂಡಿದ್ದಾರೆ. ಕೇಂದ್ರ ಸರಕಾರದ ಕೃಷಿಮಂತ್ರಿ ರೈತರು ಪ್ರೇಮ ವೈಫಲ್ಯದಿಂದಲೂ ಮತ್ತು ಷಂಡತನದಿಂದಲೂ, ಅನಾರೋಗ್ಯದಿಂದಲೂ, ಕೌಟುಂಬಿಕ ಕಲಹದಿಂದಲೂ ಆತ್ಮಹತ್ಯೆಗಿಳಿದಿದ್ದಾರೆಂದು ಅಪ್ರಬುದ್ಧವಾದ ಸಾರ್ವಜನಿಕ ಹೇಳಿಕೆ ನೀಡಿದ್ದಾರೆ. ಕರ್ನಾಟಕದ ಶಾಸಕ ಶ್ರೀ ಅಶೋಕ ಖೇಣಿಯಂತಹ ಬಂಡವಾಳದಾರರು ರೈತರು ಜೂಜುಕೋರತನದಿಂದಾಗಿ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆಂದರೆ, ಪಾರ್ಲಿಮೆಂಟ್ ಸದನ ಸಮಿತಿಯ ಮುಂದಾಳುವಾದ ಶ್ರೀ ಎಂ.ವೀರಪ್ಪ ಮೊಯ್ಲಿಯವರು ರೈತರು ಕೃಷಿ ಬಿಕ್ಕಟ್ಟಿನ ಹಲವು ವಿಧಗಳಿಂದಲೂ ಮತ್ತು ದುಂದು ವೆಚ್ಚದಿಂದಲೂ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆಂದು ಮತ್ತು ಈ ಕುರಿತು ತಮ್ಮ ಸಮಿತಿ ಮಹಾರಾಷ್ಟ್ರದ ವಿದರ್ಭಕ್ಕೆ ಭೇಟಿ ನೀಡಿ ಅದ್ಯಯನ ನಡೆಸುತ್ತದೆಂದು ಚಿಕ್ಕಬಳ್ಳಾಪುರದಲ್ಲಿ ಸಾರ್ವಜನಿಕ ಹೇಳಿಕೆಯನ್ನು ನೀಡಿ, ತಮ್ಮ ಸಮಿತಿ ಅದ್ಯಯನ ನಡೆಸುವ ಮುಂಚೆಯೇ ತಮ್ಮ ತೀರ್ಪು ಏನೆಂದು ಘೋಷಿಸಿದ್ದಾರೆ ! ಹೇಗಿದೆ ನೋಡಿ ?

ಕೆಲ ಬುದ್ಧಿಜೀವಿಗಳು ಕಬ್ಬು ಬೆಳೆಯ ಪ್ರದೇಶದಲ್ಲಿ ಯಾಕೆ ಕಬ್ಬು ಬೆಳೆಯನ್ನೇ ಬೆಳೆಯಬೇಕು. ಬದಲಿಗೆ ತೊಗರಿ ಬೆಳೆಯಲಿ, ಅದಕ್ಕೆಷ್ಟು ದರವಿದೆಯೆಂದು ಗಗನಮುಖಿಯಾಗಿರುವ ತೊಗರಿ ಬೇಳೆಯ ಬೆಲೆಯನ್ನು ತೋರಿಸಿ ಉದ್ಧರಿಸಿದರೆ, ತೊಗರಿ ಬೆಳೆಗಾರರ ಅತ್ಮಹತ್ಯೆಯನ್ನು ತೊಗರಿ ಬೆಳೆಯುವ ಪ್ರದೇಶದಲ್ಲಿ ಗಮನಿಸಿದವರು ತೊಗರಿ ಬೆಳೆಯನ್ನೇ ಏಕೆ ಬೆಳೆಯಬೇಕು ಭತ್ತ ಬೆಳೆಯಬಾರದೇ ಎನ್ನುತ್ತಾರೆ! ಭತ್ತ ಬೆಳೆಗಾರರ ಆತ್ಮಹತ್ಯೆ ಗಮನಿಸಿದ ಆ ಪ್ರದೇಶದವರು ಭತ್ತವನ್ನೇ ಏಕೆ ಬೆಳೆಯಬೇಕು, ಹತ್ತಿ ಬೆಳೆಯಬಾರದೇ ಎನ್ನುವರು. ಹತ್ತಿ, ರೇಷ್ಮೆ, ಆಲೂಗಡ್ಡೆ, ಅಡಿಕೆ ಮುಂತಾದ ಆಯಾ ಪ್ರದೇಶದ ಬೆಳೆಗಳ ಬಗ್ಗೆ ಹೀಗೆಯೇ ಚರ್ಚೆ ನಡೆದಿದೆ. ಹೀಗಾಗಿ ಈ ಎಲ್ಲವುಗಳನ್ನು ವಿಶ್ಲೇಷಿಸುವುದು ನಿಜವಾದ ಅಂಶಗಳನ್ನು ಮುನ್ನೆಲೆಗೆ ತರುವುದು ಅಗತ್ಯವಿದೆ.

1. ಕೇವಲ ಈ ಒಂದು ವರ್ಷದ ಬರಗಾಲ ಮತ್ತು ಅತಿವೃಷ್ಟಿಯಿಂದಾಗಿ ಆತ್ಮಹತ್ಯೆಗಳಾಗುತ್ತಿವೆಯೇ?

ಸ್ವಾತಂತ್ರ್ಯ ಪೂರ್ವದಿಂದಲೂ ಮತ್ತು ನಂತರ ಹಲವು ವರ್ಷಗಳ ದೀರ್ಘ ಕಾಲ ಬರಗಾಲ ಹಾಗೂ ಅತಿವೃಷ್ಟಿಯ ಮತ್ತು ಪ್ರವಾಹಗಳ ಬಾಧೆಯನ್ನು ನಮ್ಮ ರೈತರು ಎದುರಿಸಿದ್ದಾರೆ. ಕರ್ನಾಟಕ ಸರಕಾರ ಕಳೆದ 3 ದಶಕಗಳ ತನ್ನ ಅನುಭವದಂತೆ ರಾಜ್ಯವು 10 ವರ್ಷಗಳಲ್ಲಿ ಒಂದು ಬಾರಿ ಮಾತ್ರವೇ ಉತ್ತಮ ಬೆಳೆಬರುವ ಉತ್ತಮ ಮಳೆಯಾಗಿದೆಯೆನ್ನುತ್ತದೆ. ಅಂದರೆ, ಉಳಿದ 9 ವರ್ಷಗಳು ಉತ್ತಮ ಬೆಳೆ ಬರುವ ಮಳೆಯನ್ನ ಕಾಣಲಿಲ್ಲವೆಂದಂತಾಯಿತು. ಮಳೆ ಬಾರದೇ ಬರಗಾಲ ಬಂದಿರಬಹುದು, ಇಳುವರಿ ಕುಸಿತಗೊಂಡ ಬೆಳೆ ಬಂದಿರಬಹುದು ಅಥವಾ ಮಳೆ ಬಂದರೂ ಬೆಳೆ ಬರದಂತಹ ಮಳೆ ಬಂದಿರಬೇಕು. ಇಲ್ಲವೇ, ಮಳೆ ಬಂದು ಬಿತ್ತನೆಯಾಗಿ ಒಳ್ಳೆ ಬೆಳೆಯ ನಿರೀಕ್ಷೆಯಲ್ಲಿರುವಾಗಲೇ ಅದು ಅತೀವೃಷ್ಟಿಗೆ ಇಲ್ಲವೇ ಪ್ರವಾಹಕ್ಕೆ ತುತ್ತಾಗಿರಬಹುದಾಗಿದೆ. ಇದನ್ನು ರಾಜ್ಯದ ಮಳೆ ಆಧಾರಿತ ಪ್ರದೇಶದ ಶೇ 60ಕ್ಕೂ ಅಧಿಕ ಹಿಡುವಳಿದಾರರೂ ಅನುಭವಿಸಿದ್ದಾರೆ. ಆದರೆ, ಈ ಯಾವ ಸಂದರ್ಭಗಳಲ್ಲೂ ಅವರು ಆತ್ಮಹತ್ಯೆ ಮಾಡಿಕೊಂಡದ್ದಿಲ್ಲ.

ಆದರೆ, ಕಳೆದ ಹಲವು ವರ್ಷಗಳ ವ್ಯವಸಾಯದಲ್ಲಿನ ನಷ್ಟದಿಂದಾಗಿ ತೀವ್ರ ಸಾಲದ ಬಲೆಗೆ ಸಿಲುಕಿದ ರೈತ ಕುಟುಂಬಗಳು, ಈ ಸಂದರ್ಭದ ಬೆಳೆಯ ಮೇಲೆ ಅತಿಯಾದ ನಿರೀಕ್ಷೆಯಿಟ್ಟುಕೊಂಡಿದ್ದಾಗ, ಇದು ಉಂಟು ಮಾಡಿದ ನಷ್ಟವು, ತೀವ್ರ ತೆರನಾದ ಸಾಲದ ಬಾಧೆಯ ಹಿನ್ನೆಲೆಯಲ್ಲಿ ಅಂತಹ ರೈತರ ಕುಟುಂಬಗಳು ತೀವ್ರ ನಿರಾಸೆಯನ್ನು ಹಾಗೂ ಜುಗುಪ್ಸೆಯನ್ನು ಹೊಂದಿರುವ ಸಾಧ್ಯತೆಗಳಿವೆ. ಹೀಗಾಗಿ, ಕೇವಲ ಬರಗಾಲ ಅಥವಾ ಅತೀವೃಷ್ಟಿಗಳು ಅವುಗಳೇ ನೇರವಾಗಿ, ರೈತರ ಆತ್ಮಹತ್ಯೆಗಳಿಗೆ ಕಾರಣಗಳಾಗಿವೆಯೆಂದು ತೀರಾ ಸರಳವಾಗಿ ಹೇಳುವುದು ಹಿಂದಿನ ವರ್ಷಗಳ ನಷ್ಟದ ಸಾಲದ ಒತ್ತಡವನ್ನು ಮರೆಮಾಚಿದಂತಾಗುತ್ತದೆ. ಈ ಮೂಲಕ ಅಪರಾಧಿ ಸರಕಾರ ತನ್ನ ಹೊಣೆಗಾರಿಕೆಯಿಂದ ನುಣುಚಿಕೊಳ್ಳಲು ಈ ಹೇಳಿಕೆ ನೆರವಾಗುತ್ತದೆ. ಸರಕಾರಗಳು ಪ್ರಾಕೃತಿಕ ವಿಕೋಪದ ಹೆಸರಿನಲ್ಲಿ ಹಾಲಿ ಇರುವ ಓಬೀರಾಯನ ಕಾಲದ ಕಾನೂನಿನ ಆಧಾರದಲ್ಲಿ, ಪರಿಹಾರವೆಂಬ ಪದವನ್ನೇ ನಗೆ ಪಾಟಲಿಗೀಡು ಮಾಡುವಂತಹ ಅಲ್ಪಪರಿಹಾರ ನೀಡಿ ಕೈತೊಳೆದುಕೊಂಡರಾಯಿತಲ್ಲವೇ?

2. ಸಾಲದ ಭಾಧೆಯೇ ರೈತರ ಆತ್ಮಹತ್ಯೆಗೆ ಮೂಲ ಕಾರಣವೇ !

ಬಹಳ ಜನರು ರೈತರು ಆತ್ಮಹತ್ಯೆ ಮಾಡಿಕೊಳ್ಳಲು ಅಷ್ಟೊಂದು ಸಾಲ ಮಾಡಿರುತ್ತಾರೆಯೇ ಎಂದು ಮುಗ್ದವಾಗಿ ಕೇಳುತ್ತಾರೆ ! ಹೌದು, ಇಲ್ಲಿ ಒಂದು ಉದಾಹರಣೆ ನೋಡಿ. ಕುಡತಿನಿ ಗ್ರಾಮದಲ್ಲಿ ಸುಮಾರು 6 ಎಕರೆ ಪ್ರದೇಶದಲ್ಲಿ ವ್ಯವಸಾಯದಲ್ಲಿ ತೊಡಗಿದ್ದ ನಮ್ಮ ಮಾವ ಮಲ್ಲಪ್ಪ (60) ಆ ದಿನಗಳಲ್ಲಿ ಒಳ್ಳೆಯ ಹತ್ತಿ ಬೆಳೆದು, ಒಂದೆರಡು ವರ್ಷ ಒಳ್ಳೆಯ ಬೆಲೆ ಪಡೆದು ಸ್ವತ: 04 ಎಕರೆ ಜಮೀನು ಖರೀದಿಸಿದ್ದ. ಅದಕ್ಕಾಗಿ, ಸ್ವಲ್ಪ ಸಾಲವನ್ನು ಮಾಡಿದ್ದನೆನ್ನಿ, ಮುಂದಿನ ಕೆಲವೇ ವರ್ಷಗಳಲ್ಲಿ, ಅದೇ ಹತ್ತಿಬೆಳೆಯಲ್ಲಿ ಕೈಸುಟ್ಟುಕೊಂಡು, ಖರೀದಿಸಿದ ಜಮೀನನ್ನು ಮಾರಿ ತೀವ್ರ ಸಾಲದ ಸುಳಿಯಲ್ಲಿ ಸಿಲುಕಿದ. ಮಾತ್ರವಲ್ಲಾ, ಸಾಲ ನೀಡಿದವರ ಬಾಧೆಯಿಂದ ತಪ್ಪಿಸಿಕೊಳ್ಳಲು ಬೆಳಿಗ್ಗೆ 05 ಗಂಟೆಗೆಲ್ಲಾ ಮನೆಯನ್ನು ಬಿಟ್ಟು ಹೊರ ನಡೆದರೇ, ರಾತ್ರಿ 11 ಗಂಟೆಗೆ ಮನೆ ಸೇರುತ್ತಿದ್ದ. ಹಲವು ರಾತ್ರಿ ಗಂಡ ಹೆಂಡತಿ ಜಗಳಮಾಡುತ್ತಿದ್ದರು, ಯಾಕೆಂದು ವಿಚಾರಿಸಿದಾಗ, ಜೀವನ ನಿರ್ವಹಣೆಗೆ ಕಿರಾಣಿ ಅಂಗಡಿಯವರು ರೇಷನ್ ನೀಡುತ್ತಿಲ್ಲವೆಂಬುದು ಜಗಳದ ಹಿಂದಿನ ನಿಜ ಕಾರಣವಾಗಿತ್ತು. ಸಾಲವನ್ನು ನೀಡದೇ ಹೋದರೇ ಆತನಾದರೂ ಎಷ್ಟು ದಿನ ಕಿರಾಣಿ ನೀಡಿಯಾನು ! ಕೊನೆಗೂ, ಸಾಲದ ಭಾಧೆಯಿಂದ ತಪ್ಪಿಸಿಕೊಳ್ಳಲಾಗದೇ ಮನೆಯಲ್ಲೂ ಜೀವನ ನಿರ್ವಹಣೆಯ ವಿಚಾರದಲ್ಲಿ ಬಿಕ್ಕಟ್ಟು ಸೃಷ್ಠಿಯಾಗಿ ಕ್ಷಯ ರೋಗಕ್ಕೆ ತುತ್ತಾದ, ಸಾಲ ನೀಡಿದವರು ಆರೋಗ್ಯ ವಿಚಾರಿಸುವ ನೆಪದಲ್ಲಿ ಬಂದು ತಮ್ಮ ಸಾಲದ ಕುರಿತು ಸೌಮ್ಯ ಒತ್ತಡ ಹೇರುತ್ತಿದ್ದರು. ಅದರ ವ್ಯಸನದಲ್ಲಿಯೇ ಮತ್ತು ಖಾಯಿಲೆಯಲ್ಲಿಯೇ ಗಂಡ ಮತ್ತು ಹೆಂಡತಿ ಮರಣ ಹೊಂದಿರುವುದನ್ನು ಗಮನಿಸಬಹುದು. ಸತ್ತಮೇಲೆಯೇ ತಿಳಿದದ್ದು ಸಹಕಾರಿ ಬ್ಯಾಂಕು, ಸಾರ್ವಜನಿಕ ಬ್ಯಾಂಕು ಎರಡರಲ್ಲಿನ ಸಾಲಬಿಟ್ಟು ಹೊರಗಡೆ ಮೀಟರ್‌ಬಡ್ಡಿಯವರ ಹತ್ತಿರವೇ 05 ಲಕ್ಷ(ಅಸಲು) ಕ್ಕೂ ಹೆಚ್ಚು ಸಾಲಮಾಡಿದ್ದನು.

ಇದು ವ್ಯವಸಾಯದ ಮೇಲೆಯೇ ಆಧರಿಸಿದ ಪ್ರತಿಯೊಂದು ರೈತರ ಮನೆಯ ಕಥೆಯೂ ಆಗಿದೆ. ಸಹಕಾರಿ ಬ್ಯಾಂಕ್, ಸಾರ್ವಜನಿಕ ಬ್ಯಾಂಕ್‌ಗಳ ಸಾಲ ಕಟ್ಟಲಾಗದೇ ಸುಸ್ತಿದಾರರಾದುದು, ನಂತರ ಖಾಸಗೀ ಸಾಲಕ್ಕೆ ಭಾಜನರಾದುದು ಅದರಿಂದಲೂ ಮತ್ತಷ್ಟು ಶೋಷಣೆಗೊಳಗಾದುದು. ಮಾತ್ರವಲ್ಲಾ, ಅದೂ ತೀರಿಸಲಾಗದಾಗ ಹಾಗೂ ಜೀವನ ನಿರ್ವಹಣೆಯ ಬಿಕ್ಕಟ್ಟಿಗಳಿಗೊಳಗಾದಾಗ 5/10 ಸಾವಿರ ರೂ. ನೀಡುವ ಹೆಂಡತಿ ಮುಖೇನ ಸಿಗುವ ಮಹಿಳೆಯರ ನಡುವಿನ ಸಾಲಕ್ಕೆ ಕೈ ಚಾಚಿದುದು, ಸ್ತ್ರೀಶಕ್ತಿ ಗುಂಪುಗಳ ಬೆಳೆಯಲು ಶುರುವಾದ ನಂತರ ಅದರಲ್ಲೂ ಸಾಲ ಎತ್ತುವುದು ಮೈಕ್ರೋ ಫೈನಾನ್ಸ್ ಸಂಸ್ಥೆಗಳೂ ನೀಡುತ್ತವೆಯೆಂದರೆ ಅದರಲ್ಲೂ ಸಾಲ ಪಡೆದು ತೀರಿಸಲಾಗದೇ ಮಾನಸಿಕ ಒತ್ತಡಕ್ಕೆ ಸಿಲುಕುವುದು. ಹೆಂಡತಿ ಕಡೆ ಬಳಗದವರ ಬಳಿಯೂ ಸಾಲವೆತ್ತಿ ಇರುವ ಮರ್ಯಾದೆಯನ್ನು ಮಣ್ಣು ಪಾಲು ಮಾಡಿಕೊಂಡಿರುವುದು, ಇದ್ದಬದ್ದ ಸಣ್ಣಪುಟ್ಟ ಅಸ್ತಿಗಳೆಲ್ಲಾ ಅಗ್ಗಕ್ಕೆ ಸಾಲನೀಡಿದವರಿಗೆ ಮಾರಾಟ ಮಾಡುವುದು, ಬೆಳೆದ ದೊಡ್ಡಸಾಲಗಳಿಗೆ ಇರುವ ಜಮೀನನ್ನು ಕಬಳಿಸಿಕೊಳ್ಳಲು ಚಕ್ರಬಡ್ಡಿ ಸಾಲಕ್ಕೆ ತುತ್ತಾಗುವುದು ಇವುಗಳೆಲ್ಲಾ ನಮ್ಮ ಗ್ರಾಮಗಳಲ್ಲೀಗ ಸಾಮಾನ್ಯ ದೃಶ್ಯಗಳಾಗಿವೆ.

3. ಈಗಲೇ ಯಾಕೆ ಈ ಪರಿ ಆತ್ಮಹತ್ಯೆಗಳು ಮುಂದುವರೆದವು ?

ಸಾಮಾನ್ಯವಾಗಿ ಈಚಿನ ಒಂದೆರಡು ದಶಕಗಳಿಂದ ಬಹುತೇಕ ರೈತರು ವಿಧಾನ ಸಭಾ ಹಾಗೂ ಪಾರ್ಲಿಮೆಂಟ್ ಚುನಾವಣೆಗಳು ಬಂದವೆಂದರೇ, ಯಾವುದಾದರೂ ರಾಜಕೀಯ ಪಕ್ಷಗಳು ಸಾಲಮನ್ನಾ ಅಥವಾ ಬಡ್ಡಿಮನ್ನಾ ಘೋಷಿಸುತ್ತವೇನೋ ಎಂದು ನಿರೀಕ್ಷಿಸುವುದು, ಈ ದುಸ್ಥಿತಿಯ ಬೆಳವಣಿಗೆಯಿಂದಾಗಿ ಸಾಮಾನ್ಯವಾಗುತ್ತಿದೆ. ಕಳೆದ 2014 ರ ಪಾರ್ಲಿಮೆಂಟ್ ಚುನಾವಣೆಯಲ್ಲಿ ಬಿಜೆಪಿ ಮಾಡಿದ ಮೂರು ಮುಖ್ಯವಾದ ಘೋಷಣೆಗಳು ಅಂತಹ ನಿರೀಕ್ಷೆಗಳನ್ನು ದೊಡ್ಡದಾಗಿಸಿದ್ದವು. ಮುಂದೆ ತಮಗೆ ಒಳ್ಳೆಯ ದಿನಗಳು ಬರಲಿವೆ, ಅದೇ ರೀತಿ, ರೈತರು ಯಾರು ಆತ್ಮಹತ್ಯೆ ಮಾಡಿಕೊಳ್ಳಬೇಕಾಗಿಲ್ಲ ಮತ್ತು ರೈತರು ಬೆಳೆದ ಬೆಳೆಗೆ ನ್ಯಾಯವಾದ ಮತ್ತು ಲಾಭದಾಯಕವಾದ ಬೆಲೆಗಳನ್ನು ಡಾ.ಎಂಎಸ್ ಸ್ವಾಮಿನಾಥನ್ ರವರ ಕೃಷಿ ಆಯೋಗದ ಸಲಹೆಗಳಂತೆ ಒಟ್ಟು ಖರ್ಚು ಮತ್ತು ಅದರ ಅರ್ಧದಷ್ಟು ಲಾಭಾಂಶ ಒಳಗೊಂಡಂತೆ ನಿಗದಿಸಿ ನೀಡಲಾಗುವುದೆಂಬುದನ್ನು ಪ್ರಚುರಗೊಳಿಸಿತ್ತು. ಪರಿಣಾಮವಾಗಿ ಅದರ ಲಾಭವನ್ನು ಬಿಜೆಪಿ ಉಂಡಿತ್ತು. ಇಂತಹ ಪ್ರಚಾರದಲ್ಲಿ ಸಂಘ ಪರಿವಾರವೂ ಕೈಜೋಡಿಸಿತ್ತು. ಆದರೆ ಕಳೆದ ಒಂದೂವರೆ ವರ್ಷದಲ್ಲಿ ಈ ಎಲ್ಲ ನಿರೀಕ್ಷೆಗಳು ತಲೆಕೆಳಗಾದವು, ದೇಶದ ಬಹುತೇಕ ದುಡಿಯುವ ಜನರು ಕಾಣದಿರುವಂತಹ ಶುಭ ದಿನಗಳು ಗ್ರಾಮೀಣ ಪ್ರದೇಶದ ಯಾವುದೇ ಕುಟುಂಬಗಳಲ್ಲೂ ಕಾಣಲಿಲ್ಲ. ಬದಲಿಗೆ, ಅವರ ಸಂಕಷ್ಟಗಳು ಹೆಚ್ಚಿರುವುದನ್ನು ಈ ದುಸ್ಥಿತಿಯು ಸಾರುತ್ತಿದೆ. ಅದೇ ರೀತಿ, ನರೇಂದ್ರಮೋದಿಯವರ ಸರಕಾರ ರೈತರಿಗೆ ಎಂ.ಎಸ್. ಸ್ವಾಮಿನಾಥನ್‌ರವರ ಸಲಹೆಯಂತೆ ಕೃಷಿ ಉತ್ಪನ್ನಗಳಿಗೆ ಬೆಲೆ ನಿಗದಿಸಲಾಗದೆಂದು ಕಳೆದ 20 ಪೆಬ್ರವರಿ 2015 ರಂದು ಸುಪ್ರಿಂಕೋರ್ಟ್‌ಗೆ ಪ್ರಮಾಣ ಪತ್ರ ಸಲ್ಲಿಸಿದೆ. ಅದೂ ಮಾತ್ರವೇ ಅಲ್ಲಾ, ಈ ಸರಕಾರ ನಿಗದಿಸಿ ಪ್ರಕಟಿಸಲಾಗುವ ಕನಿಷ್ಟ ಬೆಂಬಲ ಬೆಲೆಗಳು ತೀರಾ ಅವೈಜ್ಞಾನಿಕ ಲೆಕ್ಕಾಚಾರದಿಂದ ಕೂಡಿದ್ದು ಅವುಗಳು ರೈತರ ಹಾಗೂ ಅವರ ವ್ಯವಸಾಯದ ವಿರೋಧಯಾಗಿವೆ, ಮಾತ್ರವಲ್ಲ, ಮಾರುಕಟ್ಟೆಯ ಶಕ್ತಿಗಳಿಗೆ ನೆರವಾಗುತ್ತಿವೆ. ಈ ಎಲ್ಲಾ ನಿರೀಕ್ಷೆಗಳು ಹುಸಿಯಾಗುವುದರೊಂದಿಗೆ, ದೇಶ ಮತ್ತು ರಾಜ್ಯಗಳು ಕಳೆದ ಬಾರಿ ಮತ್ತು ಈ ಬಾರಿ ಒಂದೆಡೆ ಅತೀವೃಷ್ಟಿ ಮತ್ತೊಂದೆಡೆ ಬರಗಾಲಗಳನ್ನು ಎದುರಿಸಿದವು. ಅದರಿಂದ ಉಂಟಾದ ನಷ್ಟಕ್ಕೆ ಸರಕಾರಗಳು ಸಮರ್ಪಕವಾದ ಪರಿಹಾರವನ್ನು ರೈತರಿಗೆ ನೀಡದೇ ಇರುವುದು, ಈ ಎಲ್ಲವೂ ಸೇರಿ, ದೇಶದಾದ್ಯಂತ ಮತ್ತು ರಾಜ್ಯದಾದ್ಯಂತ ಗ್ರಾಮೀಣ ಪ್ರದೇಶದಲ್ಲಿ ಭಾರೀ ನಿರಾಶೆಯನ್ನು ಹಾಗೂ ಜೀವನದಲ್ಲಿ ಜುಗುಪ್ಸೆಯನ್ನು ಉಂಟು ಮಾಡಿದುದರ ಫಲಿತಾಂಶವೇ ರೈತರ ಈ ತೆರನಾದ ದಾರುಣ ಸಾವುಗಳು!

ಅನೇಕರು ಆರಂಭದ ಲ್ಲುಂಟಾದ ರೈತರ ಆತ್ಮಹತ್ಯೆಗಳಿಗೆ ಸಿಕ್ಕ ಭಾರೀ ಪ್ರಚಾರದಿಂದಾಗಿ, ತಮ್ಮ ಸಾಲದ ಬಾಧೆಗೆ ಪರಿಹಾರವೇನಾದರೂ ಸರಕಾರಗಳಿಂದ ಸಿಗಬಹುದೇ ಎಂದು ಮರಳಿ ನಿರೀಕ್ಷಿಸಿದವರಿಗೆ, ಕೇಂದ್ರ ಹಾಗೂ ರಾಜ್ಯದ ಎರಡೂ ಸರಕಾರಗಳು ನಿರಾಸೆಯನ್ನೇ ಮರಳಿ ನೀಡಿದುದರಿಂದ, ವಿಶ್ವಾಸ ಕಳೆದುಕೊಂಡ ರೈತರು ದಾರುಣ ಸಾವುಗಳ ಸಂಖ್ಯೆಯನ್ನು ವ್ಯಾಪಕವಾಗಿ ವೃದ್ಧಿಸಿದ್ದಾರೆ. ಬಹುಶ: ಈ ಸಾವುಗಳು ಅಂತಹ ಗಂಭೀರವಾದ ಪರಿಹಾರ ಸಿಗದೇ ನಿಲ್ಲುವ ಲಕ್ಷಣಗಳನ್ನು ತೋರುತ್ತಿಲ್ಲ.

4. ಯಾಕೀ ಸಾಲದ ಬಾಧೆ ?

1991 ರಿಂದ ಹೊಸ ಆರ್ಥಿಕ ಹಾಗೂ ಕೃಷಿ

ಪುಟ 14 ಕ್ಕೆ

ಹೆಲಿಕಾಪ್ಟರ್ ತೋರಿಸಿ ವಾಚು ಮಾಯ...

ಪುಟ 8 ರಿಂದ

1800 ಕಾರ್ಮಿಕರು 'ವಿ.ಆರ್.ಎಸ್' ತೆಗೆದುಕೊಂಡು ತೊರೆದರು. ಹೊಸ ನೇಮಕಾತಿಗಳಿಲ್ಲದೆ ಕಾರ್ಖಾನೆಯ ಬೃಹತ್ ಯಂತ್ರಗಳ ಮೇಲೆ ಧೂಳು ಕೂರಲು ಆರಂಭವಾಯಿತು. ಕಳೆದ ಕೆಲವು ವರ್ಷಗಳಿಂದ, 10-15 ತಿಂಗಳುಗಳ ಕಾಲ ವೇತನ ನೀಡದಿರುವುದು, ಭಾಗಶಃ ವೇತನ ನೀಡುವುದು ಸಾಮಾನ್ಯವಾಗಿತ್ತು. ಕಳೆದ ವರ್ಷದ ಹೊತ್ತಿಗೆ ಕೇವಲ 300 ಕಾರ್ಮಿಕರು ಉಳಿದುಕೊಂಡಿದ್ದರು. ತುಮಕೂರು ಎಚ್-ಎಂಟಿ ಕಾರ್ಖಾನೆ ಜಾಗದಲ್ಲಿ ಕಾರ್ಮಿಕರಿಗೆ ವಸತಿ ಗೃಹಗಳನ್ನು ನಿರ್ಮಾಣ ಮಾಡಿಕೊಡಲಾಯಿತು. ಇಂದು ಕೆಲವೇ ಕುಟುಂಬಗಳು ಆ ವಸತಿ ಗೃಹಗಳಲ್ಲಿ ವಾಸ ಮಾಡತೊಡಗಿದ್ದಾರೆ.

ತುಮಕೂರಿನಲ್ಲಿ ಎಚ್ಎಂಟಿ ಗಡಿಯಾರ ತಯಾರಿಕೆ ಘಟಕ ಸ್ಥಾಪನೆಯಾದರೂ ಸಂಶೋಧನೆ ಮತ್ತು ಅಭಿವೃದ್ಧಿ (ಆರ್ ಅಂಡ್ ಡಿ) ಯೂನಿಟ್ ಆರಂಭವಾಗಲಿಲ್ಲ. ಮೊದಲಿಗೆ ಕೆಲ ವರ್ಷಗಳು ಈ ಯೂನಿಟ್ ಕೆಲಸ ಮಾಡಿದರೂ ಪರಿಣಾಮಕಾರಿ ಕೆಲಸ ಆಗಲಿಲ್ಲ. ನಂತರ ಸಂಶೋಧನೆ ಮತ್ತು ಅಭಿವೃದ್ಧಿ ಯೂನಿಟ್ ಇಲ್ಲದಂತೆ ಆಯಿತು. ಸಂಶೋಧನೆ ಬಿಟ್ಟು ವಿದೇಶದಿಂದ ತರಿಸಿಕೊಂಡಿದ್ದ ಬೃಹತ್ ಯಂತ್ರಗಳ ಕುರಿತು ಕಾರ್ಮಿಕ ಸಿಬ್ಬಂದಿಗೆ ಮಾಹಿತಿ ನೀಡಬೇಕಾಗಿತ್ತು. ಅದೂ ಆಗಲಿಲ್ಲ. ಯಂತ್ರಗಳು ಕೆಟ್ಟು ಹೋದರೆ ಬೇರೆ ದೇಶಗಳಿಂದ ಮೆಕಾನಿಕ್‌ಗಳು ಬಂದು ರಿಪೇರಿ ಮಾಡಿ ಹೋಗುವಂತಹ ವ್ಯವಸ್ಥೆ ಇತ್ತು. ಈ ಎಲ್ಲಾ ಕಾರಣಗಳಿಂದಾಗಿ ಎಚ್ಎಂಟಿ ಕಾರ್ಮಿಕರು ಮತ್ತು ನೌಕರರು ಹೊಸ ತಂತ್ರಜ್ಞಾನಕ್ಕೆ ತೆರೆದುಕೊಳ್ಳಲಿಲ್ಲ. ಹಾಗಾಗಿ ಕಾರ್ಖಾನೆ ಅಭಿವೃದ್ಧಿ ಕಾಣಲಿಲ್ಲ ಎಂದು ಸ್ವಯಂ ನಿವೃತ್ತಿ ಪಡೆದಿರುವ ಕಾರ್ಮಿಕರು ಅಳಲು ತೋಡಿಕೊಳ್ಳುತ್ತಾರೆ.

ಕಾರ್ಮಿಕರಿಗೆ ಎಚ್ಚರಿಕೆ ಗಂಟೆ

ತುಮಕೂರು ಎಚ್ಎಂಟಿ ಕಾರ್ಖಾನೆಯಲ್ಲಿ ಜಾತಿ ಗುಂಪುಗಳು ಸಂಘಟಿತಗೊಂಡವು. ಮೊದಮೊದಲು ಎಚ್.ಎಂ.ಟಿ ಉಳಿವಿಗೆ ಹೋರಾಟ ಮಾಡಲಾಯಿತು. ಆದರೆ ಆ ಹೋರಾಟ ತಾರ್ಕಿಕ ಅಂತ್ಯ ತಲುಪಲೇ ಇಲ್ಲ. ಗುಂಪುಗಾರಿಕೆ, ಕೇಂದ್ರ ಸರ್ಕಾರದ ಕಾರ್ಮಿಕರ ವಿರುದ್ಧದ ದಮನಕಾರಿ ನೀತಿಗಳು ಮತ್ತು ಕಾರ್ಮಿಕರನ್ನು ಬೆದರಿಸುತ್ತಿದ್ದ ಕಾರಣದಿಂದಾಗಿ ನಿಧಾನ ಗತಿಯಲ್ಲಿ ಎಚ್ಎಂಟಿ ಸೊರಗಿತು. ಸ್ವಯಂ ನಿವೃತ್ತಿ ಪಡೆದ ಕಾರ್ಮಿಕರು ಇಂದು ಕೇವಲ 550, 1250 ಹೀಗೆ ಕಡಿಮೆ ಪಿಂಚಣಿ ಪಡೆಯುತ್ತಿದ್ದಾರೆ.

ಇಲ್ಲಿನ ಎಚ್ಎಂಟಿ ಕಾರ್ಮಿಕರು ಕಲಾ ಸಂಘವನ್ನು ಕಟ್ಟಿಕೊಂಡು ನಾಟಕಗಳನ್ನು ಆಡಿದರು. ಹಲವು ಪೌರಾಣಿಕ ನಾಟಕಗಳನ್ನು ಆಡಿ ಜನರ ಮನವನ್ನು ಗೆದ್ದಿದ್ದರು. ಆದರೆ ಇಂದು ಆ ಕಲಾವಿದರು ಇಲ್ಲ, ಕಲಾ ಸಂಘವೂ ಇಲ್ಲವಾಗಿದೆ. ಬಿಜೆಪಿ ಸರ್ಕಾರ ಸರ್ಕಾರಿ ಸ್ವಾಮ್ಯದ ಸಾರ್ವಜನಿಕ ಉದ್ದಿಮೆಗಳನ್ನು ಮುಚ್ಚುವ ಮೂಲಕ ಜನ-ಕಾರ್ಮಿಕ ವಿರೋಧಿ ನೀತಿಗಳನ್ನು ಅನುಸರಿಸುತ್ತಿದ್ದರೂ ಯಾರೊಬ್ಬರೂ ಚಕಾರ ಎತ್ತುತ್ತಿಲ್ಲ. ಕೋಟ್ಯಂತರ ರೂಪಾಯಿ ವೆಚ್ಚ ಮಾಡಿ ತಂದ ಬೃಹತ್ ಯಂತ್ರಗಳು ತುಕ್ಕು ಹಿಡಿದಿವೆ. ಕಟ್ಟಡಗಳು ಸೋರುತ್ತಿವೆ. ವಸತಿ ಗೃಹಗಳು ಇದ್ದರಿಂದ ಹೊರತಾಗಿಲ್ಲ.

'ದೇಶದ ಸಮಯಪಾಲಕನ' ನಿರ್ಗಮನ ದೇಶದ ಕಾರ್ಮಿಕರನ್ನು ಎಚ್ಚರಿಸಬೇಕು. 'ಮೇಕ್ ಇನ್ ಇಂಡಿಯಾ'ದ ಮೋಸಕ್ಕೆ ಬಲಿ ಬೀಳಬಾರದು.

ಅತಿಥಿ ಉಪನ್ಯಾಸಕರ ಪ್ರತಿಭಟನೆ.....

ಪುಟ 5 ರಿಂದ

ಅತಿಥಿ ಉಪನ್ಯಾಸಕರು ಕೆಲಸ ಕಳೆದುಕೊಂಡು ಬೀದಿಪಾಲಾಗಲಿದ್ದಾರೆ. ಆದ್ದರಿಂದ ಮತ್ತೆ ಪ್ರತಿಭಟನೆ ನಡೆಸಲು ಅತಿಥಿ ಉಪನ್ಯಾಸಕರು ತೀರ್ಮಾನಿಸಿದ್ದರು.

ಬೆಂಗಳೂರು ನಗರ-ಗ್ರಾಮಂತರ, ಕೋಲಾರ, ಚಿಕ್ಕಬಳ್ಳಾಪುರ, ಚಿಕ್ಕಮಗಳೂರು, ದಕ್ಷಿಣ ಕನ್ನಡ, ಉತ್ತರ ಕನ್ನಡ, ಉಡುಪಿ, ದಾವಣಗೆರೆ, ಚಿತ್ರದುರ್ಗ, ಬಿಜಾಪುರ, ಬೀದರ್, ಬಾಗಲಕೋಟೆ, ಬಳ್ಳಾರಿ, ಕೊಪ್ಪಳ, ರಾಯಚೂರು, ಯಾದಗಿರಿ, ಕಲ್ಬುರ್ಗಿ, ತುಮಕೂರು, ಹಾವೇರಿ, ಹುಬ್ಬಳ್ಳಿ-ಧಾರವಾಡ ಸೇರಿದಂತೆ ಬಹತೇಕ ಎಲ್ಲಾ ಜಿಲ್ಲೆಗಳಲ್ಲಿ ಅತಿಥಿ ಉಪನ್ಯಾಸಕರು ತರಗತಿಗಳನ್ನು ಬಹಿಷ್ಕರಿಸಿ ಪ್ರತಿಭಟನೆ ಮಾಡಿ ಜಿಲ್ಲಾಧಿಕಾರಿಗಳು ಮತ್ತು ತಹಸಿಲ್ದಾರ್ ರವರಿಗೆ ಮನವಿ ಪತ್ರಗಳನ್ನು ತಲುಪಿಸಿದ್ದಾರೆ.



ಬೋನಸ್ ಪಾವತಿ ಕಾಯ್ದೆಗೆ ತಿದ್ದುಪಡಿ

ಪುಟ 4 ರಿಂದ

ಕನಿಷ್ಠ ಹಾಗು ಗರಿಷ್ಠ ಬೋನಸ್ : ಈ ಹೊಸ ತಿದ್ದುಪಡಿಯ ಆಧಾರದಲ್ಲಿ ಕಾರ್ಮಿಕರಿಗೆ "ಕನಿಷ್ಠ 7000/- ರೂ ಬೋನಸ್ ಅಥವಾ ಕನಿಷ್ಠ ವೇತನ ಕಾಯಿದೆ ಅಡಿಯಲ್ಲಿ ಸಂಬಂಧಿತ ಕೈಗಾರಿಕೆಗೆ ನಿಗದಿ ಪಡಿಸಲಾಗಿರುವ ವೇತನ, ಇದರಲ್ಲಿ ಯಾವುದು ಹೆಚ್ಚಾಗಿರುವುದೋ ಆ ಮೊತ್ತ" ಕನಿಷ್ಠ ಬೋನಸ್ ಆಗುತ್ತದೆ. ಈ ಮೊತ್ತವನ್ನು 8.33% ರಷ್ಟು ಬೋನಸ್ ಎಂದು ಪರಿಗಣಿಸಬೇಕು.ಇದೇ ಆಧಾರಲ್ಲಿ ಗರಿಷ್ಠ 20% ಬೋನಸ್‌ನ್ನು ಲೆಕ್ಕ ಹಾಕಬೇಕು. ಅಂದರೆ ಕನಿಷ್ಠ ಬೋನಸ್ ಮೊತ್ತವನ್ನು 2.40ರಿಂದ ಗುಣಿಸಿದರೆ ಬರುವ ಮೊತ್ತ ಗರಿಷ್ಠ (ಶೇ20)ಬೋನಸ್ ಆಗುತ್ತದೆ. ಕಾರ್ಮಿಕರು ಬೋನಸ್ ನೀಡುವ ವರ್ಷದಲ್ಲಿ ಗಳಿಸಿದ ವೇತನಕ್ಕೆ ಅನುಗುಣವಾಗಿ ಈ ಗರಿಷ್ಠ ಹಾಗು ಕನಿಷ್ಠ ಬೋನಸ್‌ನ್ನು ಲೆಕ್ಕ ಹಾಕಬಹುದಾಗಿದೆ.

ಈ ತಿದ್ದುಪಡಿಯು ದಿನಾಂಕ 1.4.2014 ರಿಂದ ಜಾರಿಗೆ ಬಂದಿರುವ ಕಾರಣ, 2014-15ರ ಸಾಲಿನ ಬೋನಸ್‌ನ್ನು 2015ನೇ ವರ್ಷದಲ್ಲಿ ಪಾವತಿ ಮಾಡಬೇಕಾಗುತ್ತದೆ. ಕಾರ್ಮಿಕರಿಗೆ ಈ ಹೊಸ ಪ್ರಮಾಣದಲ್ಲಿ ಲೆಕ್ಕಹಾಕಿ ಈಗಾಗಲೇ ನೀಡಲಾಗಿರುವ ಬೋನಸ್ ಕಡಿಮೆ ಆಗಿದ್ದಲ್ಲಿ ಬಾಕಿ ಪಾವತಿಯನ್ನು ಮಾಲೀಕರು ಮಾಡಬೇಕು.

ಬೋನಸ್ ಕಾಯ್ದೆಯಲ್ಲಿನ ಎಲ್ಲಾ ಮಿತಿಗಳನ್ನು ರದ್ದುಗೊಳಿಸಿ ಎಲ್ಲಾ ಕಾರ್ಮಿಕರಿಗೂ ಬೋನಸ್ ಸಿಗುವಂತೆ ಕಾನೂನಿಗೆ ತಿದ್ದುಪಡಿ ಮಾಡಬೇಕೆಂದು ಕಾರ್ಮಿಕ ಸಂಘಗಳ ಒತ್ತಾಯವಾಗಿದೆ. ಆದರೆ ಕೇಂದ್ರ ಸರ್ಕಾರ ಕೇವಲ ಅರ್ಹತೆಯಾದ ವೇತನ ಮಿತಿಯನ್ನು 10,000 ರಿಂದ 21,000ಕ್ಕೂ ಏರಿಸಿದೆ ಹಾಗು ಕನಿಷ್ಠ ಬೋನಸ್ ಮಿತಿಯನ್ನು ರೂ.3,500/- ರಿಂದ 7,000/- ಏರಿಸಿದೆ.

ಕೆಲವು ಕೈಗಾರಿಕೆಗಳಲ್ಲಿ ಈಗ ನಿಗದಿಯಾಗಿರುವ ಕನಿಷ್ಠ ವೇತನ ರೂ.7000 ಕ್ಕಿಂತಲೂ ಹೆಚ್ಚಾಗಿದೆ. ಅಂತಹ ಕೈಗಾರಿಕೆಯಲ್ಲಿ ದುಡಿಯುವ ಕಾರ್ಮಿಕರಿಗೆ ಈ ತಿದ್ದುಪಡಿ ಸ್ವಲ್ಪ ಮಟ್ಟಿಗೆ ಅನುಕೂಲವಾಗಲಿದೆ.

ಎಚ್.ಎಂ.ಟಿ.ಯ 'ಆತ್ಮಹತ್ಯೆ'ಯ ಕತೆ....

ಪುಟ 8 ರಿಂದ

ಕ್ವಾರ್ಟ್ಸ್ ಅಂಗೀಕಾರದ ಟೈಮಿಂಗ್ ನಲ್ಲಿ ಎಡವಿದ್ದು

ಹಲವರು ತಪ್ಪಾಗಿ ಭಾವಿಸುವಂತೆ ವಾಚಿನಲ್ಲಿ ಹೊಸದಾಗಿ ಬಂದ ಕ್ವಾರ್ಟ್ಸ್ ತಂತ್ರಜ್ಞಾನವನ್ನು ಎಚ್.ಎಂ.ಟಿ. ಅಂಗೀಕರಿಸುವಲ್ಲಿ ವಿಳಂಬ ಮಾಡಿತು ಎಂಬುದೂ ನಿಜವಲ್ಲ. 1981ರಷ್ಟು ಹೊತ್ತಿಗೆ (ಕ್ವಾರ್ಟ್ಸ್ ತಂತ್ರಜ್ಞಾನವನ್ನು ದೊಡ್ಡ ರೀತಿಯಲ್ಲಿ ಅಂಗೀಕರಿಸಿದ ಟೈಟಾನ್ ಹುಟ್ಟುವ ಮೂರು ವರ್ಷ ಮೊದಲೇ) ಅದು ಕ್ವಾರ್ಟ್ಸ್ ವಾಚು ಮಾಡೆಲ್ ಗಳನ್ನು ಮಾರುಕಟ್ಟೆಗೆ ಬಿಟ್ಟಿತ್ತು. ಆದರೆ ಅದು ಮಾರಾಟವಾಗಲಿಲ್ಲ. ಅದರ ಬೆಲೆ ಮತ್ತು ಬ್ಯಾಟರಿಯ ಹೆಚ್ಚಿನ ಖರ್ಚು ತಲೆನೋವಿನಿಂದ ಭಾರತೀಯರು ಅದನ್ನು ಅಂಗೀಕರಿಸುವುದಿಲ್ಲ ಎಂದು ಭಾವಿಸಿ ಅದನ್ನು ಪೂರ್ಣವಾಗಿ ಬಿಟ್ಟುಕೊಟ್ಟಿತು. 1984ರಲ್ಲಿ ಸ್ಥಾಪಿತವಾದ ಟೈಟಾನ್ ಕ್ವಾರ್ಟ್ಸ್ ತಂತ್ರಜ್ಞಾನವನ್ನು ದೊಡ್ಡ ರೀತಿಯಲ್ಲಿ ಅಂಗೀಕರಿಸಿ ಮಾರುಕಟ್ಟೆ ಪಾಲು ಹೆಚ್ಚಿಸಿಕೊಳ್ಳುತ್ತಾ ಹೋಗುತ್ತಿದ್ದಾಗಲೂ ಗಮನಿಸಲಿಲ್ಲ. 1991ರಲ್ಲಿ ಟೈಟಾನ್ ಕ್ವಾರ್ಟ್ಸ್ ಮಾರುಕಟ್ಟೆಯಲ್ಲಿ ಬೇರೂರಿದ ಮೇಲೆ ಎಚ್ಚೆತ್ತುಕೊಂಡು ಪುನಃ ಕ್ವಾರ್ಟ್ಸ್ ತಂತ್ರಜ್ಞಾನ ಆಧಾರಿತ ವಾಚುಗಳನ್ನು ಅವಸರವಾಗಿ ತಯಾರಿಸಲು ಆರಂಭಿಸಿತು. ಅದನ್ನು ಮಾಡುವಲ್ಲೂ ಹಲವು ರೀತಿಗಳಲ್ಲಿ ಮುಗ್ಗರಿಸಿತು. ಅದೂ ಹೆಚ್ಚಿನ ಭಾಗ ಆಮದು, ಹೊರಗುತ್ತಿಗೆ ಮೇಲೆ ಅವಲಂಬಿಸಿತು. ದೀರ್ಘಕಾಲೀನ ಕ್ವಾರ್ಟ್ಸ್ ವಾಚುಗಳ ಉತ್ಪಾದನಾ ವೆಚ್ಚಗಳ ಬಗ್ಗೆ ನಿಗಾ ವಹಿಸಲಿಲ್ಲ. 1984-1994 ಅವಧಿಯಲ್ಲಿ ಸತತವಾಗಿ ಉದಾರೀಕೃತವಾಗುತ್ತಾ ಹೋದ ವಾಚು ಬಿಡಿಭಾಗಗಳ ಆಮದು ಮತ್ತು ಬೆಲೆ, ಮಾರುಕಟ್ಟೆಗೆ ಬಂದ ಹೊಸ ಎಲ್.ಸಿ.ಡಿ./ಎಲ್.ಇ.ಡಿ. ತಂತ್ರಜ್ಞಾನಗಳ ವಾಚುಗಳು, ಆಮದು ಉದಾರೀಕರಣದೊಂದಿಗೆ ವೈವಿಧ್ಯಮಯ ಉತ್ಪನ್ನಗಳ ಲಭ್ಯತೆಯಿಂದ ಬದಲಾದ ಬಳಕೆದಾರರ ಆಯ್ಕೆಗಳು, ಪೈಪೋಟಿಯಲ್ಲಿದ್ದ ಇತರ ಕಂಪನಿಗಳ ವಾಚುಗಳ ಬೆಲೆ - ಇತ್ಯಾದಿಗಳನ್ನು ಗ್ರಹಿಸಿ ಅದಕ್ಕೆ ಪ್ರತಿಸ್ಪಂದಿಸುವಲ್ಲಿ ಎಚ್.ಎಂ.ಟಿ. ಪ್ರಮುಖವಾಗಿ ಸೋತಿತು. ಇವೆಲ್ಲದರ ಒಟ್ಟು ಪರಿಣಾಮವಾಗಿ 1994ರಲ್ಲಿ ಎಚ್.ಎಂ.ಟಿ. 60 ಕೋಟಿ ರೂ. ನಷ್ಟ ಕಂಡಿತು.

1998ರ ಹೊತ್ತಿಗೆ ಇನ್ನೂ ಶೇ. 26 ಮಾರುಕಟ್ಟೆ ಪಾಲು ಹೊಂದಿದ್ದು ಅಲ್ಲಿಂದ ಚೇತರಿಸಿಕೊಳ್ಳಬಹುದಾಗಿದ್ದು, ಅದು 2002 ಹೊತ್ತಿಗೆ ಶೇ. 14 ಮಾರುಕಟ್ಟೆಗೆ ಕುಸಿಯಿತು. 1990ರ ದಶಕದಲ್ಲಿ ಮತ್ತು 2000 ದಶಕದಲ್ಲೂ ತನಗೆ ತಂತ್ರಜ್ಞಾನ, ಉತ್ಪಾದನಾ ವೆಚ್ಚಗಳ ದೃಷ್ಟಿಯಿಂದ ಹಿಡಿತವಿದ್ದ ಮೆಕ್ಯಾನಿಕಲ್ ವಾಚುಗಳನ್ನು ತನ್ನ ಮಾರುಕಟ್ಟೆ ಬಲ ಬಳಸಿ ಮಾರುವುದರ, ವಿದೇಶಿ ಮಾರುಕಟ್ಟೆಗಳಿಗೆ ರಫ್ತು ಮಾಡುವುದರ ಸಾಧ್ಯತೆಯನ್ನು ಗಂಭೀರವಾಗಿ ಪರಿಗಣಿಸಲಿಲ್ಲ. ಕ್ವಾರ್ಟ್ಸ್ ತಂತ್ರಜ್ಞಾನವನ್ನು ಅಂಗೀಕರಿಸಿದ್ದರಿಂದ ಸುಮಾರು ಅದೇ ಪರಿಸ್ಥಿತಿಯಲ್ಲಿದ್ದ ಸ್ವಿಸ್ ವಾಚ್ ತಯಾರಿಕಾ ಕಂಪನಿಗಳು ಅಟೊಮ್ಯಾಟಿಕ್ ವಾಚುಗಳನ್ನು ತಯಾರಿಸಿಯೇ ಸತತವಾಗಿ ಅದೇ ಅವಧಿಯಲ್ಲಿ ರಫ್ತು ಹೆಚ್ಚಿಸಿಕೊಂಡ ಉದಾಹರಣೆಗಳನ್ನು ಕೊಡಲಾಗುತ್ತದೆ. ಅಟೊಮ್ಯಾಟಿಕ್ ಮತ್ತು ಕ್ವಾರ್ಟ್ಸ್ ವಾಚುಗಳ ಸರಿಯಾದ ಪ್ರಮಾಣದಲ್ಲಿ ತಯಾರಿಸಿ ಈ ಅವಧಿಯಲ್ಲಿ ಲಾಭದಾಯಕವಾಗುವುದು ಸಾಧ್ಯವಿತ್ತು.

ಸರಕಾರ ಜವಾಬ್ದಾರಿಯುತ ಮಾಲಕನಾಗಿ ವರ್ತಿಸಿದೆಯೇ?

ಒಟ್ಟಾರೆಯಾಗಿ ಬದಲಾಗುತ್ತಿರುವ ಪರಿಸ್ಥಿತಿಗೆ ಸ್ಪಂದಿಸಬಲ್ಲ - ಉತ್ಪನ್ನಗಳ ನಿರ್ಧಾರ, ಮಾರುಕಟ್ಟೆ, ತಂತ್ರಜ್ಞಾನದ ಆಯ್ಕೆ, ಪೈಪೋಟಿಯ ತಂತ್ರಗಳನ್ನು ಒಟ್ಟಾಗಿ ಹೆಣೆದು - ನಿರ್ವಹಿಸಬಲ್ಲ ವ್ಯೂಹ ಇದ್ದ ಮ್ಯಾನೇಜ್ ಮೆಂಟ್ ನ ಅಭಾವ ಇಲ್ಲದೆ ಎಚ್.ಎಂ.ಟಿ. ತನ್ನ ಗೋರಿ ತೋಡಿಕೊಂಡಿದೆ. ಆತ್ಮಹತ್ಯೆ ಮಾಡಿಕೊಂಡಿದೆ ಎಂದು ಈ ಅರ್ಥದಲ್ಲಿ ಬೂರ್ಜ್ವಾ ಪಂಡಿತರು ಹೇಳುವುದು ನಿಜ. ಆದರೆ ಇಂತಹ ಮ್ಯಾನೇಜ್ ಮೆಂಟ್ ನ್ನು ನೇಮಿಸುವ ತರಬೇತಿ ಮಾಡಿ ತಯಾರಿಸುವ ಜವಾಬ್ದಾರಿ ಯಾರದ್ದು? ಸಾರ್ವಜನಿಕ ಉದ್ಯಮಗಳ ಮಾಲಿಕನಾಗಿರುವ ಸರಕಾರದ್ದಲ್ಲವೇ? 1984-1995 ಅವಧಿಯಲ್ಲಿ ತರುವ ತಂದ ನೀತಿಗಳ ಪರಿಣಾಮಗಳ ಬಗ್ಗೆ ಮ್ಯಾನೇಜ್ ಮೆಂಟ್ ನ್ನು ಎಚ್ಚರಿಸುವುದು ಯೋಜಿಸಲು ಅವಕಾಶ ಕೊಡುವುದು ಬೇಡವೇ? ಅಭಿವೃದ್ಧ ಬಂಡವಾಳಶಾಹಿ ದೇಶಗಳ ಸರಕಾರ ಸಹ ತನ್ನ ದೇಶದ ಉದ್ಯಮಗಳ ಹಿತಾಸಕ್ತಿ ಕಾಯುವುದು ತನ್ನ ಜವಾಬ್ದಾರಿ ಎಂದು ಪರಿಗಣಿಸುತ್ತದೆ. ಬದಲಾಗಿ ಸರಕಾರವೇ ಸಾರ್ವಜನಿಕದ ಉದ್ಯಮಗಳ ಬಗ್ಗೆ ಈ ಅವಧಿಯಲ್ಲಿ ಅಪಪ್ರಚಾರ ಮಾಡಿ ಮ್ಯಾನೇಜ್ ಮೆಂಟ್ ನೈತಿಕ ಸ್ಥೈರ್ಯ ಕುಗ್ಗಿಸಲಿಲ್ಲವೇ? ಅದು ಮ್ಯಾನೇಜ್ ಮೆಂಟ್ ಗಳಿಗೆ ಅಗತ್ಯ ಸ್ವಾಯತ್ತತೆ ಕೊಟ್ಟಿತ್ತೆ? ಅದು ಒಬ್ಬ ಜವಾಬ್ದಾರಿಯುತ ಮಾಲಿಕ ಪ್ರಾಮಾಣಿಕವಾಗಿ ಮಾಡುವ ಪ್ರಯತ್ನ ಮಾಡಿದೆಯೇ? ಮಾಡಿದ್ದರೆ 1998ರಿಂದ ಈಚೆಗೆ ಒಂದು ಕಡೆ ಪುನಶ್ಚೇತನದ ಪ್ರಯತ್ನ ಮಾಡುತ್ತಾ, ಇನ್ನೊಂದು ಕಡೆ 13 ವಿ.ಆರ್.ಎಸ್. ಘೋಷಿಸುವ ತರಾತುರಿ ಯಾಕೆ? 1991ರ ನಂತರದ ನೀತಿಗಳು ಏನಕೇನ ಪ್ರಕಾರೇಣ ಎಲ್ಲಾ ಆರ್ಥಿಕ ಕ್ಷೇತ್ರಗಳನ್ನು ಸಾರ್ವಜನಿಕ ಕ್ಷೇತ್ರಗಳಿಂದ ಖಾಸಗಿ ಕ್ಷೇತ್ರಕ್ಕೆ ಕೊಡುವ ಏಕಮಾತ್ರ ಉದ್ದೇಶ ಹೊಂದಿರುವಾಗ ಇನ್ನೇನು ನಿರೀಕ್ಷಿಸಲು ಸಾಧ್ಯ - ಹತಾಶೆಯ ಆತ್ಮಹತ್ಯೆಯಲ್ಲದೆ. ರೈತರಂತೆ ಸಾರ್ವಜನಿಕ ಉದ್ದಿಮೆಗಳ ಸರಣಿ ಆತ್ಮಹತ್ಯೆಗಳು ಈಗಾಗಲೇ ಆರಂಭವಾಗಿದೆ. ಎಚ್.ಎಂ.ಟಿ. ಅದರಲ್ಲಿ ಮೊದಲನೆಯದೂ ಅಲ್ಲ. ಕೊನೆಯದೂ ಅಲ್ಲ. ಆದರೆ ಗಮನಾರ್ಹವಾದದ್ದು.

ಬೂರ್ಜ್ವಾ ಪಂಡಿತರು ರೈತರ ಬಗೆಗೂ ಇದನ್ನೇ ಹೇಳುತ್ತಾರೆ. ಬದಲಾದ ಪರಿಸ್ಥಿತಿಗೆ ರೈತ ಹೊಂದಿಕೊಳ್ಳುತ್ತಿಲ್ಲ. ಆದರೆ ಬದುಕಿರಲು ಸಾಧ್ಯವೇ ಇಲ್ಲ ಎಂಬ ಪರಿಸ್ಥಿತಿಯನ್ನು ಸರಕಾರ ತನ್ನ ನೀತಿಗಳ ಮೂಲಕ ಸೃಷ್ಟಿಸಿರುವುದರಿಂದ, ಇದು ಆತ್ಮಹತ್ಯೆಗಳಲ್ಲ ಕಗ್ಗೊಲೆಗಳು ಹೇಳುತ್ತೇವಲ್ಲ. ಇದು ಸಾರ್ವಜನಿಕ ಉದ್ದಿಮೆಗಳಿಗೂ ನಿಜ. ಸಾರ್ವಜನಿಕ ಉದ್ದಿಮೆಗಳ ಸರಣಿ ಕಗ್ಗೊಲೆಗಳು ಆರಂಭವಾಗಿವೆ.

'ಮೇಕ್ ಇನ್ ಇಂಡಿಯಾ' ಎಂದರೆ ಸಾರ್ವಜನಿಕ ಉದ್ದಿಮೆಗಳ ಮತ್ತು ಕಾರ್ಮಿಕರ ಸರಣಿ ಕಗ್ಗೊಲೆಗಳು.

ಸದ್ಯದ ಪರಿಸ್ಥಿತಿಯಲ್ಲಿ ಪ್ಯಾಲೆಸ್ಟೀನ್ ಅಂದರೆ ರಾಶಿರಾಶಿ ಮಕ್ಕಳ ಹೆಣ, ಆಗೀಗ ನ್ಯೂಸ್ ಕ್ಲಿಪಿಂಗ್ ಗಳಲ್ಲಿ ಕಂಡು ಮಾಯವಾಗುವ ಆಕ್ರಂದನ, ವರ್ಷಕ್ಕೊಂದು ಸಲವೋ, ಎರಡು ಸಲವೋ ನೆನಪಿಸಿಕೊಂಡು ಮರಗುವ, ಅದಕ್ಕಿಂತ ಹೆಚ್ಚೇನೂ ಮಾಡಲಾಗದ ದೇಶಭಾಷೆ ಗಡಿಮೀರಿದ ಒಂದಷ್ಟು ಹೃದಯಗಳು... ಅಷ್ಟೇ. ನಿಜ ಹೇಳಬೇಕೆಂದರೆ ನಾಲ್ಕೈದು ವರ್ಷಗಳ ಕೆಳಗೆ ನನಗೆ ಪ್ಯಾಲೆಸ್ತೀನ್ ಬಗ್ಗೆ ಇದ್ದ ಅನ್ನಿಸಿಕೆಯೇ ಬೇರೆ. ಆಗೆಲ್ಲ ತನ್ನ ಮೂಲ ನೆಲವನ್ನು ಮರಳಿ ಗಳಿಸಿ, ತಮ್ಮ ಹೀಬ್ರೂ ಹಣತೆಯನ್ನ ಹೊತ್ತಿಸಿಕೊಂಡು ಬಾಳು ಬೆಳಕು ಮಾಡಿಕೊಂಡ ಇಸ್ರೇಲಿಯರು ಹೀರೋಗಳಾಗಿದ್ದರು. ಅದಕ್ಕೆ ಕಾರಣವೂ ಇತ್ತು. ನನಗೆ ಒದಗಿದ್ದ ಪುಸ್ತಕಗಳಲ್ಲವೂ, ಮಾತುಗಳೆಲ್ಲವೂ ಇಸ್ರೇಲ್ ಪರವಾಗೇ ಇದ್ದವು.

- ಚೇತನಾ ತೀರ್ಥಹಳ್ಳಿ

ಒಂದು ಬಲಿಷ್ಠ ಸಿಪಿಐ(ಎಂ) ಕಟ್ಟೋಣ

ನಮ್ಮ ದೇಶದ ಒಂದು ಕ್ರಾಂತಿಕಾರಿ ಸಾಮಾಜಿಕ ಪರಿವರ್ತನೆಯ ತನ್ನ ಜವಾಬ್ದಾರಿಯನ್ನು ನಿರ್ವಹಿಸುವತ್ತ ಮುಂದುವರೆಯಲು ಸಿಪಿಐ(ಎಂ) ಕೊಲ್ಕತಾ ಪ್ಲೀನಮ್‌ನಲ್ಲಿ ತೀರ್ಮಾನಿಸಿದ ಎಲ್ಲ ನಿರ್ಣಯಗಳನ್ನು ಒಂದು ತುರ್ತಿನ ದೃಢತೆಯೊಂದಿಗೆ ಜಾರಿಗೊಳಿಸಲು ಒಂದಾಗಿ ಪ್ರಯತ್ನಿಸಬೇಕು ಎಂದು ಇಡೀ ಪಕ್ಷಕ್ಕೆ, ಅದರ ಎಲ್ಲ ಸದಸ್ಯರಿಗೆ, ಕಾರ್ಯಕರ್ತರಿಗೆ ಮತ್ತು ಹಿತೈಷಿಗಳಿಗೆ ಕರೆ ನೀಡಿದೆ. ಪಕ್ಷದ ಪ್ರಧಾನ ಕಾರ್ಯದರ್ಶಿಗಳು ಈ ನಿರ್ಣಯಗಳ ಸಾರವನ್ನು ಈ ಲೇಖನದಲ್ಲಿ ಕೊಟ್ಟಿದ್ದಾರೆ.

–ಸೀತಾರಾಮ್ ಯೆಚೂರಿ



ಸಿಪಿಐ(ಎಂ)ನ 21 ನೇ ಮಹಾಧಿವೇಶನ "2015ರ ಅಂತ್ಯದೊಳಗೆ" ಸಂಘಟನೆಯ ಕುರಿತ ಒಂದು ಪೂರ್ಣ ಸಮ್ಮೇಳನ(ಪ್ಲೀನಮ್) ನಡೆಸಬೇಕೆಂದು ಆದೇಶ ನೀಡಿತ್ತು. ಅದರಂತೆ ಪ್ಲೀನಮ್ ನಡೆದು ಅದು ತನ್ನ ಕೆಲಸವನ್ನು ಪೂರ್ಣಗೊಳಿಸಿದೆ. ಎಂಟು ತಿಂಗಳ ಅಲ್ಪಾವಧಿಯಲ್ಲೇ ಸಿಪಿಐ(ಎಂ) ಈ ಆದೇಶವನ್ನು ಯಶಸ್ವಿಯಾಗಿ ಪಾಲಿಸಿದೆ ಎಂಬುದು ಒಂದು ಸಾಧನೆಯೇ ಸರಿ.

ಈ ಪ್ಲೀನಮ್ ನಡೆಸಲು ಕೇಂದ್ರ ಸಮಿತಿ ಒಂದು ಸಾಕಷ್ಟು ಸಮಗ್ರವಾದ, ವಿವರವಾದ ವಿಧಾನವನ್ನು ಮತ್ತು ವೇಳಾಪಟ್ಟಿಯನ್ನು ನಿರ್ಧರಿಸಿತ್ತು. ಪಕ್ಷದ ಕೇಂದ್ರ ರಾಜ್ಯಸಮಿತಿಗಳಿಂದ ಪಕ್ಷದ ಸಂಘಟನೆಯ ಪ್ರಸಕ್ತ ಸ್ಥಿತಿ–ಗತಿಗಳ ಬಗ್ಗೆ ವಿಸ್ತಾರವಾದ ಮಾಹಿತಿಯನ್ನು ಸಂಗ್ರಹಿಸಲು ಮತ್ತು ಅದರ ನಿರ್ವಹಣೆಯ ವಿವರಗಳನ್ನು ಪಡೆಯಲು ಒಂದು ವಿವರವಾದ ಪ್ರಶ್ನಾವಳಿಯನ್ನು ಸಿದ್ಧಪಡಿಸಿ ಕಳಿಸಿತು. ರಾಜ್ಯಸಮಿತಿಗಳಿಂದ ಬಂದ ಉತ್ತರಗಳನ್ನು ಆಧರಿಸಿ ಸಂಘಟನೆಯ ಕುರಿತು ಒಂದು ಕರಡು ವರದಿ ಮತ್ತು ಕರಡು ನಿರ್ಣಯ ಎರಡನ್ನೂ ಸಿದ್ಧಪಡಿಸಲಾಯಿತು. ಪಕ್ಷದ ಮಹಾಧಿವೇಶನದ ನಂತರ ಪ್ಲೀನಮ್ ನಡೆಸುವ ಮಧ್ಯದ ಅವಧಿಯಲ್ಲಿ ಪೊಲಿಟ್‌ಬ್ಯುರೊ ನಾಲ್ಕು ಬಾರಿ ಮತ್ತು ಕೇಂದ್ರ ಸಮಿತಿ ಮೂರು ಬಾರಿ ಸಭೆ ಸೇರಿದವು ಎಂಬುದರಿಂದಲೇ ಈ ಸಿದ್ಧತಾ ಕೆಲಸ ಎಷ್ಟು ತೀವ್ರವಾಗಿತ್ತು ಎಂಬುದನ್ನು ಅರ್ಥಮಾಡಿಕೊಳ್ಳಬಹುದು.

ಡಿಸೆಂಬರ್ 27ರಂದು ಕೊಲ್ಕತಾದ ಬ್ರಿಗೇಡ್ ಮೈದಾನದಲ್ಲಿ ಒಂದು ಬೃಹತ್ ಪ್ರಮಾಣದ ರ‍್ಯಾಲಿ ನಡೆಯಿತು. ಅದು ಇತ್ತೀಚಿನ ವರ್ಷಗಳಲ್ಲಿ ಅಲ್ಲಿ ನಡೆದ ಅತಿ ದೊಡ್ಡ ರ‍್ಯಾಲಿ ಎಂದು ಬೂರ್ಜ್ವಾ ಮಾಧ್ಯಮಗಳೂ ಒಪ್ಪಿಕೊಳ್ಳಬೇಕಾಯಿತು. ಅಲ್ಲಿ, ತೃಣಮೂಲ ಕಾಂಗ್ರೆಸಿನ ದಾಳಿಗಳು ಮತ್ತು ಎಲ್ಲ ಅಡೆ–ತಡೆಯ ಪ್ರಯತ್ನಗಳನ್ನು ಧೈರ್ಯದಿಂದ ಎದುರಿಸಿ ಬಂದು ಸೇರಿದ ಅಪಾರ ಜನಸಂದಣಿಯ ಸಂಯೋಜನೆ ಯುವಜನ ಸಿಪಿಐ(ಎಂ)ನತ್ತ ಆಕರ್ಷಿತವಾಗುತ್ತಿಲ್ಲ ಎಂಬ ನಮ್ಮ ವರ್ಗಶತ್ರುಗಳ ಮತ್ತು ಬೂರ್ಜ್ವಾ ಮಾಧ್ಯಮಗಳ ಸುಳ್ಳನ್ನು ಬಯಲಿಗೆಳೆಯಿತು. ಪಶ್ಚಿಮ ಬಂಗಾಲ ರಾಜ್ಯದ ಎಲ್ಲಡೆಗಳಿಂದ ಯುವಜನರು ರ‍್ಯಾಲಿಯಲ್ಲಿ ಅತ್ಯುತ್ಸಾಹದಿಂದ ಭಾಗವಹಿಸಿದರು. ರ‍್ಯಾಲಿಯ ನಂತರ ಅಪರಾಹ್ನದಿಂದ ಪ್ಲೀನಮ್ ಕಲಾಪಗಳು ಆರಂಭವಾದವು.

ಒಂದು ಕಮ್ಯುನಿಸ್ಟ್ ಪಕ್ಷಕ್ಕೆ ಪಕ್ಷದ ಸಂಘಟನೆಯ ಮಹತ್ವದ ಬಗ್ಗೆ ಎಷ್ಟು ಹೇಳಿದರೂ ಕಡಿಮೆಯೇ. ಅದು ಪಕ್ಷದ ತಿಳುವಳಿಕೆಯನ್ನು ಮತ್ತು ರಾಜಕೀಯ ಧೋರಣೆಯನ್ನು ಭಾರತೀಯ ಜನತೆಯ ವಿಶಾಲ ಜನಸಮೂಹಗಳಿಗೆ ಒಯ್ಯುವ ಪ್ರಧಾನ ಅಸ್ತ್ರ. ಒಂದು ಸುಸಜ್ಜಿತ ಮತ್ತು ದಕ್ಷ ಪಕ್ಷದ ಸಂಘಟನೆಯಿಲ್ಲದೆ ಭಾರತೀಯ ಜನತೆಯೊಡನೆ ಆಳವಾದ ಸಂಪರ್ಕಗಳನ್ನು ಬೆಳೆಸುವುದು ಮತ್ತು ಅವರ ಹಿತಾಸಕ್ತಿಗಳನ್ನು ಪ್ರತಿಪಾದಿಸುವುದು ಸಾಧ್ಯವಿಲ್ಲ.

ಜನಸಮೂಹಗಳ ಧೋರಣೆಯ ಕ್ರಾಂತಿಕಾರಿ ಪಕ್ಷ

ಪ್ಲೀನಮ್‌ನ ಯಶಸ್ವಿ ಮುಕ್ತಾಯ ಪಕ್ಷದ ಸಂಘಟನೆಯನ್ನು ಪುನಶ್ಚೇತನಗೊಳಿಸುವ ಮತ್ತು ಪಕ್ಷದ ಎಲ್ಲ ಸದಸ್ಯರಲ್ಲಿ ಹೊಸ ಉತ್ಸಾಹವನ್ನು ತುಂಬುವ, ಆಮೂಲಕ ನಮ್ಮ ಗುರಿಗಳನ್ನು ಸಾಧಿಸಲು ಹೆಚ್ಚು ವೇಗದಿಂದ ಮುನ್ನಡೆಯುವಂತಾಗುವ ಪ್ರಕ್ರಿಯೆ ಆರಂಭವಾಗಿದೆ. ಪಕ್ಷದ 21ನೇ ಮಹಾಧಿವೇಶನ ರಾಜಕೀಯ ನಿರ್ಣಯವನ್ನು ಅಂಗೀಕರಿಸಿದೆ, ತನ್ನ ರಾಜಕೀಯ–ಕಾರ್ಯತಂತ್ರಾತ್ಮಕ ಧೋರಣೆಯ ವಿಮರ್ಶೆ ನಡೆಸಿ ಮುಂದಿನ ಮೂರು ವರ್ಷಗಳಿಗೆ ರಾಜಕೀಯ–ಕಾರ್ಯತಂತ್ರಾತ್ಮಕ ಧೋರಣೆಯನ್ನು ಹಾಕಿಕೊಟ್ಟು, ಎಡ ಮತ್ತು ಪ್ರಜಾಪ್ರಭುತ್ವವಾದಿ ರಂಗಕ್ಕೆ ಮತ್ತೆ ಮೊದಲ ಸ್ಥಾನವನ್ನು ಕೊಟ್ಟಿದೆ. ಆದ್ದರಿಂದ ಈ ಪ್ಲೀನಮ್ ಈ ಗುರಿಗಳನ್ನು ಈಡೇರಿಸಲು ನಮ್ಮ ಪಕ್ಷದ ಸಂಘಟನಾ ಸಾಮರ್ಥ್ಯಗಳನ್ನು ಬಲಪಡಿಸಲು ಮತ್ತು ಸುಸಜ್ಜಿತಗೊಳಿಸಲು ಗಮನ ಕೇಂದ್ರೀಕರಿಸಿತು.

ಪ್ರಸಕ್ತ ಸವಾಲುಗಳನ್ನು ಎದುರಿಸುವ ಸಿಪಿಐ(ಎಂ)ನ ದೃಢನಿರ್ಧಾರವನ್ನು ಈ ರೀತಿ ದ್ವಿಗುಣಗೊಳಿಸಿರುವುದನ್ನು ಮುಂದೊಯ್ಯುವುದು ಇನ್ನೂ ಬಲಿಷ್ಟವಾದ ಜನತಾ ಹೋರಾಟಗಳನ್ನು ಹರಿಯ ಬಿಡುವುದರ ಮೂಲಕ ಮಾತ್ರವೇ ಸಾಧ್ಯ. ಇದರ ನೇರ ಅರ್ಥವೆಂದರೆ ನಮ್ಮ ಪಕ್ಷದ ಸ್ವತಂತ್ರ ಶಕ್ತಿಯನ್ನು ದೊಡ್ಡ ಪ್ರಮಾಣದಲ್ಲಿ ವಿಸ್ತರಿಸಬೇಕಾಗಿದೆ. ಇದು ಭಾರತೀಯ ಜನತೆಯ ನಡುವೆ ವರ್ಗಶಕ್ತಿಗಳ ಬಲಾಬಲವನ್ನು ಎಡ ಮತ್ತು ಪ್ರಜಾಪ್ರಭುತ್ವವಾದಿ ರಂಗದ ಪರವಾಗಿ ಬದಲಿಸಬೇಕಾಗಿದೆ ಎಂಬುದನ್ನು ಒತ್ತಿ ಹೇಳಿರುವ ನಮ್ಮ ಅಂಗೀಕೃತ ರಾಜಕೀಯ–ಕಾರ್ಯತಂತ್ರಾತ್ಮಕ ಧೋರಣೆಗೆ ಅನುಗುಣವಾಗಿ ಇರಬೇಕು. ಈ ಎಡ ಮತ್ತು ಪ್ರಜಾಪ್ರಭುತ್ವವಾದಿ ರಂಗ ಭಾರತೀಯ ಜನತೆ ಬೂರ್ಜ್ವಾ ಪಕ್ಷಗಳು ಅಥವ ಅವುಗಳ ಕೂಟಗಳ ಮರ್ಜಿಗೆ ಒಳಗಾಗಿ ಅವುಗಳಲ್ಲಿ ಒಂದಿಲ್ಲೊಂದನ್ನು ಆರಿಸಿಕೊಳ್ಳಬೇಕಾದ ಪರಿಸ್ಥಿತಿಯಲ್ಲಿ ಬಿಟ್ಟುಬಿಡುವ ಬದಲಾಗಿ ಅವರ ಮುಂದೆ, ಒಂದು ಪರ್ಯಾಯ ಧೋರಣೆಗಳನ್ನು ಆಧರಿಸಿದ ವರ್ಗ ಪರ್ಯಾಯವನ್ನು ಇಡಬಹುದಾದಷ್ಟು ಬಲಿಷ್ಟವಾಗಿರಬೇಕಾಗುತ್ತದೆ. ಈ ಎಡ ಮತ್ತು ಪ್ರಜಾಪ್ರಭುತ್ವವಾದಿ ರಂಗ ಭಾರತೀಯ ಜನತೆಯ ನಡುವೆ ವರ್ಗಶಕ್ತಿಗಳ ಬಲಾಬಲವನ್ನು ಬದಲಿಸಿ ಜನತಾ ಪ್ರಜಾಪ್ರಭುತ್ವ ರಂಗದ ಐಕ್ಯತೆಯನ್ನು ಬೆಸೆಯುವುದಕ್ಕೆ ಪೀಠಿಕೆಯಾಗುತ್ತದೆ. ಭಾರತದ ಕ್ರಾಂತಿ ಈ ಜನತಾ ಪ್ರಜಾಪ್ರಭುತ್ವ ರಂಗದ ನಾಯಕತ್ವದಲ್ಲಿಯೇ ಜನತಾ ಪ್ರಜಾಪ್ರಭುತ್ವದ ಮೂಲಕ ಸಮಾಜವಾದಕ್ಕೆ ಮುನ್ನಡೆಯುತ್ತದೆ.

ಹೀಗೆ ಪ್ಲೀನಮ್ ಸಿಪಿಐ(ಎಂ) ಮಾರ್ಕ್ಸ್‌ವಾದ–ಲೆನಿನ್‌ವಾದದ ತತ್ವಗಳ ಮೇಲೆ ಆಧರಿಸಿರುವ ಒಂದು ಕ್ರಾಂತಿಕಾರಿ ಪಕ್ಷ ಎಂಬ ಅದರ ಚಾರಿತ್ರ್ಯವನ್ನು ಪುನರುಚ್ಚರಿಸಿದೆ, ಜತೆಗೆ ಈಗಿನ ಕಾಲಘಟ್ಟದಲ್ಲಿ ಭಾರತೀಯ ಜನತೆಯೊಂದಿಗೆ ಕೊಂಡಿಗಳನ್ನು ಬಲಪಡಿಸುವುದು ಅದರ ಧೋರಣೆಯಾಗಿರುತ್ತದೆ, **ಅಂದರೆ ಅದು ಜನಸಮೂಹಗಳ ಧೋರಣೆಯ ಕ್ರಾಂತಿಕಾರಿ ಪಕ್ಷ**ವಾಗಿರುತ್ತದೆ.

ಸಂಘಟನಾ ಸಾಮರ್ಥ್ಯಗಳನ್ನು ಬಲಪಡಿಸಬೇಕು

ಈ ಕ್ರಾಂತಿಕಾರಿ ಗುರಿಗಳು ಈಡೇರಬೇಕಾದರೆ ಅದು ಪಕ್ಷದ ಸಂಘಟನಾ ಸಾಮರ್ಥ್ಯಗಳನ್ನು ವ್ಯಾಪಕವಾಗಿ ಬೆಳೆಸದೆ ಸಾಧ್ಯವಿಲ್ಲ. ಆದರೆ ಇವು ಅಗಾಧ ಸವಾಲುಗಳು. ಬಿಕ್ಕಟ್ಟು ಜಾಗತಿಕವಾಗಿ, ನಮ್ಮ ದೇಶದಲ್ಲಿ ಮತ್ತು ಸಮಾಜದಲ್ಲಿಯೂ ತ್ವರಿತವಾಗಿ ಆಳಗೊಳ್ಳುತ್ತಲೇ ಇದೆ. "ಪ್ರತಿ ಬಿಕ್ಕಟ್ಟಿನ ಪರಿಸ್ಥಿತಿಯಲ್ಲೂ ಒಂದು ಅವಕಾಶ ಇರುತ್ತದೆ" ಎಂದೊಂದು ಹಳೆಯ ಜಾಣ್ನುಡಿ ಹೇಳುತ್ತದೆ. ಈ ಪ್ಲೀನಮ್‌ನಲ್ಲಿ ಸಿಪಿಐ(ಎಂ) ಇಂತಹ ಮುನ್ನಡೆಯ ಅವಕಾಶಗಳನ್ನು ಬಾಚಿಕೊಳ್ಳಲು ನಿರ್ಧರಿಸಿತು.

ಬಂಡವಾಳಶಾಹಿಯ ಅಡಿಯಲ್ಲಿ ಎಷ್ಟೇ ಸುಧಾರಣೆಗಳನ್ನು ಮಾಡಿದರೂ ಅದು ಜನತೆಯನ್ನು ತೀಕ್ಷ್ಣಗೊಳ್ಳುತ್ತಿರುವ ಶೋಷಣೆಯಿಂದ ಮುಕ್ತಗೊಳಿಸಲಾರದು ಎಂದು ಜಾಗತಿಕ ಬಿಕ್ಕಟ್ಟು ತೋರಿಸುತ್ತಿರುವ ಸನ್ನಿವೇಶದಲ್ಲಿ ನಮ್ಮ ಜನತೆಯ ಎಲ್ಲ ಶೋಷಿತ ವರ್ಗಗಳ ಬೆಂಬಲವನ್ನು ಅಣಿನೆರೆಸುವಲ್ಲಿ ಕಾರ್ಮಿಕ ವರ್ಗದ ರಾಜಕೀಯ ಪಕ್ಷವಾಗಿ ಮುನ್ನಡೆಯುವ ಸಾಧ್ಯತೆ ಸಿಪಿಐ(ಎಂ)ಗೇ ಚೆನ್ನಾಗಿ ಇರುವುದು. ಇದು ಸಮಾಜವಾದದ ರಾಜಕೀಯ ಪರ್ಯಾಯದಿಂದ ಮಾತ್ರ ಸಾಧ್ಯ. ಅಲ್ಲದೆ ಸಿಪಿಐ(ಎಂ) ಬಳಿ ಭಾರತಕ್ಕೆ ಒಂದು ಪರ್ಯಾಯ ಧೋರಣೆ–ಯ ಚೌಕಟ್ಟು ಇದೆ. ಇದು ಜನತೆಗೆ ತಮ್ಮಲ್ಲಿಯೇ ಅಡಕವಾಗಿರುವ ಸಾಮರ್ಥ್ಯವನ್ನು ಅರಿತುಕೊಂಡು ಅದರ ಆಧಾರದಲ್ಲಿ ಒಂದು ಉತ್ತಮ ಭಾರತವನ್ನು ನಿರ್ಮಿಸಬಲ್ಲದು. ಈ ಪರ್ಯಾಯ ಭಾರತೀಯ ಯುವಜನರಿಗೆ ಗುಣಮಟ್ಟದ ಶಿಕ್ಷಣ, ಉತ್ತಮ ಆರೋಗ್ಯ ಮತ್ತು ತಾಳಿಕೆಯ ಉದ್ಯೋಗವನ್ನು ಒದಗಿಸಿ, ನಮ್ಮ ದೇಶದ ಸಂಪನ್ಮೂಲಗಳನ್ನು ಕ್ರೋಡೀಕರಿಸಿ ಒಂದು ಉತ್ತಮ ಭವಿಷ್ಯದ ಕಣ್ಣೋಟವನ್ನು ಒದಗಿಸುತ್ತದೆ. ಇದು ಆರ್ಥಿಕ ಅಸಮಾನತೆಗಳನ್ನು ಅಗಾಧ ಪ್ರಮಾಣದಲ್ಲಿ ಇನ್ನಷ್ಟು ಹೆಚ್ಚಿಸುವ ಪ್ರಸಕ್ತ ಧೋರಣೆಗಳಿಗೆ ತದ್ವಿರುದ್ಧವಾಗಿದೆ.

ಸಿಪಿಐ(ಎಂ) ನಮ್ಮ ಬಹು–ಧರ್ಮೀಯ, ಬಹುಭಾಷಿಕ, ಬಹುಸಂಸ್ಕೃತಿಯ, ಬಹುಜನಾಂಗೀಯ ಜನಸಮೂಹಗಳ ಐಕ್ಯತೆಯನ್ನು ನಿರಂತರವಾಗಿ ಪ್ರತಿಪಾದಿಸುತ್ತ, ಇಂತಹ ಐಕ್ಯತೆಯನ್ನು ಛಿದ್ರಗೊಳಿಸಲು ಕೋಮುಧ್ರುವೀಕರಣವನ್ನು ತೀಕ್ಷ್ಣಗೊಳಿಸುವ ಎಲ್ಲ ಪ್ರಯತ್ನಗಳ ವಿರುದ್ಧ ಹೋರಾಟ ಮಾಡುತ್ತ ಬಂದಿರುವ ರಾಜಕೀಯ ಶಕ್ತಿಯಾಗಿದೆ, ಆರೆಸ್ಸೆಸ್/ಬಿಜೆಪಿ ತಮ್ಮ ಉನ್ಮತ್ತ ಅಸಹಿಷ್ಣು ಫ್ಯಾಸಿಸ್ಟ್ ಮಾದರಿಯ 'ಹಿಂದೂರಾಷ್ಟ್ರ'ದ ಯೋಜನೆಯನ್ನು ಹೇರುವ ಹುನ್ನಾರಗಳನ್ನು ಮುರಿಯುತ್ತ ಬಂದಿದೆ. ಅದೇ ಕಾಲಕ್ಕೆ, ಸಿಪಿಐ(ಎಂ) ಎಲ್ಲ ಛಾಯೆಗಳ ಭಯೋತ್ಪಾದನೆ ಮತ್ತು ಮೂಲಭೂತವಾದದ ವಿರುದ್ಧವೂ ಎಡೆಬಿಡದೆ ಹೋರಾಡಿಕೊಂಡು ಬಂದಿದೆ. ಬಹುಸಂಖ್ಯಾತ ಕೋಮುವಾದ ಮತ್ತು ಅಲ್ಪಸಂಖ್ಯಾತ ಮೂಲಭೂತವಾದ ಪರಸ್ಪರರಿಗೆ ಉಣಿಸಿ ಬಲಪಡಿಸುವಂತವುಗಳು. ಸಿಪಿಐ(ಎಂ) ತಾರತಮ್ಯ ಮತ್ತು ದಮನದ ಎಲ್ಲ ತರಹೆಗಳ ಅಭಿವ್ಯಕ್ತಿಗಳ ವಿರುದ್ಧ, ಜತೆಗೆ ಜಾತಿ ಆಧಾರಿತ ಅಸ್ಪೃಶ್ಯತೆಯನ್ನು ನಿರ್ಮೂಲ ಮಾಡಲು ಆಂದೋಲನಗಳನ್ನು ತೀಪ್ರಗೊಳಿಸುತ್ತದೆ. ರಾಜಕೀಯ ನೈತಿಕತೆ ತ್ವರಿತವಾಗಿ ಅವನತಿಯ ಕೆಸರಿನಲ್ಲಿ ಸಿಲುಕುತ್ತಿರುವಾಗ, ಸಿಪಿಐ(ಎಂ) ಸಾರ್ವಜನಿಕ ಜೀವನದಲ್ಲಿ ಭ್ರಷ್ಟಾಚಾರ ಮತ್ತು ನೈತಿಕ ಅಧಃಪತನಕ್ಕೆ ಎದುರಾಗಿ ಹೋರಾಡುವ ಒಂದು ಉದಾಹರಣೆಯಾಗಿ ನಿಂತಿದೆ.

ನಮಗೆ ಸಿಪಿಐ(ಎಂ)ನ ಈ ದಾಖಲೆ ಇದನ್ನು ಪಕ್ಷದ ಗುರಿಗಳ ಸಾಧನೆಗಾಗಿ ಮತ್ತಷ್ಟು ಮುಂದುವರೆಸಿ ಸಂಘಟನೆಯನ್ನು ಚುರುಕುಗೊಳಿಸುವ ಅವಕಾಶವನ್ನು ಒದಗಿಸುತ್ತದೆ.

ಮೂರ್ತ ಪರಿಸ್ಥಿತಿಗಳ ಮೂರ್ತ ವಿಶ್ಲೇಷಣೆ

ಸಿಪಿಐ(ಎಂ) ಸದಾ "ಮೂರ್ತ ಪರಿಸ್ಥಿತಿಗಳ ಮೂರ್ತ ವಿಶ್ಲೇಷಣೆ ದ್ವಂದ್ವಾತ್ಮಕತೆಯ ಸಾರ" ಎಮಬ ಲೆನಿನ್‌ವಾದಿ ಸೂಕ್ತಿಯನ್ನು ಪ್ರತಿಪಾದಿಸಿಕೊಂಡು ಬಂದಿದೆ. ಇದನ್ನು ಅನುಸರಿಸಿ ಸಿಪಿಐ(ಎಂ) ಕಳೆದ ಎರಡು ದಶಕಗಳ ನವ–ಉದಾರವಾದದ ಅಡಿಯಲ್ಲಿ ಆಗಿರುವ ಮೂರ್ತಬದಲಾವಣೆಗಳ ಅಧ್ಯಯನ ನಡೆಸಲು ಮೂರು ಅಧ್ಯಯನ ಗುಂಪುಗಳನ್ನು ರಚಿಸಿತು. ಈ ಅಧ್ಯಯನ ಗುಂಪುಗಳಲ್ಲಿ ಕಂಡುಬಂದ ಅಂಶಗಳ ಆಧಾರದಲ್ಲಿ ಪ್ಲೀನಂ ವರ್ಗ ಮತ್ತು ಸಾಮೂಹಿಕ ಹೋರಾಟಗಳನ್ನು ಈ ರೀತಿ ಬಲಪಡಿಸಲು ನಿರ್ಧರಿಸಿತು:

- ಭೂಮಾಲಕ–ಗ್ರಾಮೀಣ ಶ್ರೀಮಂತರ ಕೂಟದ ವಿರುದ್ಧ ಕೃಷಿ ಕಾರ್ಮಿಕರು, ಬಡ ರೈತರು, ಮಧ್ಯಮ ರೈತರು, ಕೃಷಿಯೇತರ ವಿಭಾಗಗಳ ಗ್ರಾಮೀಣ ಕಾರ್ಮಿಕರು, ಕೈಕಸಬುದಾರರು ಮತ್ತು ಇತರ ಗ್ರಾಮೀಣ ಬಡವಿಭಾಗಗಳ ಒಂದು ವಿಶಾಲ ರಂಗವನ್ನು ಬೆಸೆಯುವ ಮೂಲಕ;
- ಪ್ರಮುಖ ಮತ್ತು ಆಯಕಟ್ಟಿನ ಉದ್ದಿಮೆಗಳಲ್ಲಿ ಕಾರ್ಮಿಕರನ್ನು ಸಂಘಟಿಸುವ ಮೂಲಕ;
- ಸಂಘಟಿತ ಮತ್ತು ಅಸಂಘಟಿತ ವಲಯಗಳೆರಡರಲ್ಲೂ ಗುತ್ತಿಗೆ ಕಾರ್ಮಿಕರನ್ನು ಸಂಘಟಿಸುವ ಮೂಲಕ;
- ಕಾರ್ಮಿಕ ಸಂಘಗಳು, ಯುವಜನ, ಮಹಿಳಾ ಇತ್ಯಾದಿ ಸಂಘಟನೆಗಳ ಸಹಯೋಗದಿಂದ ಪ್ರದೇಶ–ಆಧಾರಿತ ಸಂಘಟನೆಗಳನ್ನು ಸ್ಥಾಪಿಸುವ ಮೂಲಕ;
- ನಗರ ಪ್ರದೇಶಗಳ ಬಡವರನ್ನು ಕೇರಿ/ಪ್ರದೇಶಗಳಲ್ಲಿ ಸಂಘಟಿಸುವ ಮೂಲಕ;
- ವೃತ್ತಿ ಆಧಾರಿತ ನೆರೆಕರೆ–ಮೊಹಲ್ಲಾ–ಕೇರಿ ಸಮಿತಿಗಳ ಮೂಲಕ;
- ಮಧ್ಯಮ ವರ್ಗಗಳ ನಡುವೆ ಕೆಲಸವನ್ನು, ನಿರ್ದಿಷ್ಟವಾಗಿ ಸೈದ್ಧಾಂತಿಕ ಕೆಲಸವನ್ನು ನಾಗರಿಕ ವೇದಿಕೆಗಳು, ಸಾಂಸ್ಕೃತಿಕ ಚಟುವಟಿಕೆಗಳನ್ನು/ಕ್ರಿಯೆಗಳನ್ನು, ವೈಜ್ಞಾನಿಕ ಮನೋಭಾವ ಮತ್ತು ಇತರ ಅವರ ಬದುಕು ಮತ್ತು ಕೆಲಸಕ್ಕೆ ಸಂಬದಪಟ್ಟ ಕ್ರಿಯೆಗಳನ್ನು ಪ್ರೋತ್ಸಾಹಿಸುವ ವೇದಿಕೆಗಳು ಇತ್ಯಾದಿಗಳಿಂದ ಬಲಪಡಿಸುವ ಮೂಲಕ;
- ವಸತಿಗಾರರ ಸಂಘಗಳು, ನಿವೃತ್ತಿದಾರರ ಸಂಘಟನೆಗಳು ಮತ್ತು ವೃತ್ತಿಪರ ಸಂಸ್ಥೆಗಳಲ್ಲಿ ಕೆಲಸವನ್ನು ಬಲಪಡಿಸುವ ಮೂಲಕ.

ಪುಟ 14 ಕ್ಕೆ

ಕಚ್ಚಾ ತೈಲ ಬೆಲೆ ಇಳಿದಂತೆ ಮತ್ತೆ ಪೆಟ್ರೋಲ್, ಡೀಸೆಲ್ ಸುಂಕಗಳಲ್ಲಿ ಏರಿಕೆ?

ಅಂತರ್ರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲ ಬೆಲೆಗಳು ನೀರಿನ ಬೆಲೆಗಿಂತಲೂ ಕೆಳಕ್ಕೆ ಹೋಗುತ್ತಿವೆ ಎಂಬ ಸುದ್ದಿಯೊಂದಿಗೆ ಮೋದಿ ಸರಕಾರ ಎಂಟನೇ ಬಾರಿಗೆ ಪೆಟ್ರೋಲ್ ಮತ್ತು ಡೀಸೆಲ್ ಮೇಲೆ ಅಬಕಾರಿ ಸುಂಕಗಳನ್ನು ಏರಿಸಬಹುದೆಂಬ ಸುದ್ದಿಯೂ ಬಂದಿದೆ. ಅಂದರೆ ಮತ್ತೆ ಈ ಕಚ್ಚಾ ತೈಲ ಬೆಲೆ ಇಳಿಕೆಯ ಪ್ರಯೋಜನ ಕೇವಲ ಆಳುವವರಿಗೆ ದಕ್ಕುವಂತೆ, ಜನಸಾಮಾನ್ಯರಿಗೆ ದಕ್ಕದಂತೆ ಮಾಡುವ ಹುನ್ನಾರ.

ಈಗಿನ 'ಒಳ್ಳೆಯ ದಿನ'ಗಳು ಬರುವ ಮೊದಲು ಅಂತರ್ರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲ ಬೆಲೆಯೇರಿದಾಗಲೆಲ್ಲ ಪೆಟ್ರೋಲ್, ಡೀಸೆಲ್ ಬೆಲೆಗಳೂ ಅದಕ್ಕಿಂತ ಹೆಚ್ಚಿನ ಪ್ರಮಾಣದಲ್ಲೇ ಏರುತ್ತಿದ್ದವು. ಇದರಿಂದ ಅವುಗಳ ಮೇಲಿನ ಸುಂಕಗಳ ಆದಾಯವೂ ಹೆಚ್ಚಿನ ಪ್ರಮಾಣದಲ್ಲಿ ಸರಕಾರಕ್ಕೆ ದಕ್ಕುತ್ತಿದ್ದರೂ, ಅದನ್ನು ಇಳಿಸಿ ಜನಸಾಮಾನ್ಯರ ಮೇಲಿನ ಹೊರೆಯನ್ನು ಇಳಿಸುವ ಯಾವ ಬೇಡಿಕೆಯನ್ನೂ ಮನ್ನಿಸಿರಲಿಲ್ಲ. ನಿಜ, ಆಗ ಪ್ರತಿಪಕ್ಷವಾಗಿದ್ದ ಈಗಿನ ಆಳುವ ಪಕ್ಷ ಇಂತಹ ಬೇಡಿಕೆಯನ್ನೂ ಇಡುತ್ತಿರಲಿಲ್ಲ.

ಆದರೆ ಈಗ 'ಒಳ್ಳೆಯ ದಿನ'ಗಳು ಭರವಸೆ ಕೊಟ್ಟ ಮೇಲೂ ಬೆಲೆ ಇಳಿಕೆಯ ಪ್ರಯೋಜನ ಪೂರ್ಣವಾಗಿ ಜನಸಾಮಾನ್ಯರಿಗೆ ತಲುಪದಂತೆ ಮಾಡಲಾಗುತ್ತಿದೆ.


ಜನವರಿ 7ರಂದು ಭಾರತದ ಬಂದರುಗಳಿಗೆ ಕಚ್ಚಾತೈ;ಲ ಬರುವಾಗ ಅದರ ಬೆಲೆ ಲೀಟರಿಗೆ ರೂ.12.60. ಒಂದು ಲೀಟರ್ ಬಾಟ್ಲಿ ನೀರಿನ ಬೆಲೆ 15–20ರೂ. ಇದೆ. ಆದರೆ ಜನತೆ ಪೆಟ್ರೋಲ್, ಡೀಸೆಲ್‌ಗೆ ನಾಲ್ಕು ಪಟ್ಟಿಗಿಂತಲೂ ಹೆಚ್ಚು ತೆರಬೇಕಾಗಿದೆ.

ಈ ಹಿಂದೆ ಈ ಅಂಕಣದಲ್ಲಿ ಹೇಳಿರುವಂತೆ ಈ ಸರಕಾರ ಅಧಿಕಾರ ವಹಿಸಿಕೊಂಡಾಗ ಕಚ್ಚಾತೈಲದ ಬೆಲೆ ಬ್ಯಾರಲ್ಲಿಗೆ 115 ಅಮೆರಿಕನ್ ಡಾಲರ್ ಇತ್ತು. ಈಗ ಅದು 30 ಡಾಲರಿಗಿಂತಲೂ ಕೆಳಕ್ಕೆ ಹೋಗಿದೆ.


ಡಿಸೆಂಬರ್‌ನಲ್ಲಿ ಬಳಕೆದಾರರ ಬೆಲೆ ಸೂಚ್ಯಂಕದಲ್ಲಿ ಏರಿಕೆಗೆ ಪೆಟ್ರೋಲ್, ಡೀಸೆಲ್ ಸುಂಕ ಏರಿಕೆಗಳ ಕೊಡುಗೆಯೂ ಇದೆ ಎಂದು ಕ್ರೈಸಿಲ್ ಸಂಸ್ಥೆ ಹೇಳಿದೆ.

ಆದರೂ ಮೋದಿ ಸರಕಾರ ತನ್ನ ಹಣಕಾಸಿನ ಕೊರತೆ ನೀಗಿಸಲು ಪೆಟ್ರೋಲ್ ಮತ್ತು ಡೀಸೆಲ್ ಅಬಕಾರಿ ಸುಂಕ ಮೊದಲಾದ ಜನಸಾಮಾನ್ಯರನ್ನು ತಟ್ಟುವ ಬಾಬ್ತುಗಳ ಮೇಲೆಯೇ ಗಮನ ಕೇಂದ್ರೀಕರಿಸಿರುವಂತೆ ಕಾಣುತ್ತದೆ.

ಕೈಗಾರಿಕಾ ರಂಗದಲ್ಲಿ ನಿರುತ್ಸಾಹಕರ ವಾತಾವರಣ–ಸುದ್ದಿ
ನೋಡಿ, ಕೈಗಾರಿಕಾ ರಂಗದಲ್ಲಿ ಸರಕು ಉತ್ಪಾದನೆ, ಗಣಿಗಾರಿಕೆ, ವಿದ್ಯುತ್ ಉತ್ಪಾದನೆ ಎಲ್ಲವೂ ಇಳಿಯುತ್ತಿವೆ, ಘಾಸಿಗೊಂಡ ಭಾವನೆಗಳ ಉದ್ದಿಮೆ ಮಾತ್ರ ಏರುತ್ತಲೇ ಇದೆ!



ವ್ಯಂಗ್ಯಚಿತ್ರ: ಸಂದೀಪ್, ಟೈಂಸ್ ಆಫ್ ಇರಡಿಯಾ



ಅಸಹಿಷ್ಣುತೆ ಈ ವಾರ

ಗುಲಾಂ ಅಲಿ ಸಂಗೀತ ಕಾರ್ಯಕ್ರಮದ ವಿರುದ್ಧ ರಾಜ್ಯಪಾಲರ 'ಟ್ವೀಟ್'!

"ಪಾಕ್ ಹಾಡುಗಾರ ಗುಲಾಂ ಅಲಿ ಕೊಲ್ಕತಾದಲ್ಲಿ. ಬಂಗಾಲಿ ಹಿಂದೂಗಳು ಪಾಕಿಗಳಿಂದ ನರಳಿದಷ್ಟು ಜಗತ್ತಿನಲ್ಲಿ ಬೇರಾರೂ ನರಳಿಲ್ಲ, ಬಂಗಾಲಿಗಳು ಇದನ್ನು ಮರೆತಿದ್ದಾರೆ ಎಂದು ಹರಪ್ರಸಾದ್ ಶಾಸ್ತ್ರಿ ಹೇಳಿದ್ದಾರೆ" ಇದು ತ್ರಿಪುರಾದ ರಾಜ್ಯಪಾಲ ತಥಾಗತ್ ರಾಯ್ ಅವರ ಜನವರಿ 12 ರ ಟ್ವೀಟ್.

ಅಂದು ಕೊಲ್ಕತಾದಲ್ಲಿ ಪಾಕಿಸ್ತಾನದ ಪ್ರಖ್ಯಾತ ಗಝಲ್ ಗಾಯಕ ಗುಲಾಂ ಅಲಿಯವರ ಸಂಗೀತಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಇದರಿಂದ ಕುಪಿತಗೊಂಡ ರಾಜ್ಯಪಾಲರ ಟ್ವೀಟ್. ಇದಕ್ಕೆ ಮೊದಲು ಮುಂಬೈಯಲ್ಲಿ ಗುಲಾಂ ಅಲಿಯವರ ಕಾರ್ಯಕ್ರಮವನ್ನು ಶಿವಸೇನೆಯ ವಿರೋಧದಿಂದಾಗಿ ರದ್ದು ಮಾಡಲಾಗಿತ್ತು ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು.

'ಒಳ್ಳೆಯ ದಿನ'ಗಳನ್ನು ತರುವ ಭಾಗವಾಗಿ ಬೇರೆಯವರಾರೂ ಹೆಸರೇ ಕೇಳದ ಸಂಘಪರಿವಾರದ 'ಹಿರಿಯ'ರನ್ನು ರಾಜ್ಯಪಾಲರ ಪೀಠಗಳಲ್ಲಿ ಕೂರಿಸಲಾಗಿದೆ. ಅವರು ಆಗಾಗ ಇಂತಹ ವಿವಾದಗಳನ್ನು ಸೃಷ್ಟಿಸಿ ಜನರ ಗಮನವನ್ನು ಅತ್ತ ಸೆಳೆದು 'ಒಳ್ಳೆಯ ದಿನ'ಗಳಿಗೆ ತಮ್ಮ ಕೊಡುಗೆ ನೀಡುತ್ತಲೇ ಇದ್ದಾರೆ.

ಜನವರಿ 12 ಸ್ವಾಮಿ ವಿವೇಕಾನಂದರ ಜಯಂತಿ ದಿನ, ಇದೇ ದಿನ ಪ್ರಧಾನಿಗಳು ಪರಸ್ಪರರ ಸಂಪ್ರದಾಯಗಳನ್ನು ಗೌರವಿಸಬೇಕು ಎಂದು ಸಂದೇಶ ನೀಡಿದರು ಎಂಬುದನ್ನು ನೆನಪಿಸಿಕೊಳ್ಳಬಹುದು.

ಗೋಮಾಂಸದ ಸಂದೇಹದ ಮೇಲೆ ಮುಸ್ಲಿಮ್ ದಂಪತಿಗಳಿಗೆ ಏಟು

ಇದು ಪ್ರಧಾನಿಗಳ ಸಂದೇಶದ ಮೂರು ದಿನಗಳ ನಂತರ ಬಿಜೆಪಿ ಆಳ್ವಿಕೆಯಿರುವ ಮಧ್ಯಪ್ರದೇಶದ ಖಿರ್ಕಿಯಾ ರೈಲ್ವೇ ನಿಲ್ದಾಣದಲ್ಲಿ ನಡೆದ ಘಟನೆ(ಇಂಡಿಯನ್ ಎಕ್ಸ್‌ಪ್ರೆಸ್, ಜನವರಿ 15) ಗೋರಕ್ಷ ಸಮಿತಿಯವರೆಂದು ಹೇಳಿಕೊಂಡ ಏಳು ಮಂದಿ ಕುಶಿನಗರ್ ಎಕ್ಸ್‌ಪ್ರೆಸ್‌ನ ಒಂದು ಬೋಗಿಗೆ ನುಗ್ಗಿ ಪ್ರಯಾಣಿಕರ ಸಾಮಾನುಗಳನ್ನು ಚೆಲ್ಲಾಡಿ 'ಪರೀಕ್ಷೆ' ನಡೆಸಿದರು– ಗೋಮಾಂಸ ಒಯ್ಯುತ್ತಿದ್ದಾರೆ ಎಂಬ ಸುದ್ದಿ ನಮಗೆ ಬಂದಿದೆ, ಅದಕ್ಕಾಗಿ ಈ ತನಿಖೆ ಎಂದು ಕೂಗಾಡಿದರು. ಪ್ರಯಾಣಿಕರು ಆಕ್ಷೇಪ ವ್ಯಕ್ತಪಡಿಸಿದಾಗ ಕೆಲವರನ್ನು ಥಳಿಸಿದರು ಕೂಡ.

ಹೈದರಾಬಾದಿನಲ್ಲಿ ತಮ್ಮ ರೋಗಪೀಡಿತ ಸಂಬಂಧಿಕರೊಬ್ಬರನ್ನು ನೋಡಿ ಹಿಂದಿರುಗುತ್ತಿದ್ದ 43 ವರ್ಷದ ಮಹಮ್ಮದ್ ಹುಸೇನ್ ಮತ್ತು ಅತನ ಪತ್ನಿ 38 ವರ್ಷದ ನಸೀಮಾ ಬಾನೊ ಹೀಗೆ ಈ 'ಗೋರಕ್ಷಕರ' ಉಪಟಳಕ್ಕೆ ಗುರಿಯಾದವರಲ್ಲಿ ಸೇರಿದ್ದಾರೆ.

" ನಮ್ಮ ಲಗೇಜನ್ನು ಬಿಚ್ಚಿ ಹುಡುಕಾಡುವದನ್ನು ಆಕ್ಷೇಪಿಸಿದಾಗ ಅವರು ನನ್ನು ಹೆಂಡತಿಯನ್ನು ಅತ್ತಿತ್ತ ನೂಕುತಾ ್ತಬಂದರು, ಯಾವುದೋ ಕಪ್ಪು ಬ್ಯಾಗ್‌ನಲ್ಲಿ ಮಾಂಸ ಸಿಕ್ಕಿತಂತೆ. ನಾವು ಭಾರತದಲ್ಲಿ ಇದ್ದೇವೆ, ಇಲ್ಲಿ ಯಾವುದನ್ನು ತಿನ್ನಬೇಕು, ಯಾವುದನ್ನು ತಿನ್ನಬಾರದು ಎಂದು ನಮಗೆ ಗೊತ್ತಿದೆ, ಆ ಬ್ಯಾಗ್ ನಮ್ಮದಲ್ಲ ಎಂದು ಹೇಳಿದರೂ ಕೇಳದೆ ಹೊಡೆದರು' ಎಂದು ಮಹಮ್ಮದ್ ಇಂಡಿಯನ್ ಎಕ್ಸ್‌ಪ್ರೆಸ್‌ಗೆ ಹೇಳಿದ್ದಾರೆ.

ಆ ಮಾಂಸವಿದ್ದ ಕಪ್ಪು ಬ್ಯಾಗ್ ಯಾರದ್ದೆಂದು ಗೊತ್ತಾಗಲಿಲ್ಲ. ಆ ಮಾಂಸವನ್ನು ಪ್ರಯೋಗಾಲಯದಲ್ಲಿ ಪರೀಕ್ಷಿಸಿದಾಗ ಅದು ಗೋಮಾಂಸವಲ್ಲ, ಎಮ್ಮೆ ಮಾಂಸ ಎಂದು ಕಂಡು ಬಂತಂತೆ.

ಪೊಲೀಸರು ಇಬ್ಬರು 'ಗೋರಕ್ಷಕ'ರನ್ನು ಬಂಧಿಸಿದ್ದಾರಂತೆ. ಉಳಿದ ಐದು ಮಂದಿ ಏನಾದರೋ ಗೊತ್ತಿಲ್ಲ. ತಮಾಷೆಯೆಂದರೆ ಮಹಮ್ಮದ್ ಹುಸೇನ್ ಮತ್ತು ಪತ್ನಿಯ ರಕ್ಷಣೆಗೆ ಬಂದ ಆ ಊರಿನ ಹುಸೇನ್‌ರ ಗೆಳಯರ ಮೇಲೂ ಪೋಲಿಸರು ಸ್ಥಳೀಯ ಭಜರಂಗ ದಳ ಮತ್ತು ವಿಹೆಚ್‌ಪಿ ಮುಖಂಡರ ಒತ್ತಡದಿಂದ ದೂರು ದಾಖಲಿಸಿದ್ದಾರಂತೆ!

ಈಗ ರಾಷ್ಟ್ರೀಯ ಧ್ವಜ ಹಾರಿಸುವ ವಿವಾದದ ಮರು ಸೃಷ್ಟಿ!

ಬಹಳ ವರ್ಷಗಳ ಹಿಂದೆ ಕಾಶ್ಮೀರದ ರಾಜಧಾನಿ ಶ್ರೀನಗರದಲ್ಲಿ ಗಣಂತ್ರಂತ್ರ 'ದಿನದಂದು ತ್ರಿವರ್ಣ ಧ್ವಜ ಹಾರಿಸುತ್ತಿಲ್ಲ, ಅದನ್ನು ಹಾರಿಸುತ್ತೇವೆ ಎಂದು ಈಗ 'ಮಾರ್ಗದರ್ಶಕ ಮಂಡಲಿ'ಯಲ್ಲಿ ಪೇಚಾಡುತ್ತಿರುವವರು ಚಳುವಳಿ ನಡೆಸಿ ತಾವು ಧನ್ಯರಾದರು. ನಮ್ಮಲ್ಲೂ ಹುಬ್ಬಳ್ಳಿಯ ಈದ್‌ಗಾ ವಿವಾದವನ್ನು ಈ ಹಿನ್ನೆಲೆಯಲ್ಲಿ ಸೃಷ್ಟಿಸಲಾಯಿತು. ಈಗ 'ಒಳ್ಳೆಯ ದಿನ'ಗಳಲ್ಲಿ 'ಅಭಿವೃದ್ಧಿ' ಮತ್ತು 'ಒಳ್ಳೆಯ ಆಳ್ವಿಕೆ'ಯ ಘೋಷಣೆಗಳು ಠುಸ್ಸಾಗುತ್ತಿರುವಾಗ ಶಸ್ತ್ರಾಗಾರದಲ್ಲಿನ ಹಳೆಯ ಆಯುಧಗಳು ಹೊರಬರುತ್ತಿರುವಂತೆ ಕಾಣುತ್ತಿದೆ. ಆಯೋಧ್ಯೆಯಲ್ಲಿ ಶ್ರೀರಾಮ ದೇವಸ್ಥಾನದ ಪ್ರಶ್ನೆಯನ್ನು ವಿಹೆಚ್‌ಪಿಯಿಂದ ಸ್ವತಃ ಆರೆಸ್ಸೆಸ್ ತನ್ನ ಕೈಗಳಿಗೆ ತಗೊಳ್ಳುತ್ತಿದೆ ಎಂದೊಬ್ಬ ವಿಶ್ಲೇಷಕರು ಹೇಳಿದ್ದಾರೆ.

ಸಂಘ ಪರಿವಾರದ 'ಮುಸ್ಲಿಮ್ ರಾಷ್ಟ್ರೀಯ ಮಂಚ್ (ಎಂಆರ್‌ಎಂ) ಈ ಗಣತಂತ್ರ ದಿನದಂದು ತ್ರಿವರ್ಣ ರಾಷ್ಟ್ರೀಯ ಧ್ವಜವನ್ನು ಎಲ್ಲ ಮದರಸಾಗಳಲ್ಲಿ ಹಾರಿಸಬೇಕು ಎಂದು ತಾಕೀತು ಮಾಡಿ, ಆಮೂಲಕ ಅವು ಇದುವರೆಗೆ ಹಾಗೆ ಮಾಡದೆ ಈ ದೇಶ ತಮ್ಮದಲ್ಲ ಎಂದು ಭಾವಿಸಿದ್ದಾರೆ ಎಂದು ಕಲ್ಪಿಸಿಕೊಳ್ಳುವಂತೆ ವಿವಾದ ಸೃಷ್ಟಿ ಮಾಡಿದೆ.

ಇದಕ್ಕೆ ಕಟುವಾಗಿ ಪ್ರತಿಕ್ರಿಯಿಸಿರುವ ಒಂದು ಮುಸ್ಲಿಮ್ ಸಂಸ್ಥೆ, ಕೇವಲ ಭಗವಾ ಧ್ವಜವನ್ನು ಆರಾಧಿಸುವ ಆರೆಸ್ಸೆಸ್ ಮೊದಲು ನಾಗಪುರದ ತನ್ನ ಮುಖ್ಯಾಲಯದ ಮೇಲೆ ತ್ರಿವರ್ಣ ಧ್ವಜ ಹಾರಿಸಲಿ, ಆಮೇಲೆ ಇತರರಿಗೆ, ಅದರಲ್ಲೂ ಮುಸ್ಲಿಮರಿಗೆ ತಾಕೀತು ಮಾಡಲಿ ಎಂದು ಹೇಳಿದ್ದಾರೆ. ರಾಷ್ಟ್ರೀಯ ಧ್ವಜವನ್ನು ಖಾಸಗಿಯಾಗಿ ಹಾರಿಸುವುದು ಆಯಾಯ ವ್ಯಕ್ತಿಗಳಿಗೆ ಬಿಟ್ಟದ್ದು, ಆದರೂ ಸುಮಾರಾಗಿ ಎಲ್ಲ ಮದರಸಾಗಳು ಸ್ವಾತಂತ್ರ್ಯ ದಿನ ಮತ್ತು ಗಣತಂತ್ರ ದಿನದಂದು ರಾಷ್ಟ್ರೀಯ ಧ್ವಜವನ್ನು ಹಾರಿಸುತ್ತವೆ, ಈ ದಿನಾಚರಣೆಗಳನ್ನು ಮಾಡುತ್ತವೆ ಎಂದ ಅವರು ಈಗ ತಾವು ಮಾತ್ರ ದೇಶಭಕ್ತರು ಎನ್ನುತ್ತ ಇತರ ಎಲ್ಲರ ದೇಶಪ್ರೇಮವನ್ನು ಪ್ರಶ್ನಿಸುವ ಈ ಮಂದಿ ರಾಷ್ಟ್ರೀಯ ಸ್ವಾತಂತ್ರ್ಯ ಆಂದೋಲನದಕ್ಕೆ ನೀಡಿದ ಕೊಡುಗೆಯಾದರೂ ಏನು ಎಂದು ಪ್ರಶ್ನಿಸಿದ್ದಾರೆ, ಸಹಜವಾದ ಪ್ರಶ್ನೆಯೇ.

ಇದರಿಂದ ಪೇಚಿಗೀಡಾದ ಎಂಆರ್‌ಎಂನ ಮುಖಂಡರು ರಾಷ್ಟ್ರೀಯ ಧ್ವಜ ಹಾರಿಸಿಬೇಕೆಂಬ ತಮ್ಮ 'ಪ್ರಚಾರಾಂದೋಲನ' ಮುಸ್ಲಿಮರ ದೇಶಪ್ರೇಮವನ್ನು ಪ್ರಶ್ನಿಸಲಿಕ್ಕೆ ಅಲ್ಲ, ಕಳೆದ ಐದು ವರ್ಷಗಳಿಂದ ಇದನ್ನು ಹೇಳುತ್ತಿದ್ದೇವೆ ಎಂದು ನುಸುಳಿಕೊಳ್ಳಲು ಪ್ರಯತ್ನಿಸಿದ್ದಾರೆ.


ತಮಿಳುನಾಡಿನಲ್ಲಿ ವಿಧಾನ ಸಭಾ ಚುನಾವಣೆಗಳ ಹಿನ್ನೆಲೆಯಲ್ಲಿ ಜಲ್ಲಿಕಟ್ಟು ಮೇಲಿನ ನಿರ್ಬಂಧ ತೆಗೆಯಲು ಕೇಂದ್ರ ಸರ್ಕಾರದ ನಿರ್ಧಾರ – ಇದಕ್ಕೆ ಈಗ ಸುಪ್ರಿಂ ಕೋರ್ಟಿನ ತಡೆಯಾಜ್ಞೆ

–ಸುದ್ದಿ



ಬಿಹಾರದಲ್ಲಿ ನಾನು ನನ್ನ ಪಾತ್ರ ವಹಿಸಿದೆ, ಈಗ ತಮಿಳುನಾಡಿನಲ್ಲಿ ನಿನ್ನ ಸರದಿ

ವ್ಯಂಗ್ಯ ಚಿತ್ರ: ಮಂಜುಲ್, ಡಿಎನ್‌ಎ



ವ್ಯಂಗ್ಯ ಚಿತ್ರ: ಸತೀಶ್ ಆಚಾರ್ಯ

ರಾಷ್ಟ್ರೀಯ ಅಭಿವೃದ್ಧಿ ಮಂಡಳಿಯ ಸಮಾಧಿ



ಯೋಜನಾ ಆಯೋಗವನ್ನು ಮುಚ್ಚಿದ ನಂತರ ಮೋದಿ ಸರ್ಕಾರ ರಾಷ್ಟ್ರೀಯ ಅಭಿವೃದ್ಧಿ ಮಂಡಳಿಯನ್ನು ಕೂಡ ಈಗ ಕೊನೆಗೊಳಿಸಿರುವುದು ಆಶ್ಚರ್ಯವೇನಲ್ಲ. ಇದರ ಉದ್ದೇಶ ಕಾರ್ಪೊರೇಟ್‌ಗಳಿಗೆ ಅನುಕೂಲ ಕಲ್ಪಿಸಲು ಅಗತ್ಯವಾದ ಅಧಿಕಾರಗಳ ಕೇಂದ್ರೀಕರಣ. ಮೋದಿಯವರು "ಸಹಕಾರಿ ಒಕ್ಕೂಟ" ತತ್ವಕ್ಕೆ ಬದ್ಧರಾಗಿರುವ ಬಗ್ಗೆ ಮಾಡುವ ಆಣೆ ಪ್ರಮಾಣದ ಮಾತುಗಳು ಚಾಟಿ ಇಲ್ಲದೆ ಬುಗುರಿ ತಿರುಗಿಸುವ ಬಣ್ಣ ಬಣ್ಣದ ಮಾತುಗಳೆಂಬುದು ಇದರಿಂದ ಬಯಲಾಗಿದೆ.

ಕೆ.ಎಂ.ನಾಗರಾಜ್

ಅಧಿಕಾರಕ್ಕೆ ಬಂದ ಕೂಡಲೇ 'ರಾಷ್ಟ್ರೀಯ ಯೋಜನಾ ಆಯೋಗ'ವನ್ನು ರದ್ದು ಮಾಡಿರುವ ಮೋದಿ ಸರಕಾರ ಈಗ ರಾಜ್ಯಗಳ ಅಭಿವೃದ್ಧಿಯ ರೂಪು ರೇಷೆಗಳನ್ನು ನಿರ್ಧರಿಸುವ ವೇದಿಕೆಯಾಗಿದ್ದ 'ರಾಷ್ಟ್ರೀಯ ಅಭಿವೃದ್ಧಿ ಮಂಡಳಿ'ಯನ್ನು ರದ್ದು ಮಾಡಿದೆ. ಇದು ದೇಶದ ಒಕ್ಕೂಟ ವ್ಯವಸ್ಥೆಗೆ ಆಘಾತಕಾರಿಯಾಗಿದೆ, ರಾಜ್ಯಗಳನ್ನು ತಿರುಕರ ಮಟ್ಟಕ್ಕೆ ಇಳಿಸಿ ಕೇಂದ್ರ ಸರ್ಕಾರವನ್ನು ಮನಸೊ ಇಚ್ಛೆ ಬಕ್ಷೀಸು ಕೊಡುವ ಮಹಾರಾಜನ ಮಟ್ಟಕ್ಕೆ ಏರಿಸಿದೆ ಎಂದು ಅರ್ಥಶಾಸ್ತ್ರಜ್ಞ ಪ್ರೊ. ಪ್ರಭಾತ್ ಪಟ್ನಾಯಕ್ ಟೀಕಿಸಿದ್ದಾರೆ.

ಪ್ರಧಾನ ಮಂತ್ರಿಯವರ ಅಧ್ಯಕ್ಷತೆಯಲ್ಲಿ, ಕೇಂದ್ರ ಸರ್ಕಾರದ ಯೋಜನಾ ಸಚಿವರು, ಎಲ್ಲ ರಾಜ್ಯದ ಮುಖ್ಯಮಂತ್ರಿಗಳು ಮತ್ತು ಎಲ್ಲ ರಾಜ್ಯಗಳ ಯೋಜನಾ ಖಾತೆಯ ಸಚಿವರು ಸದಸ್ಯರಾಗಿದ್ದ ರಾಷ್ಟ್ರೀಯ ಅಭಿವೃದ್ಧಿ ಮಂಡಳಿ ನೆಹರೂ ಕಾಲದಲ್ಲಿ ಅಸ್ತಿತ್ವಕ್ಕೆ ಬಂದಿತ್ತು. ಅದು, ದೇಶದ ಆರ್ಥಿಕ ಅಭಿವೃದ್ಧಿಗೆ ಸಂಬಂಧಿಸಿದ ನೀತಿಗಳು ಮತ್ತು ಯೋಜನೆಗಳನ್ನು ನಿರೂಪಿಸುವ ಹಾಗೂ ಮಾರ್ಗದರ್ಶನ ಮಾಡುವ ಅತ್ಯುನ್ನತ ಅಧಿಕಾರ ಹೊಂದಿತ್ತು.

ಯೋಜನಾ ಆಯೋಗವನ್ನು ಮುಚ್ಚಿದ ನಂತರ ಮೋದಿ ಸರ್ಕಾರ ಅಭಿವೃದ್ಧಿ ಮಂಡಳಿಯನ್ನು ಕೊನೆಗೊಳಿಸಿರುವುದು ಆಶ್ಚರ್ಯವೇನಲ್ಲ. ಆದರೆ, ಇದೊಂದು ನೋವಿನ ಸಂಗತಿ. ಏಕೆಂದರೆ ಇದು ದೇಶದ ಒಕ್ಕೂಟ ವ್ಯವಸ್ಥೆಗೆ ಆಘಾತಕಾರಿಯಾಗಿದೆ. ಯೋಜನಾ ಆಯೋಗದ ಬದಲಾಗಿ ಮೋದಿ ಸರ್ಕಾರ 'ನೀತಿ ಆಯೋಗ' ಎಂಬ ಹೊಸ ಏರ್ಪಾಡು ಮಾಡಿದೆ. ನೀತಿ ಆಯೋಗದ ಗವರ್ನಿಂಗ್ ಕೌನ್ಸಿಲ್‌ನಲ್ಲಿ ರಾಜ್ಯಗಳ ಮುಖ್ಯ ಮಂತ್ರಿಗಳೂ ಇರುವುದರಿಂದ ಮೇಲ್ನೋಟಕ್ಕೆ ಇದು ರಾಷ್ಟ್ರೀಯ ಅಭಿವೃದ್ಧಿ ಮಂಡಳಿಯ ಬದಲಿ ವ್ಯವಸ್ಥೆಯಂತೆ ಕಂಡರೂ ಈ ಎರಡು ಏರ್ಪಾಡುಗಳಲ್ಲಿ ಅಜಗಜಾಂತರವಿದೆ.

ಯೋಜನಾ ಆಯೋಗ ದೇಶದ ಪಂಚವಾರ್ಷಿಕ ಯೋಜನೆಗಳನ್ನು ರೂಪಿಸುತ್ತಿತ್ತು. ಮತ್ತು ರಾಜ್ಯಗಳ ಅಭಿವೃದ್ಧಿ ಯೋಜನೆಗಳ ಸಾಧಕ ಬಾಧಕಗಳ ಬಗ್ಗೆ ಹಾಗೂ ಕೇಂದ್ರದ ಹಣ ಕಾಸು ನೆರವಿನ ಬಗ್ಗೆ ಆಯಾ ರಾಜ್ಯಗಳ ಮುಖ್ಯ ಮಂತ್ರಿಗಳ ಜೊತೆ ಕೂಲಂಕುಶವಾಗಿ ಚರ್ಚಿಸುತ್ತಿತ್ತು. ಆದರೆ, ನೀತಿ ಆಯೋಗ ಸಲಹೆಕೊಡುವುದರ ಆಚೆಗೆ ಹೋಗುವಂತಿಲ್ಲ. ಸಂಕ್ಷಿಪ್ತವಾಗಿ ಹೇಳುವುದಾದರೆ, ಅಭಿವೃದ್ಧಿ ಮಂಡಳಿಯನ್ನು ಕೊನೆಗೊಳಿಸಿರುವುದು, ಅಭಿವೃದ್ಧಿಗೆ ಸಂಬಂಧಿಸಿದ ಗಂಭೀರವಾದ ಸಮಸ್ಯೆಗಳನ್ನು ತೋಡಿಕೊಳ್ಳಲು ರಾಜ್ಯಗಳಿಗೆ ಲಭ್ಯವಿದ್ದ ಒಂದು ವೇದಿಕೆಯೇ ಇಲ್ಲದಂತೆ ಮಾಡಿದೆ.

ಇದ್ದದ್ದೂ ಇಲಿಯ ಪಾಲಾಯಿತು

ಯೋಜನಾ ಆಯೋಗದ ಸಲಹೆ ಮೇರೆಗೆ ಕೇಂದ್ರ ಸರ್ಕಾರದಿಂದ ರಾಜ್ಯಗಳಿಗೆ ದೊರಕುತ್ತಿದ್ದ ಹಣ ಕಾಸು ನೆರವು ಈಗ ಕೇಂದ್ರ ಮಂತ್ರಾಲಯಗಳ ಮೂಲಕ ದೊರೆಯುತ್ತದೆ. ಹಿಂದೆ, ಈ ಸಂಬಂಧವಾಗಿ ಯೋಜನಾ ಆಯೋಗದ ಬಳಿ ಚರ್ಚಿಸಬಹುದಿತ್ತು ಮತ್ತು ರಾಷ್ಟ್ರೀಯ ಅಭಿವೃದ್ಧಿ ಮಂಡಳಿಯ ಸಭೆಯಲ್ಲಿಯೂ ಪ್ರಸ್ತಾಪಿಸಬಹುದಿತ್ತು. ರಾಜ್ಯಗಳ ಹಿತಕ್ಕೆ ಧಕ್ಕೆ ಬಂದಾಗ ಮುಖ್ಯ ಮಂತ್ರಿಗಳು ವಿರೋಧ ವ್ಯಕ್ತಪಡಿಸುತ್ತಿದ್ದರು. ಯೋಜನಾ ಆಯೋಗ ಮತ್ತು ಅಭಿವೃದ್ಧಿ ಮಂಡಳಿ, ಈ ಎರಡು ಏರ್ಪಾಡುಗಳನ್ನೂ ಕೊನೆಗೊಳಿಸಿ ರುವುದರಿಂದ ಅಭಿವೃದ್ಧಿಯ ಪಥದ ಬಗ್ಗೆ ವಿಚಾರ ವಿನಿಮಯ, ಟೀಕೆ, ಟಿಪ್ಪಣಿ ಅಥವಾ ವಿರೋಧಗಳಿಗೆ ಅವಕಾಶವೇ ಇಲ್ಲದಂತಾಗಿದೆ. ಮತ್ತು ಹಣ ಕಾಸು ಹಂಚಿಕೆಯ ವಿಷಯದಲ್ಲಿ, ರಾಜ್ಯಗಳನ್ನು ತಿರುಪೆ ಎತ್ತುವವರ ಮಟ್ಟಕ್ಕೆ ಇಳಿಸಿದಂತಾಗಿದೆ; ಕೇಂದ್ರ ಸರ್ಕಾರವನ್ನು ಮನಸೋ ಇಚ್ಛೆ ಬಕ್ಷೀಸು ಕೊಡುವ ಮಹಾರಾಜನ ಮಟ್ಟಕ್ಕೆ ಏರಿಸಿದಂತಾಗಿದೆ. ಉದಾ:ಇತ್ತೀಚೆಗೆ, ಬಿಹಾರದ ಚುನಾವಣಾ ಪ್ರಚಾರದಲ್ಲಿ ನರೇಂದ್ರ ಮೋದಿಯವರು 'ಬಿಹಾರ್ ಪ್ಯಾಕೇಜ್'ನ ಘೋಷಣೆ ಮಾಡಿದ ರೀತಿ ಬಕ್ಷೀಸು ಕೊಡುವ ಸ್ಟೈಲಿನಲ್ಲಿತ್ತು.

ಯೋಜನಾ ಆಯೋಗದ ಸಲಹೆಯ ಮೇರೆಗೆ ರಾಜ್ಯಗಳಿಗೆ ಹಣಕಾಸು ಒದಗಿಸುತ್ತಿದ್ದ ಕೇಂದ್ರದ ಕ್ರಮವನ್ನು ರಾಜ್ಯಗಳಿಗೆ ಪ್ರಾತಿನಿಧ್ಯವಿಲ್ಲದ ಏಕಪಕ್ಷೀಯ ವ್ಯವಸ್ಥೆ ಎಂದು ಎಡ ಪಕ್ಷಗಳು ಟೀಕಿಸುತ್ತಿದ್ದವು. ಅದರ ಬದಲಿಗೆ, ಒಕ್ಕೂಟ ವ್ಯವಸ್ಥೆಯ ಸಮಸ್ಯೆಗಳನ್ನು ಇತ್ಯರ್ಥಪಡಿಸಲು ಸಂವಿಧಾನದನ್ವಯವಾಗಿ ಸ್ಥಾಪಿಸಿರುವ 'ಅಂತರ ರಾಜ್ಯಗಳ ಮಂಡಳಿ'ಯನ್ನು ಬಲಪಡಿಸಬೇಕೆಂದು ಎಡ ಪಕ್ಷಗಳು ಒತ್ತಾಯ ಮಾಡುತ್ತಿದ್ದವು.

ರಾಷ್ಟ್ರೀಯ ಅಭಿವೃದ್ಧಿ ಮಂಡಳಿಯನ್ನು ಮುಚ್ಚುವ ಸಂದರ್ಭದಲ್ಲಿ, ಸರ್ಕಾರವು 'ಅಂತರ ರಾಜ್ಯಗಳ ಮಂಡಳಿ'ಯು ಅದರ ಸ್ಥಾನವನ್ನು ಪಡೆಯುತ್ತದೆ ಎಂಬ ಭರವಸೆ ಕೊಟ್ಟಿದ್ದಿದ್ದರೆ ಮಂಡಳಿ ಮುಚ್ಚಿದ್ದಕ್ಕೆ ಸ್ವಲ್ಪವಾದರೂ ಸಮರ್ಥನೆಯಾಗುತ್ತಿತ್ತು. ಆದರೆ, ಯೋಜನಾ ಆಯೋಗ ಮತ್ತು ಅಭಿವೃದ್ಧಿ ಮಂಡಳಿಗಳನ್ನು ಕೊನೆಗೊಳಿಸುವ ಉದ್ದೇಶವೇ ಬೇರೆ. ಅದು ಅಧಿಕಾರದ ಕೇಂದ್ರೀಕರಣ. ಹಾಗಾಗಿ, ಮೋದಿಯವರು "ಸಹಕಾರಿ ಒಕ್ಕೂಟ" ತತ್ವಕ್ಕೆ ಬದ್ಧರಾಗಿರುವ ಬಗ್ಗೆ ಮಾಡುವ ಆಣೆ ಪ್ರಮಾಣದ ಮಾತುಗಳು ಚಾಟಿ ಇಲ್ಲದೆ ಬುಗುರಿ ತಿರುಗಿಸುವ ಬಣ್ಣ ಬಣ್ಣದ ಮಾತುಗಳೆಂಬುದು ಬಯಲಾಗಿದೆ. ಇಂತಹ ಬಣ್ಣದ ಮಾತುಗಳ ಕಾರಣಗಳಿಗಾಗಿಯೇ ರಾಜಕೀಯ ವ್ಯಾಖ್ಯಾನಕಾರರೊಬ್ಬರು ಅವರನ್ನು "ಘೋಷಣೆಗಳ ವೀರ" ಎಂದು ಕರೆದಿರುವುದು.

ನವ ಉದಾರವಾದಿ ವ್ಯೂಹದ ಭಾಗ

ರಾಷ್ಟ್ರೀಯ ಅಭಿವೃದ್ಧಿ ಮಂಡಳಿಯನ್ನು ಕೊನೆಗೊಳಿಸುವುದು, ರಾಜ್ಯಗಳ ಅಧಿಕಾರವನ್ನು ಮೊಟಕುಗೊಳಿಸುತ್ತಿರುವ ಪ್ರಕ್ರಿಯೆಯ ಭಾಗವಾಗಿದೆ. ಇಂತಹ ಕೆಲವು ಕ್ರಮಗಳನ್ನು ಒಟ್ಟಾಗಿ ನೋಡಿದಾಗ, ಅಧಿಕಾರದ ಕೇಂದ್ರೀಕರಣವಾಗುತ್ತಿರುವುದು ಸ್ಪಷ್ಟವಾಗುತ್ತದೆ. ಅಧಿಕಾರದ ಕೇಂದ್ರೀಕರಣವು ನವ ಉದಾರವಾದಿ ಆರ್ಥಿಕ ಅಜೆಂಡಾಗೆ ಅನುಗುಣವಾಗಿದೆ. ಈ ವಿಷಯದಲ್ಲಿ ಮೋದಿಯವರು ಮೊದಲಿಗರಲ್ಲ. ಯುಪಿಎ ಸರ್ಕಾರವೂ ಇದೇ ದಾರಿಯಲ್ಲಿತ್ತು. ವ್ಯತ್ಯಾಸವಿರುವುದು, ವೇಗ ಮತ್ತು ತೀವ್ರತೆಯಲ್ಲಿ. ಚುನಾವಣೆಯಲ್ಲಿ ತಮಗೆ ಕೊಪ್ಪರಿಗೆ ಹಣ ಸುರಿದವರಿಗೆ ಋಣ ಸಂದಾಯ ಮಾಡುವ ನಿಷ್ಠೆಯ ಭರದಲ್ಲಿ ಇಂತಹ ಕ್ರಮಗಳನ್ನು ಅವರು ವೇಗವಾಗಿ ಜಾರಿಗೊಳಿಸುತ್ತಿದ್ದಾರೆ.

ಹಣಕಾಸು ಆಯೋಗದ ಶಿಫಾರಸಿನಂತೆ ಹಣದ ಹಂಚಿಕೆಯಲ್ಲಿ ರಾಜ್ಯಗಳ ಪಾಲು ಏರಿಕೆಯಾಗಿದೆ ಎಂದು ಮೋದಿಯವರು ಹೇಳಿಕೊಳ್ಳುತ್ತಾರೆ. ಆದರೆ, ಒಟ್ಟಾರೆಯಾಗಿ, ಹಿಂದಿನ ವರ್ಷಗಳಿಗೆ ಹೋಲಿಸಿದರೆ, ರಾಜ್ಯಗಳಿಗೆ ನೀಡಿರುವ ಹಣಕಾಸು ನೆರವು 2015–16ರಲ್ಲಿ ಕಡಿಮೆಯಾಗಿದೆ. ಹಾಗಾಗಿ, ಸಂಪನ್ಮೂಲಗಳ ಕೊರತೆ ಎದುರಿಸುವ ರಾಜ್ಯ ಸರ್ಕಾರಗಳು ಹೂಡಿಕೆ ಮಾಡುವಂತೆ ಕಾರ್ಪೊರೇಟ್‌ಗಳನ್ನು ಪ್ರಾರ್ಥಿಸಿಕೊಳ್ಳುವ ಒತ್ತಾಯಕ್ಕೊಳಗಾಗುತ್ತವೆ. ನವ ಉದಾರವಾದಿಗಳು ಬಯಸುವುದು ಇದನ್ನೇ.

ಬೇರೆ ಬೇರೆ ರಾಜ್ಯಗಳು ತಮಗೆ ಸೂಕ್ತವಾದ ಆರ್ಥಿಕ ಅಭಿವೃದ್ಧಿ ಮಾರ್ಗ ಅನುಸರಿಸುವ ಒಂದು ನೈಜ ಒಕ್ಕೂಟ ವ್ಯವಸ್ಥೆ ಕಾರ್ಪೊರೇಟ್‌ಗಳಿಗೆ ಬೇಕಾಗಿಲ್ಲ. ಮೋದಿಯವರಿಗೂ ಅದು ಬೇಕಿಲ್ಲ. ರಾಷ್ಟ್ರೀಯ ಅಭಿವೃದ್ಧಿ ಮಂಡಳಿಯ ರದ್ದತಿ ಈ ಬಯಕೆಗೆ ಪೂರಕವಾಗಿದೆ.

ಪಕ್ಷಕ್ಕೆ ಕೋಟ್ಯಂತರ ರೂಪಾಯಿ ಆಸ್ತಿ ದಾನ ಮಾಡಿದ್ದ ಕಾಮ್ರೇಡ್ ರತನ್‌ಸಿಂಗ್ ಸ್ಫೂರ್ತಿ

ಪಂಜಾಬ್ ಸಿಪಿಐ(ಎಂ)ನ ಹಿರಿಯ ನಾಯಕ ಕಾಮ್ರೇಡ್ ರತನ್ ಸಿಂಗ್ 2015 ಡಿಸೆಂಬರ್ 16 ರಂದು ಚಂಡೀಗಢದಲ್ಲಿ ನಿಧನರಾದರು. 2016 ಜನವರಿ 5 ರಂದು ದೇರಾಬಸಿಯಲ್ಲಿ ಅವರಿಗೆ ಶ್ರದ್ಧಾಂಜಲಿ ಸಲ್ಲಿಸುವ ಕಾರ್ಯಕ್ರಮ ನಡೆಯಿತು. ಅದರಲ್ಲಿ ಪಕ್ಷದ ಸದಸ್ಯರು ಮತ್ತು ಮುಖಂಡರು, ವಿವಿಧ ರಾಜಕೀಯ ಪಕ್ಷಗಳ ನಾಯಕರು ಭಾಗವಹಿಸಿ ನಮನ ಸಲ್ಲಿಸಿದರು.

ಪಕ್ಷದ ಪಾಲಿಟ್‌ಬ್ಯೂರೊ ಸದಸ್ಯ ಎಸ್. ರಾಮಚಂದ್ರ ಪಿಳ್ಳೆ, ರಾಜ್ಯ ಕಾರ್ಯದರ್ಶಿ ಚರಣ್‌ಸಿಂಗ್ ವಿರ್ದಿ ಮೊದಲಾದ ಪ್ರಮುಖ ಮುಖಂಡರು ಕಾ. ಸಿಂಗ್‌ರ ಕೊಡುಗೆಗಳನ್ನು ಸ್ಮರಿಸಿದರು.

ಕಾಮ್ರೇಡ್ ರತನ್‌ಸಿಂಗ್ ಅವರ ಬದುಕು ಆದರ್ಶಮಯವಾಗಿತ್ತು. ಕಮ್ಯುನಿಸ್ಟ್ ಜೀವನಶೈಲಿಯನ್ನು ಅವರು ಎತ್ತಿಹಿಡಿದಿದ್ದರು ಎಂದು ಕಾಮ್ರೇಡ್ ಪಿಳ್ಳೆ ಹೇಳಿದರು. ದುಡಿಯುವ ಜನರ ಕುರಿತು ಸಿಂಗ್ ಹೊಂದಿದ್ದ ಬದ್ಧತೆ ಮತ್ತು ಸಮರ್ಪಣಾ ಮನೋಭಾವ ಪಕ್ಷದ ಯುವಸದಸ್ಯರಿಗೆ ಸ್ಫೂರ್ತಿದಾಯಕ ಎಂದರು. ನವ ಉದಾರವಾದಿ ಆಕ್ರಮಣಗಳು, ಕೋಮುವಾದಿ ಹಾಗೂ ಸಾಮ್ರಾಜ್ಯಶಾಹಿ ಶಕ್ತಿಗಳ ದಾಳಿ ಮುಂತಾದ ವಿವಿಧ ರೀತಿಯ ದಾಳಿಗಳನ್ನು ದುಡಿಯುವ ವರ್ಗ ಎದುರಿಸುತ್ತಿರುವ ಪ್ರಸಕ್ತ ಕಾಲಘಟ್ಟದಲ್ಲಿ ಕಾಮ್ರೇಡ್ ರತನ್ ಸಿಂಗ್‌ರಂಥ ಸಾವಿರಾರು ಸಂಗಾತಿಗಳ ಅಗತ್ಯವಿದೆ ಎಂದು ಅಭಿಪ್ರಾಯಪಟ್ಟರು. ಅವರ ನಿಧನದಿಂದ ಪಕ್ಷ ಮತ್ತು ಪ್ರಜಾಪ್ರಭುತ್ವವಾದಿ ಚಳವಳಿಗೆ ದೊಡ್ಡ ನಷ್ಟವಾಗಿದೆ ಎಂದರು.

ರತನ್ ಸಿಂಗ್ 1930 ಆಗಸ್ಟ್ 3ರಂದು ಜನಿಸಿದ್ದರು. ತಮ್ಮ ಊರಾದ ದೇರಾಬಾಸಿ ಸಮೀಪದ ಹೆಬತ್‌ಪುರ ಗ್ರಾಮದ ಸರಪಂಚರಾಗಿ ಅವಿರೋಧವಾಗಿ ಆಯ್ಕೆಯಾಗಿದ್ದನ್ನು ಕಾಮ್ರೇಡ್ ವಿರ್ದಿ ನೆನಪಿಸಿಕೊಂಡರು. ಸಿಂಗ್ ಹತ್ತು ವರ್ಷ ಕಾಲ ಆ ಹುದ್ದೆಯಲ್ಲಿದ್ದರು. ದಮನಿತ ಜನತೆಯ ಪರವಾಗಿ ಸತತ ಹೋರಾಟಗನ್ನು ನಡೆಸಿದ ಅವರು ಸ್ಥಳೀಯವಾಗಿ ತುಂಬಾ ಜನಪ್ರಿಯರಾಗಿದ್ದರು ಎಂದರು. ಅವರು ಅಖಿಲ ಭಾರತ ಕಿಸಾನ್ ಸಭಾದ ಪಾಟಿಯಾಲಾ ಜಿಲ್ಲಾ ಸಮಿತಿಯ ಅಧ್ಯಕ್ಷರಾಗಿ ಅನೇಕ ವರ್ಷಗಳ ಕಾಲ ಕಾರ್ಯ ನಿರ್ವಹಿಸಿದ್ದರು. ನಿಧನದವರೆಗೂ ಮೊಹಾಲಿ ಜಿಲ್ಲಾ ಸಮಿತಿಯ ಸದಸ್ಯರಾಗಿದ್ದ ಅವರು ರಾಜ್ಯ ಸಮಿತಿಯ ಆಹ್ವಾನಿತ ಸದಸ್ಯರಾಗಿಯೂ ಇದ್ದರು. ಪಕ್ಷದ ರಾಜ್ಯಸಮಿತಿಯ ಶಿಸ್ತು ಸಮಿತಿಯ ಅಧ್ಯಕ್ಷರೂ ಆಗಿದ್ದರು ಕಾಮ್ರೇಡ್ ಸಿಂಗ್.

ಇದುವರೆಗೂ ಯಾರಿಗೂ ಹೆಚ್ಚಾಗಿ ಗೊತ್ತಿರದಿದ್ದ ಹಾಗೂ ಎಲ್ಲರಿಗೂ ಸ್ಫೂರ್ತಿಯಾಗುವ ವಿಷಯವೊಂದನ್ನು ಕಾಮ್ರೇಡ್ ವಿರ್ದಿ ಈ ಸಂದರ್ಭದಲ್ಲಿ ಬಹಿರಂಗಪಡಿಸಿದರು. ಅದೇನೆಂದರೆ, ಕಾಮ್ರೇಡ್ ಸಿಂಗ್ ದೇರಾಬಾಸಿಯಲ್ಲಿನ ತಮ್ಮ ಕೋಟ್ಯಂತರ ರೂಪಾಯಿ ಮೌಲ್ಯದ ಆಸ್ತಿಯನ್ನು ಪಕ್ಷಕ್ಕೆ ದಾನ ಮಾಡಿದ್ದರು. ಪಕ್ಷದ ಶಾಲೆಯನ್ನು ನಡೆಸಲಿಕ್ಕಾಗಿ ಕಾಮ್ರೇಡ್ ರತನ್‌ಸಿಂಗ್ ಮಾರ್ಕ್ಸ್‌ವಾದಿ ಚೇತನ ಕೇಂದ್ರಕ್ಕೆ ಅವರು ಈ ದಾನ ಮಾಡಿದ್ದರು. ಪಕ್ಷದ ಶಾಲೆಯ ಕೇಂದ್ರವನ್ನು ಶೀಘ್ರವೇ ಉದ್ಘಾಟಿಸಲಾಗುವುದು ಎಂದು ವರ್ದಿ ಈ ಸಂದರ್ಭದಲ್ಲಿ ಪ್ರಕಟಿಸಿದರು.

ರಾಹುಲ್ ಸಾಂಕೃತ್ಯಾಯನರ 'ಭಾಗೋ ನಹಿ, ದುನಿಯಾ ಬದ್ಲೋ' (ಪಲಾಯನ ಮಾಡಬೇಡ, ಜಗತ್ತನ್ನು ಬದಲಿಸು) ಕೃತಿಯಿಂದ ಸ್ಫೂರ್ತಿಗೊಂಡು ಸಿಂಗ್ 1953ರಲ್ಲಿ ಕಮ್ಯುನಿಸ್ಟ್ ಪಕ್ಷವನ್ನು ಸೇರಿದ್ದರು.

ವೃದ್ಧಾಪ್ಯದಿಂದಾಗಿ ಕಾಮ್ರೇಡ್ ಸಿಂಗ್ ಅವರು ಬಾಳಿನ ಕೊನೆಯ ವರ್ಷಗಳನ್ನು ಪಕ್ಷದ ರಾಜ್ಯ ಕೇಂದ್ರ ಕಚೇರಿ 'ಚೀಮಾ ಭವನ'ದಲ್ಲಿ ವಾಸಿಸುತ್ತಿದ್ದು ಪಕ್ಷದ ಸಂಗಾತಿಗಳೇ ಅವರನ್ನು ನೋಡಿಕೊಳ್ಳುತ್ತಿದ್ದರು.

ಕಾಮ್ರೇಡ್ ರತನ್‌ಸಿಂಗ್‌ರ ದೀರ್ಘ ಕಾಲದ ಒಡನಾಡಿ ಡಾ. ಶೇರ್ ಸಿಂಗ್ ಶ್ರದ್ಧಾಂಜಲಿ ಸಭೆಯ ಅಧ್ಯಕ್ಷತೆ ವಹಿಸಿದ್ದರು.

PEA½ZAAY

'ಕಿಕು ಶಾರದ' 'ರಾಮ್ ರಹೀಮ್ ಬಾಬಾ'ನ ಮಿಮಿಕ್ರಿ ಮಾಡಿರುವುದು ಹೇಗೆ ಕಲಮು 295ಎ ನ್ನು ಉಲ್ಲಂಘಿಸುತ್ತದೆ ಎಂಬುದು ನನಗೆ ಅರ್ಥವಾಗುತ್ತಿಲ್ಲ. ಹಾಸ್ಯಪ್ರಜ್ಞೆಯೇ ನಮ್ಮ ದೇಶದಿಂದ ಮಾಯವಾದಂತಿದೆ.

– ನ್ಯಾಯಮೂರ್ತಿ ಮಾರ್ಕಂಡೇಯ ಕಾಟ್ಜು

ನಮ್ಮ ಚುರು-ಟ್ವೀಟ್

@SurjyaKMishra

ಕೇಂದ್ರ ಹಣಕಾಸು ಮಂತ್ರಿ ಬಜೆಟ ಭಾಷಣದ ನಂತರ ಚಿಟ್ ಫಂಡ್ ಮಾಲಕರ ಜತೆ ತಮ್ಮ ಕಚೇರಿಯಲ್ಲಿ ಭೇಟಿಯಾದರು. ಈಗ ತೃಣಮೂಲಕ್ಕೆ 'ಕೊಲ್ಕತ್ತಾದಲ್ಲಿ 'ಕ್ಲೀನ್ ಚಿಟ್' ಕೊಡುತ್ತಿದ್ದಾರೆ.

ಸೂರ್ಯಕಾಂತ ಮಿಶ್ರ,
ಪ.ಬಂಗಾಳ ಸಿಪಿಐ(ಎಂ) ಕಾರ್ಯದರ್ಶಿ

ಒಂದು ಬಲಿಷ್ಠ ಸಿಪಿಐ(ಎಂ) ಕಟ್ಟೋಣ

ಪುಟ 11 ರಿಂದ

ಕಾರ್ಯಕರ್ತರನ್ನು ಕುರಿತ ಸರಿಯಾದ ಧೋರಣೆಯ ಜಾರಿ

ಒಂದು ಕಮ್ಯುನಿಸ್ಟ್ ಪಕ್ಷವನ್ನು ಯಾವಾಗಲೂ ಮೇಲಿನಿಂದಲೇ ಕಟ್ಟಲಾಗುತ್ತದೆ. ಆದ್ದರಿಂದ ನಮ್ಮ ಸಂಘಟನೆಯನ್ನು ಬಲಪಡಿಸಬೇಕಾದರೆ ಅದು ಪಕ್ಷದ ಕೇಂದ್ರವನ್ನು ಬಲಪಡಿಸುವ ಪ್ರಯತ್ನಗಳ ಮೂಲಕವೇ ಆರಂಭವಾಗಿ ಎಲ್ಲ ಮಟ್ಟಗಳಲ್ಲಿ ಪಕ್ಷದ ಗುಣಮಟ್ಟವನ್ನು ಉತ್ತಮಗೊಳಿಸುವತ್ತ ಮುಂದುವರೆಯಬೇಕು ಎಂದು ಪ್ಲೀನಮ್ ಒತ್ತಿ ಹೇಳಿತು. ಇದನ್ನು ಈಡೇರಿಸುವ ಹಲವು ಇತರ ಕ್ರಮಗಳ ನಡುವೆ, ಕಾರ್ಯಕರ್ತರ ಕುರಿತಾದ ಒಂದು ಸರಿಯಾದ ಧೋರಣೆಯನ್ನು ಜಾರಿಗೆ ತರಬೇಕಾದ ಅಗತ್ಯವನ್ನು ಅದು ಎತ್ತಿ ತೋರಿದೆ. ಅಂದರೆ ಯುವ ಸಂಗಾತಿಗಳನ್ನು ಗುರುತಿಸಿ, ಪ್ರೋತ್ಸಾಹಿಸುವ ಮತ್ತು ಸಂಬಂಧಪಟ್ಟ ಸಮಿತಿಗಳ ಒಂದು ಸಾಮೂಹಿಕ ಪರಿಶೀಲನೆಯ ಆಧಾರದಲ್ಲಿ ಕರ್ತವ್ಯಗಳನ್ನು ವಹಿಸುವುದು; ಇಂತಹ ಕಾರ್ಯಕರ್ತರನ್ನು ಪಕ್ಷದ ಪೂರ್ಣಾವಧಿ ಕಾರ್ಯಕರ್ತರಾಗಿ–ದೃಢವಾದ ಸೈದ್ಧಾಂತಿಕ ಅರಿವು ಮತ್ತು ಒಂದು ಕ್ರಾಂತಿಕಾರಿ ಪರಿವರ್ತನೆಯ ಹೋರಾಟದಲ್ಲಿ ತ್ಯಾಗ ಮನೋಭಾವದ ಸಂಕೇತಗಳಾಗಿ–ಬೆಳೆಸುವುದು, ಹಾಗೂ ಪಕ್ಷದ ಪೂರ್ಣಾವಧಿ ಕಾರ್ಯಕರ್ತರಿಗೆ ಒಂದು ಸರಿಯಾದ ವೇತನ ವ್ಯವಸ್ಥೆ ಕಟ್ಟುನಿಟ್ಟಾಗಿ ಲಭ್ಯವಾಗುವಂತೆ ಮಾಡುವುದು ಮತ್ತು ಅದನ್ನು ನಿಯಮಿತವಾಗಿ ಕೊಡುವುದು.

ಕಾರ್ಯಕರ್ತರನ್ನು ಬೆಳೆಸುವ ಪರಿಣಾಮಕಾರಿ ಕ್ರಿಯೆಯ ಒಂದು ಭಾಗವಾಗಿ ಪ್ಲೀನಮ್ ನಿಯಮಿತವಾಗಿ ಪಕ್ಷದ ಶಾಲೆಗಳನ್ನು ನಡೆಸುವ ಮತ್ತು ಒಂದು ಕೇಂದ್ರೀಯ ಪಠ್ಯಕ್ರಮವನ್ನು ಸಿದ್ಧಪಡಿಸುವ ಅಗತ್ಯವನ್ನು ಒತ್ತಿ ಹೇಳಿದೆ. ಜತೆಗೆ ಸ್ವಯಂ ಅಧ್ಯಯನಕ್ಕೆ ಅಗತ್ಯವಾಗಿ ಓದಬೇಕಾದವುಗಳ ಒಂದು ಪಟ್ಟಿಯನ್ನು ತಯಾರಿಸಬೇಕು, ಪಕ್ಷದ ಪತ್ರಿಕೆಗಳ ಮತ್ತು ಪ್ರಕಟಣೆಗಳ ಪ್ರಸಾರ ಮತ್ತು ಗುಣಮಟ್ಟವನ್ನು ಬಹಳವಾಗಿ ಉತ್ತಮ ಪಡಿಸಬೇಕು ಹಾಗೂ ಅವುಗಳ ವಿಷಯ ವಸ್ತುಗಳು ಮತ್ತು ಸ್ವರೂಪವನ್ನು ಮೇಲ್ಮಟ್ಟಕ್ಕೆ ಏರಿಸಬೇಕು.

ಸಾಮಾಜಿಕ ದಮನದ ವಿರುದ್ಧ ಹೋರಾಟಗಳನ್ನು ತೀವ್ರಗೊಳಿಸಬೇಕು

ಭಾರತದಲ್ಲಿ ವರ್ಗಹೋರಾಟಗಳ ಮುನ್ನಡೆ ಆರ್ಥಿಕ ಶೋಷಣೆ ಮತ್ತು ಸಾಮಾಜಿಕ ದಮನ ಈ 'ಎರಡು ಕಾಲುಗಳ' ಮೇಲೆ ನಿಂತಿದೆ ಎಂಬ ಸಿಪಿಐ(ಎಂ) ತಿಳುವಳಿಕೆಯ ಮೇಲೆ ಒತ್ತು ನೀಡಿದ ಪ್ಲೀನಮ್ ಇಡೀ ಪಕ್ಷ ಲಿಂಗ ದಮನ, ದಲಿತರು, ಆದಿವಾಸಿಗಳು, ವಿಕಲಾಂಗರು ಮತ್ತು ಧಾರ್ಮಿಕ ಅಲ್ಪಸಂಖ್ಯಾತರ ವಿರುದ್ಧ ತಾರತಮ್ಯ ಇವುಗಳ ವಿರುದ್ಧ ಹೋರಾಟಗಳನ್ನು ತೀಕ್ಷ್ಣಗೊಳಿಸಲು ಪಕ್ಷದ ಸಂಘಟನಾ ಸಾಮರ್ಥ್ಯಗಳನ್ನು ಬಲಪಡಿಸಬೇಕಾದ ಅಗತ್ಯವನ್ನು ಒತ್ತಿ ಹೇಳಿದೆ. ಸಿಪಿಐ(ಎಂ) ಮುನ್ನಡೆ ಸಾಧಿಸಲು ಈ 'ಎರಡು ಕಾಲುಗಳ' ಮೇಲೆ ಮೊದಲು ನಡೆದುಕೊಂಡು, ನಂತರ ಓಡಿಕೊಂಡು ಸಾಗಬೇಕಾಗಿದೆ.

ಕೋಮುವಾದಕ್ಕೆ ಎದುರಾಗಿ

ಪ್ಲೀನಮ್ ಕೋಮುವಾದಿ ಶಕ್ತಿಗಳ ಪ್ರಸಕ್ತ ಸೈದ್ಧಾಂತಿಕ ದಾಳಿಗಳನ್ನು ಎದುರಿಸಲು ಸಂಘಟನಾ ಸಾಮರ್ಥ್ಯಗಳನ್ನು ಬಲಪಡಿಸಬೇಕಾದ ಅಗತ್ಯವಿದೆ ಎಂದು ಒತ್ತಿ ಹೇಳಿತು. ಇದಕ್ಕಾಗಿ ಸಾಹಿತಿಗಳನ್ನು, ವಿಜ್ಞಾನಿಗಳನ್ನು, ಚರಿತ್ರೆಕಾರರನ್ನು, ಸಾಂಸ್ಕೃತಿಕ ವ್ಯಕ್ತಿಗಳನ್ನು ಮತ್ತು ಇತರ ಬುದ್ಧಿಜೀವಿ ವಿಭಾಗಗಳನ್ನು ಅಣಿನೆರೆಸಬೇಕು, ಶಿಕ್ಷಕರು ಮತ್ತು ಸಾಮಾಜಿಕ ಸಂಘಟನೆಗಳನ್ನು ಒಳಗೊಂಡು ಶಾಲಾಪೂರ್ವ ಮತ್ತು ಶಾಲಾ ಮಟ್ಟಗಳಲ್ಲಿ ಮುತುವರ್ಜಿ ವಹಿಸಬೇಕು, ವೈಜ್ಞಾನಿಕ ಮನೋಭಾವ ಮತ್ತು ವೈಜ್ಞಾನಿಕ ಮೌಲ್ಯಗಳನ್ನು ಪ್ರಚುರಪಡಿಸಲು ಸಾಮಾಜಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳನ್ನು ಸಂಘಟಿಸಲು ವಿಶೇಷ ಗಮನ ನೀಡಬೇಕು; ಶೋಷಿತ ವರ್ಗಗಳು, ದಲಿತರು ಮತ್ತು ಆದಿವಾಸಿಗಳ ನಡುವೆ ಕೋಮುವಾದಿ ಪ್ರಭಾವ ತೂರುವುದನ್ನು ಎದುರಿಸಲು ವಿಶೇಷ ಚಟುವಟಿಕೆಗಳನ್ನು ವಿಕಾಸಗೊಳಿಸಬೇಕು; ಪ್ರಗತಿಶೀಲ ಮತ್ತು ಜಾತ್ಯಾತೀತ ಮೌಲ್ಯಗಳನ್ನು ಪ್ರಚುರಪಡಿಸಲು ಮತ್ತು ಸಾಂಸ್ಕೃತಿಕ ಉತ್ಪನ್ನಗಳಿಗಾಗಿ ವಿಶಾಲ ಸ್ವರೂಪದ ಸಾಂಸ್ಕೃತಿಕ ವೇದಿಕೆಗಳನ್ನು ರಚಿಸಬೇಕು. ಕಾರ್ಮಿಕ ಸಂಘಗಳು ಮತ್ತು ಇತರ ಸಾಮೂಹಿಕ ಸಂಘಟನೆಗಳು ಕೂಡ ತಮ್ಮ ಪ್ರದೇಶಗಳಲ್ಲಿ ಸಾಂಸ್ಕೃತಿಕ ಮತ್ತು ಸಾಮಾಜಿಕ ಚಟುವಟಿಕೆಗಳನ್ನು ಸಂಘಟಿಸಬೇಕು. ಜನಪ್ರಿಯ ವಿಜ್ಞಾನ ಮತ್ತು ಸಾಹಿತ್ಯಿಕ ಚಳುವಳಿಗಳನ್ನು ಬಲಪಡಿಸುವ ತುರ್ತು ಅಗತ್ಯದೊಂದಿಗೆ, ಆರೋಗ್ಯ ಕೇಂದ್ರಗಳು, ಶೈಕ್ಷಣಿಕ ತರಬೇತಿ ಕೇಂದ್ರಗಳು, ವಾಚನಾಲಯಗಳು, ಪರಿಹಾರ ಕೆಲಸಗಳು ಇತ್ಯಾದಿಗಳನ್ನು ಸಂಘಟಿಸಬೇಕು.

ತುರ್ತಾದ ಅವಶ್ಯಕ ಕರ್ತವ್ಯಗಳು

ಪಕ್ಷದ ಸಂಘಟನೆಯ ಸಾಮರ್ಥ್ಯಗಳನ್ನು ಕಟ್ಟಲಿಕ್ಕಾಗಿ ಇನ್ನೂ ಬಲಿಷ್ಠ ಜನತಾ ಹೋರಾಟಗಳನ್ನು ಸಿಪಿಐ(ಎಂ) ಹರಿಯಬಿಡಬೇಕಾಗಿದೆ. ಇದಕ್ಕೆ ಭಾರತೀಯ ಜನತೆಯೊಂದಿಗೆ ನಮ್ಮ ಸಂಪರ್ಕಗಳನ್ನು ಬಲಪಡಿಸಬೇಕು. ಇದು ಸಾಧ್ಯವಾಗಬೇಕಾದರೆ, ಮೊಟ್ಟ ಮೊದಲನೆಯದಾಗಿ, ಜನತೆಯೊಡನೆ ಜೀವಂತ ಸಂಪರ್ಕಗಳನ್ನು ಆಳಗೊಳಿಸುವ ಜನಸಮೂಹಗಳ ಧೋರಣೆಯನ್ನು ಜಾರಿಗೊಳಿಸಬೇಕು. ಇದರ ಅರ್ಥ, ಸ್ಥಳೀಯ ಪಕ್ಷದ ಘಟಕಗಳನ್ನು ಹತ್ತು ಹಲವು ಸ್ಥಳೀಯ ಹೋರಾಟಗಳನ್ನು ನಡೆಸುವಂತೆ ಬಲಪಡಿಸುವುದಲ್ಲದೆ, ಕರ್ಷಕ ಕ್ರಾಂತಿಯನ್ನು ನಡೆಸುವತ್ತ ಗಮನ ಕೇಂದ್ರೀಕರಿಸಬೇಕಾಗಿದೆ. ಪ್ರಜಾಪ್ರಭುತ್ವ ಕ್ರಾಂತಿಯ ಈ ಅಕ್ಷವನ್ನು ಹೋರಾಟಗಳಲ್ಲಿ ಎಲ್ಲ ಗ್ರಾಮೀಣ ಶೋಷಿತ ವಿಭಾಗಗಳ ಐಕ್ಯತೆಯನ್ನು ಬೆಸೆದು ಆಮೂಲಕ ರೈತ–ಕಾರ್ಮಿಕ ಮೈತ್ರಿಯನ್ನು ಬೆಳೆಸುವ ಪ್ರಯತ್ನಗಳನ್ನು ಬಲಪಡಿಸಬೇಕು.

ತಕ್ಷಣ ಗಮನ ಕೇಂದ್ರೀಕರಿಸ ಬೇಕಾದವುಗಳೆಂದರೆ, ಪಕ್ಷದ ಪ್ರಭಾವವನ್ನು ವಿಸ್ತರಿಸಲು ಮತ್ತು ಎಡ ಹಾಗೂ ಪ್ರಜಾಪ್ರಭುತ್ವವಾದಿ ಶಕ್ತಿಗಳನ್ನು ಅಣಿನೆರೆಸಲು ಆರ್ಥಿಕ ಮತ್ತು ಸಾಮಾಜಿಕ ಪ್ರಶ್ನೆಗಳ ಮೇಲೆ ವರ್ಗ ಮತ್ತು ಸಾಮೂಹಿಕ ಹೋರಾಟಗಳನ್ನು ಬೆಸೆಯುವುದು; ಒಂದು ಜನಸಮೂಹಗಳ ಧೋರಣೆಯನ್ನು ಅಂಗೀಕರಿಸಿ ಜನತೆಯೊಡನೆ ಜೀವಂತ ಸಂಪರ್ಕಗಳನ್ನು ಸ್ಥಾಪಿಸುವುದು; ಉನ್ನತ ಗುಣಮಟ್ಟದ ಸದಸ್ಯರನ್ನು ಹೊಂದಿರುವ ಒಂದು ಕ್ರಾಂತಿಕಾರಿ ಪಕ್ಷವನ್ನು ಕಟ್ಟಲು ಸಂಘಟನೆಯನ್ನು ಸಜ್ಜುಗೊಳಿಸುವುದು; ಪಕ್ಷಕ್ಕೆ ಯುವಜನರನ್ನು ಆಕರ್ಷಿಸಲು ವಿಶೇಷ ಪ್ರಯತ್ನಗಳನ್ನು ಮಾಡುವುದು; ಮತ್ತು ಕೋಮುವಾದ, ನವ–ಉದಾರವಾದ ಮತ್ತು ಪ್ರತಿಗಾಮಿ ತತ್ವಸಿದ್ಧಾಂತಗಳ ವಿರುದ್ಧ ತಾತ್ವಿಕ ಹೋರಾಟ ನಡೆಸುವುದು.

ಪ್ಲೀನಮ್‌ನಲ್ಲಿ ಅಂಗೀಕರಿಸಿದ ದಸ್ತಾವೇಜುಗಳ, ಅಂದರೆ ನಿರ್ಣಯ ಮತ್ತು ವರದಿಯನ್ನು ಪಕ್ಷದ ಪೊಲಿಟ್‌ಬ್ಯುರೊ ಮತ್ತು ಕೇಂದ್ರ ಸಮಿತಿಯಿಂದ ಆರಂಭಿಸಿ ಸಮಯಬದ್ಧ ರೀತಿಯಲ್ಲಿ ಜಾರಿಗೊಳಿಸಬೇಕು ಎಂದು ನಿರ್ಧರಿಸಲಾಗಿದೆ. ಕೆಲವು ರಾಜ್ಯಗಳು ಸದ್ಯದಲ್ಲೇ ವಿಧಾನಸಭಾ ಚುನಾವಣೆಗಳಿಗೆ ಹೋಗಲಿರುವುದರಿಂದ ಎಲ್ಲ ರಾಜ್ಯ ಸಮಿತಿಗಳು ತಂತಮ್ಮ ಮೂರ್ತ ಪರಿಸ್ಥಿತಿಗಳಿಗೆ ಅನುಸಾರವಾಗಿ ಇವುಗಳ ಸಮಯಬದ್ಧ ಜಾರಿಯ ಯೋಜನೆಗಳನ್ನು ಮೂರ್ತಗೊಳಿಸಬೇಕು, ಮತ್ತು ಒಂದು ವರ್ಷದೊಳಗೆ ಅವುಗಳ ವಿಮರ್ಶೆ ನಡೆಸಬೇಕು ಎಂದು ಪ್ಲೀನಮ್ ನಿರ್ಧರಿಸಿದೆ.

ಪ್ಲೀನಮ್ ಈ ಎಲ್ಲ ನಿರ್ಣಯಗಳನ್ನು ಒಂದು ತುರ್ತಿನ ದೃಢತೆಯೊಂದಿಗೆ ಜಾರಿಗೊಳಿಸಲು ಒಂದಾಗಿ ಪ್ರಯತ್ನಿಸಬೇಕು ಎಂದು ಇಡೀ ಪಕ್ಷಕ್ಕೆ, ಅದರ ಎಲ್ಲ ಸದಸ್ಯರಿಗೆ, ಕಾರ್ಯಕರ್ತರಿಗೆ ಮತ್ತು ಹಿತೈಷಿಗಳಿಗೆ ಕರೆ ನೀಡುವುದರೊಂದಿಗೆ ಮುಕ್ತಾಯಗೊಂಡಿತು. ಸಿಪಿಐ(ಎಂ) ನಮ್ಮ ದೇಶದ ಒಂದು ಕ್ರಾಂತಿಕಾರಿ ಸಾಮಾಜಿಕ ಪರಿವರ್ತನೆಯ ತನ್ನ ಜವಾಬ್ದಾರಿಯನ್ನು ನಿರ್ವಹಿಸುವತ್ತ ಮುಂದುವರೆಯಬಹುದಾದ ಏಕೈಕ ದಾರಿಯಿದು.

ಒಂದು ಅಖಿಲ ಭಾರತ ಸಾಮೂಹಿಕ ಜನನೆಲೆಯ
ಬಲಿಷ್ಠ ಸಿಪಿಐ(ಎಂ)ನತ್ತ ಮುನ್ನಡೆಯೋಣ!
ಒಂದು ಜನಸಮೂಹಗಳ ಧೋರಣೆಯ
ಕ್ರಾಂತಿಕಾರಿ ಪಕ್ಷದತ್ತ ಮುನ್ನಡೆಯೋಣ!

ರೈತರ ಆತ್ಮಹತ್ಯೆಗಳ ಸಂಖ್ಯೆ ಸಾವಿರ.......

ಪುಟ 9 ರಿಂದ

ನೀತಿಯ ಹೆಸರಿನಲ್ಲಿ ಆರಂಭಿಸಿ, ಮುಂದೆ 1994ರಲ್ಲಿ ಬಹುರಾಷ್ಟ್ರೀಯ ಸಂಸ್ಥೆಗಳ ಪರವಾದ ಆರ್ಥರ್ ಡಂಕಲ್ ಪ್ರಸ್ತಾಪಗಳಾದ ಗ್ಯಾಟ್‌ಒಪ್ಪಂದಗಳಿಗೆ ಮುಂದಾಗಿ, ಜಾಗತೀಕರಣದ ಮುಕ್ತ ವ್ಯಾಪಾರ ನೀತಿಯನ್ನು, ಸಾರ್ವಜನಿಕ ಹೂಡಿಕೆಯನ್ನು ಹಿಂಪಡೆವ ಮತ್ತು ಖಾಸಗೀಕರಣದ ನೀತಿ ಹಾಗೂ ಉದಾರೀಕರಣದ ನೀತಿಗಳನ್ನು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು, ಅಪ್ಪಿಕೊಂಡುದು ಈ ದುಸ್ಥಿತಿಯ ಮೂಲಕಾರಣವಾಗಿದೆ. ಇದರಂತೆ ಬಹುರಾಷ್ಟ್ರೀಯ ಸಂಸ್ಥೆಗಳ ಮತ್ತು ನಮ್ಮ ಆಳುವ ವರ್ಗಗಳ ಒತ್ತಡಕ್ಕೊಳಗಾದ, ಅವುಗಳ ರಾಜಕೀಯ ಪಕ್ಷಗಳು, ಮುಖಂಡರು ಈಗಿನ ರೈತಾಪಿ ಜನತೆಯ ಆ ಧಾರದ ಕೃಷಿಯನ್ನು ನಾಶ ಪಡಿಸಿ ಕಂಪೆನಿ ಕೃಷಿಯನ್ನು ಜಾರಿಗೆ ತರುವುದೇ ಅವರ ಉದ್ದೇಶವಾಗಿದ್ದುದರಿಂದ, ಕೃಷಿ ಮತ್ತು ಕೈಗಾರಿಕಾ ರಂಗದಲ್ಲಿ ಉದ್ದೇಶ ಪೂರ್ವಕವಾದ ಬಿಕ್ಕಟ್ಟನ್ನು ಹರಿಬಿಟ್ಟರು. ಮುಖ್ಯವಾಗಿ, ಕೃಷಿರಂಗದಲ್ಲಿ ಸರ್ವಾಂಗೀಣ ಬಿಕ್ಕಟ್ಟನ್ನು ಸೃಷ್ಟಿಸಿದರು. ಇದರ ದುಷ್ಪರಿಣಾಮದಿಂದಾಗಿಯೇ ರೈತರು ಕೃತಕವಾಗಿ ನಿರ್ಮಿಸಲಾದ ಅವನತಿಯ ಸಾಲದ ಸುಳಿಗೆ ಸಿಲುಕುವಂತಾದರು. ಹೀಗಾಗಿ ಯಾವ ಬೆಳೆಯನ್ನು ಬೆಳೆದರೂ ರೈತರು ಸಾಲಗಾರರಾಗುವುದು ಅನಿವಾರ್ಯವಾಗಿತ್ತು.



ಖಂಡಿತಾ, ಈ ನೀತಿಗಳು ಹೇಗೆ ಈ ಉರುಳನ್ನು ಹಣೆದವೆಂಬುದನ್ನು ಪರಿಶೀಲಿಸಬಹುದಾಗಿದೆ. ರೈತರನ್ನು ಭೂಮಿಯಿಂದ ಹೊರ ಹಾಕುವುದು ಆಳುವ ವರ್ಗಗಳಿಗೆ ಬಹಳ ಸುಲಭವಿತ್ತು. ಇದಕ್ಕಾಗಿ ಒಂದೆಡೆ ವ್ಯವಸಾಯದ ಉತ್ಪಾದನಾ ವೆಚ್ಚವನ್ನು ಅಗಾಧವಾಗಿ ಹೆಚ್ಚಿಸಲಾಯಿತು. ಉದಾಹರಣೆಗೆ, 2000 ದಲ್ಲಿ ಭತ್ತ ಬೆಳೆಯ ಒಟ್ಟು ವೆಚ್ಚ ರೂ.14,390 ಆಗಿದ್ದರೆ, 15 ವರ್ಷಗಳನಂತರ ಈಗ ಅದರ ಉತ್ಪಾದನಾ ವೆಚ್ಚ ರೂ. 41,325, ಅಂದರೆ ಸುಮಾರು ಶೇ 300ರಷ್ಟು ಹೆಚ್ಚಳ.

ಅದೇ ರೀತಿ, ಮತ್ತೊಂದೆಡೆ ಕಡಿಮೆ ಬಡ್ಡಿದರದ ಸಾರ್ವಜನಿಕ ಬ್ಯಾಂಕುಗಳ ಸಾಲ ಲಭ್ಯವಾಗದಂತೆ ನೋಡಿಕೊಳ್ಳಲಾಯಿತು. ಅವು ಸಾಲದ ಪ್ರಮಾಣವನ್ನು ಕಡಿತಗೊಳಿಸಿದವು ಮಾತ್ರವಲ್ಲ ಸಾಲಕಟ್ಟಲಾಗದ ರೈತರನ್ನು ಡೀಫಾಲ್ಟರುಗಳೆಂದು ಘೋಷಿಸಿ ಹೊಸ ಸಾಲ ನೀಡುವುದನ್ನು ನಿರಾಕರಿಸಿದವು. ಆ ಮೂಲಕ ಕೃಷಿ ವ್ಯಾಪಾರಿಗಳ ಕಡೆ ರೈತರನ್ನು ತಳ್ಳಿ ಅವರ ಮತ್ತಷ್ಟು ಶೋಷಣೆಗೆ ಅನುವು ಮಾಡಲಾಯಿತು. ಮಾತ್ರವಲ್ಲಾ, ಇನ್ನೊಂದೆಡೆ ಅವರು ಬೆಳೆದ ಬೆಳೆಗೆ ವೈಜ್ಞಾನಿಕವಾದ ಮತ್ತು ಲಾಭದಾಯಕವಾದ ಬೆಲೆಗಳು ಸಿಗದಂತೆ ಜಾಣ ಕಿವುಡು ಹಾಗೂ ಕುರುಡು ನೀತಿಯನ್ನು ಅನುಸರಿಸಲಾಯಿತು. ಅದೇ ಸಂದರ್ಭದಲ್ಲಿ, ತಲಾ ಕುಟುಂಬದ ಜೀವನ ವೆಚ್ಚವನ್ನು ಈ ಅವಧಿಯಲ್ಲಿ ಅಗಾಧವಾಗಿ ಹೆಚ್ಚಿಸಲಾಯಿತು. ಹಾಗೇ, ಕೈಗಾರಿಕಾ ಹಾಗೂ ಕೃಷಿ ರಂಗಕ್ಕೆ ನೀಡುವ ಸೌಲಭ್ಯದಲ್ಲಿ ತಾರತಮ್ಯವನ್ನು ಮುಂದುವರೆಸಲಾಯಿತು. ಈ ಎಲ್ಲದರ ಸಂತಾನವೇ ಕೃಷಿಬಿಕ್ಕಟ್ಟು ಮತ್ತು ರೈತರ ಈ ಸಾಲಬಾಧೆ. ಹೀಗಾಗಿ ರೈತರ ಆತ್ಮಹತ್ಯೆಗಳ ಅಪರಾಧ ಅವರದ್ದಾಗಿಲ್ಲ ಅದು ಸರಕಾರಗಳು ಅನುಸರಿಸುವ ನೀತಿಗಳದ್ದಾಗಿದ್ದು ಸರಕಾರಗಳೇ ಅಪರಾಧಿಗಳಾಗಿವೆ.

ಕರ್ನಾಟಕದಲ್ಲಿನ 73ಲಕ್ಷ ಹಿಡುವಳಿಗಳಲ್ಲಿ ಶೇ 80ರಷ್ಟು ಹಿಡುವಳಿಗಳು ಸಣ್ಣ ಅತೀಸಣ್ಣ ಹಿಡುವಳಿಗಳಾಗಿವೆ. ಮಧ್ಯಮ ಹಿಡುವಳಿಗಳನ್ನು ಸೇರಿಸಿ ಸರಾಸರಿ ಜಮೀನು ಎಷ್ಟೆಂದು ಗುರುತಿಸಿದರೆ, ಅದು 3 ಎಕರೆಗಿಂತ ಹೆಚ್ಚಾಗದು. ಈ ಭೂಮಿಗಳು 1990 ರ ಪೂರ್ವದಲ್ಲಿ ಸರಿಸುಮಾರು ಅಂದಿನ ಜೀವನಾಶ್ಯಕ ವಸ್ತುಗಳ ಬೆಲೆಗಳಲ್ಲಿ ಒಂದು ಸಣ್ಣ ಪ್ರಮಾಣದ ಜೀವನ ನಿರ್ವಹಣೆಗೆ ಅವು ಸಹಾಯ ಮಾಡುತ್ತಿದ್ದವು. ಅದಾಗಲೇ ಅವರು ಕನಿಷ್ಠ ಜೀವನ ನಿರ್ವಹಣೆಗಾಗಿ ಕರಾವಳಿ, ಮಲೆನಾಡು ಮತ್ತು ದಕ್ಷಿಣ ಕರ್ನಾಟಕದ ರೈತರು ತಮ್ಮ ಇಡೀಯಾದ ಶ್ರಮ ಸಾಮರ್ಥ್ಯವನ್ನು ವಿನಿಯೋಗಿಸಿದ್ದರು, ಅವರು ಒಂದೆಡೆ ವ್ಯವಸಾಯದಲ್ಲಿ ತೊಡಗಿರುವಾಗಲೇ ಮತ್ತೊಂದೆಡೆ ರೇಷ್ಮೆ ಹಾಗೂ ಪಶುಪಾಲನೆಯಲ್ಲಿ ಬಿಡುವಿಲ್ಲದೆ ತೊಡಗಿದ್ದರು. ಅದೇ ರೀತಿ ಕರಾವಳಿಯಲ್ಲಿ ಅಡಿಕೆ, ತೆಂಗು ವ್ಯವಸಾಯದ ಜೊತೆ ಪಶುಪಾಲನೆ ಮತ್ತು ಬೀಡಿ ಕಟ್ಟುವ ಕಾಯಕವನ್ನು ನಡೆಸಿದ್ದರು. ಉತ್ತರ ಕರ್ನಾಟಕದ ಪರಿಸ್ಥಿತಿಯಲ್ಲಿ ಇವರಿಗೆ ತಮ್ಮ ಶ್ರಮ ಸಾಮರ್ಥ್ಯವನ್ನು ಪೂರ್ಣವಾಗಿ ವಿನಿಯೋಗಿಸಲು ವ್ಯಾಪಕ ಶೋಷಣೆಯ ಕಾರಣದಿಂದಾಗಿ ಸಾಧ್ಯವಾಗಿರಲಿಲ್ಲ.

ಆದರೆ, ಕೇಂದ್ರ ಹಾಗೂ ರಾಜ್ಯ ಸರಕಾರಗಳು ಕಳೆದೆರಡುವರೆ ದಶಕಗಳಿಂದ ಅನುಸರಿಸುತ್ತಿರುವ ಬಹುರಾಷ್ಟ್ರೀಯ ಸಂಸ್ಥೆಗಳ ಪರವಾದ ಜಾಗತೀಕರಣ, ಉದಾರೀಕರಣದ ಮತ್ತು ಖಾಸಗೀಕರಣದ ನೀತಿಗಳ ದಾಳಿಯ ಕಾರಣದಿಂದ ಈ ಎಲ್ಲ ಶ್ರಮ ಸಾಮರ್ಥ್ಯದಲ್ಲೂ ನಷ್ಟವನ್ನು ಈಗ ಈ ಎಲ್ಲರೂ ಅನುಭವಿಸುವಂತಾಗಿದೆ. ಹೀಗಾಗಿ, ಇವರುಗಳು ತಮ್ಮ ಎಲ್ಲಾ ಶ್ರಮಸಾಮರ್ಥ್ಯವನ್ನು ವಿನಯೋಗಿಸಿದಾಗಲೂ ಈಗಿನ ಅವರ ಕುಟುಂಬದ ಜೀವನ ನಿರ್ವಹಣೆಗೆ ಈ ಹಿಡುವಳಿಗಳು ಸಹಕಾರಿಯಾಗುಳಿದಿಲ್ಲ. ಬದಲಿಗೆ ಸಾಲದ ಹೊರೆಯನ್ನು ಉಣಿಸುವಂತವುಗಳಾಗಿವೆ.

ಸರ್ಕಾರಗಳ ಹಲವು ವರದಿಗಳು ಒಪ್ಪಿಕೊಂಡಿರುವಂತೆ ಬಡ ಹಾಗೂ ಮಧ್ಯಮ ರೈತರ ಹಾಗೂ ಕೂಲಿಕಾರರ ಮತ್ತು ಕಸುಬುದಾರರ ಕುಟುಂಬಗಳ ರಾಜ್ಯದ ಸರಾಸರಿ ತಲಾ ಆದಾಯ 20 ರೂಗಳಿಗೂ ಕಡಿಮೆ ಇದೆ. ಹೀಗಾಗಿ, ಪ್ರತಿಕುಟುಂಬಗಳ ತಲಾ ಸರಾಸರಿ ಆದಾಯ 100 ರೂಗಳಿಗೂ ಕಡಿಮೆ ಇದೆ. ಈ ದಿನಗಳಲ್ಲಿನ ಅಗತ್ಯವಸ್ತುಗಳ ಮತ್ತು ಇತರೇ ಅವಶ್ಯ ಸೇವೆಗಳ ವ್ಯಾಪಕವಾದ ಬೆಲೆಏರಿಕೆಗಳಿಂದಾಗಿ, ಜೀವನ ನಿರ್ವಹಣೆಯ ವೆಚ್ಚಕ್ಕೆ ಕನಿಷ್ಠ ಮಾಸಿಕ ವೇತನ 15,000 ರೂಗಳಾದರೂ ಇರಲೇ ಬೇಕೆಂದು ದೇಶದ ಎಲ್ಲಾ ಕಾರ್ಮಿಕ ಸಂಘಗಳು ಒತ್ತಾಯಿಸುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ಇದನ್ನೇ ಮಾನದಂಡವನ್ನಾಗಿಸಿಕೊಂಡರೆ, ಗ್ರಾಮೀಣ ಕುಟುಂಬಗಳ ಜೀವನ ನಿರ್ವಹಣೆಗೆ ವಾರ್ಷಿಕ 1,80,000 ರೂಪಾಯಿಗಳ ಅಗತ್ಯವಿದೆ. ಅಂದರೇ ರಾಜ್ಯದ ಸರಾಸರಿ 3 ಎಕರೆ ಜಮೀನನ್ನು ಹೊಂದಿರುವ ರೈತ ಕುಟುಂಬಗಳು, ತಲಾ ಎಕರೆಯಿಂದ ಕನಿಷ್ಠ 60ಸಾವಿರ ರೂಗಳಷ್ಟು ಆದಾಯವನ್ನು ಪಡೆಯಬೇಕಾಗುತ್ತದೆ. ಅಂದರೇ, ಈಗಿನ ತಲಾ ಆದಾಯದ ಸುಮಾರು 5–6 ಪಟ್ಟು ಹೆಚ್ಚಿನ ಆದಾಯ ಬೇಕಾಗುತ್ತದೆ. ಇದಿಲ್ಲದಿದ್ದಾಗ ಜೀವನ ನಿರ್ವಹಣೆಯೂ ಕೂಡ ಸಾಲವನ್ನು ಹೆಚ್ಚಿಸಲಿದೆ.

(ಕೃಷಿ ಉತ್ಪನ್ನಗಳ ಆದಾಯವು ಅವುಗಳ ವೆಚ್ಚವನ್ನು ಸರಿದೂಗಿಸುತ್ತಿಲ್ಲವೇಕೆ? ಸಾಲದ ಬಾಧೆಯಿಂದ ರೈತರ ಸಂರಕ್ಷಣೆ ಸಾಧ್ಯವಿಲ್ಲವೇ? ಈ ಪ್ರಶ್ನೆಗಳನ್ನು ಈ ಲೇಖನದ ಮುಂದಿನ ಭಾಗದಲ್ಲಿ ಲೇಖಕರು ಪರಿಶೀಲಿಸಿದ್ದಾರೆ. ಅದನ್ನು ಮುಂದೆ ಪ್ರಕಟಿಸಲಾಗುವುದು) ■

12ನೇ ದಕ್ಷಿಣ ಆಫ್ರಿಕಾ ಟಿ.ಯು. ಮಹಾಧಿವೇಶನ



ಶರತ್‌ಚಂದ್ರ



'ಬಂಡವಾಳಶಾಹಿ ವರ್ಗದ ಹಿತಾಸಕ್ತಿಗಳನ್ನು ಪ್ರತಿನಿಧಿಸುವ ಸರಕಾರಗಳು ಬಹಿರಂಗವಾಗಿಯೇ ವರ್ಗ ಸಮರ ಘೋಷಿಸಿವೆ. ಕಾರ್ಮಿಕ ವರ್ಗವನ್ನು ಪ್ರತಿನಿಧಿಸುವ ನಾವು ಅದಕ್ಕೆ ಸರಿಯಾದ ಪ್ರತಿಸ್ಪಂದನೆ ಕೊಡುವ ರಾಜಕೀಯ ಮತ್ತು ಸಂಘಟನಾ ಸಾಮರ್ಥ್ಯ ಹೊಂದಿದ್ದೇವೆಯೇ ಎಂಬ ಪ್ರಶ್ನೆಗೆ, ಈ ಮಹಾಧಿವೇಶನ ಪ್ರಾಯೋಗಿಕ ಉತ್ತರ ಕಂಡುಕೊಳ್ಳಬೇಕಾಗಿದೆ' – ಸಿಡುಮೊ ದ್ಲಾಮಿನಿ (ಕೊಸಾಟು ಅಧ್ಯಕ್ಷ)

ಇತ್ತೀಚೆಗೆ (ನವೆಂಬರ್ 23–26) ದಕ್ಷಿಣ ಆಫ್ರಿಕಾ ಟಿ.ಯು.ಗಳ ಕೇಂದ್ರೀಯ ಸಂಘಟನೆ ಕೊಸಾಟು (ದಕ್ಷಿಣ ಆಫ್ರಿಕಾ ಟ್ರೇಡ್ ಯೂನಿಯನ್ ಗಳ ಕಾಂಗ್ರೆಸ್)ನ 12 ನೇ ಮಹಾಧಿವೇಶನ ನಡೆಯಿತು. 'ರಾಷ್ಟ್ರೀಯ ಪ್ರಜಾಸತ್ತಾತ್ಮಕ ಕ್ರಾಂತಿ ಮುನ್ನಡೆಸಲು ಕೊಸಾಟು ಐಕ್ಯತೆ ಮತ್ತು ಹೊಂದಾಣಿಕೆಗಾಗಿ' ಎಂಬುದು ಮಹಾಧಿವೇಶನದ ಮುಖ್ಯ ಆಶಯವಾಗಿತ್ತು. ದಕ್ಷಿಣ ಆಫ್ರಿಕಾದ 19 ಲಕ್ಷ ಕಾರ್ಮಿಕರ ಟ್ರೇಡ್ ಯೂನಿಯನುಗಳು ಮತ್ತು 18 ಕ್ಷೇತ್ರವಾರು ರಾಷ್ಟ್ರೀಯ ಫೆಡರೇಶನುಗಳನ್ನು ಪ್ರತಿನಿಧಿಸುವ 2563 ಪ್ರತಿನಿಧಿಗಳು ಭಾಗವಹಿಸಿದ್ದರು. 31 ದೇಶಗಳ ಕೇಂದ್ರೀಯ ಟ್ರೇಡ್ ಯೂನಿಯನ್ ಗಳು ಹಾಗೂ ಡಬ್ಲ್ಯೂ.ಎಫ್.ಟಿ.ಯು. ನಂತಹ ಅಂತರ್ರಾಷ್ಟ್ರೀಯ ಟ್ರೇಡ್ ಯೂನಿಯನ್ ಸಂಘಟನೆಗಳನ್ನು ಪ್ರತಿನಿಧಿಸುವ 50 ಪ್ರತಿನಿಧಿಗಳು ಭಾಗವಹಿಸಿದ್ದರು. ಕೊಸಾಟು ದಕ್ಷಿಣ ಆಫ್ರಿಕಾದ 'ತ್ರಿವಳಿ ಕೂಟ'ದ ಸದಸ್ಯ ಆಗಿರುವುದರಿಂದ ಕೂಟದ ಇನ್ನೆರಡು – ಆಫ್ರಿಕನ್ ನ್ಯಾಶನಲ್ ಕಾಂಗ್ರೆಸ್ ಮತ್ತು ದಕ್ಷಿಣ ಆಫ್ರಿಕಾ ಕಾಂಗ್ರೆಸ್ – ಸದಸ್ಯ ಸಂಘಟನೆಗಳ ದೊಡ್ಡ ಪ್ರತಿನಿಧಿ ಮಂಡಲ ಮಹಾಧಿವೇಶನದಲ್ಲಿ ಭಾಗವಹಿಸಿತ್ತು. ಅವರು ಇತರ 2563 ಪ್ರತಿನಿಧಿಗಳು ಎಲ್ಲಾ ಕಲಾಪಗಳಲ್ಲಿ ಭಾಗವಹಿಸಿದರು. ಬರಿಯ ವೀಕ್ಷಕರಾಗಿರಲಿಲ್ಲ. ಭಾರತದ ಸಿಐಟಿಯುನ ಹಿರಿಯ ನಾಯಕ ಸ್ವದೇಶ್ ದೇವ್ ರಾಯ್ ಡಬ್ಲ್ಯೂ.ಎಫ್.ಟಿ.ಯು. ಉಪ ಪ್ರಧಾನ ಕಾರ್ಯದರ್ಶಿಯಾಗಿ ಭಾಗವಹಿಸಿದ್ದರು.

ಈ ವರ್ಷ ಕೊಸಾಟು ಸ್ಥಾಪನೆಯ 30ನೇ ವರ್ಷ ಹಾಗೂ ದಕ್ಷಿಣ ಆಫ್ರಿಕಾದ ಪ್ರಮುಖ ವಿದ್ಯಮಾನಗಳಾದ ಎಸ್.ಎ.ಸಿ.ಟಿ.ಯು.(ಕೊಸಾಟುವಿನ 'ಪೂರ್ವಜ' ಸಂಘಟನೆ) ಸ್ಥಾಪನೆ ಮತ್ತು ಸ್ವಾತಂತ್ರ್ಯ ಚಾರ್ಟರ್ ಗಳ 60ನೇ ವಾರ್ಷಿಕವೂ ಹೌದು. ಕೊಸಾಟು ಇತ್ತೀಚೆಗೆ ಪ್ರಮುಖ ಆಂತರಿಕ ಸಂಘಟನಾ ಕೋಲಾಹಲ ಎದುರಿಸಿತ್ತು. ಜುಲೈನಲ್ಲಿ ನಡೆದ ವಿಶೇಷ ರಾಷ್ಟ್ರೀಯ ಕಾಂಗ್ರೆಸ್‌ನಲ್ಲಿ ಪ್ರಧಾನ ಕಾರ್ಯದರ್ಶಿ ಜ್ವೆಲಿನ್‌ಜಿಮಾವಾವಿ ಅವರನ್ನು ವಜಾ ಮಾಡಲಾಗಿತ್ತು. ಎನ್.ಯು.ಎಂ.ಎಸ್.ಎ.(ಲೋಹ ಕಾರ್ಮಿಕರ ರಾಷ್ಟ್ರೀಯ ಫೆಡರೇಶನ್) ಸಂಘಟನೆಯ ಕೊಸಾಟು ಸದಸ್ಯತ್ವ ರದ್ದು ಮಾಡಿತ್ತು.

'ಸರಕಾರಗಳು ವರ್ಗ ಸಮರ ಘೋಷಿಸಿವೆ'

ಬಂಡವಾಳಶಾಹಿ ವರ್ಗದ ಹಿತಾಸಕ್ತಿಗಳನ್ನು ಪ್ರತಿನಿಧಿಸುವ ಸರಕಾರಗಳು 'ಬಹಿರಂಗವಾಗಿಯೇ ವರ್ಗ ಸಮರ ಘೋಷಿಸಿವೆ. ಕಾರ್ಮಿಕ ವರ್ಗವನ್ನು ಪ್ರತಿನಿಧಿಸುವ ನಾವು ಅದಕ್ಕೆ ಸರಿಯಾದ ಪ್ರತಿಸ್ಪಂದನೆ ಕೊಡುವ ರಾಜಕೀಯ ಮತ್ತು ಸಂಘಟನಾ ಸಾಮರ್ಥ್ಯ ಹೊಂದಿದ್ದೇವೆಯೇ ಎಂಬ ಪ್ರಶ್ನೆಗೆ, ಈ ಮಹಾಧಿವೇಶನ ಪ್ರಾಯೋಗಿಕ ಉತ್ತರ ಕಂಡುಕೊಳ್ಳಬೇಕಾಗಿದೆ' ಎಂದು ಉದ್ಘಾಟನಾ ಭಾಷಣದಲ್ಲಿ ಕೊಸಾಟು ಅಧ್ಯಕ್ಷ ಸಿಡುಮೊ ದ್ಲಾಮಿನಿ ಸಾರಿದರು. ಕಾರ್ಮಿಕ–ವಿರೋಧಿ ನೀತಿಗಳಿಗಾಗಿ ಅವರು ದಕ್ಷಿಣ ಆಫ್ರಿಕಾ ಸರಕಾರವನ್ನು ಕಟುವಾಗಿ ಟೀಕಿಸಿದರು. ಅವರು ತಮ್ಮ ಭಾಷಣದಲ್ಲಿ ದಕ್ಷಿಣ ಆಫ್ರಿಕಾದ ಕಾರ್ಮಿಕ ವರ್ಗದ ಸಂಕಷ್ಟಗಳನ್ನು ವಿವರವಾಗಿ ಬಿಚ್ಚಿಟ್ಟರು. ಅರ್ಧದಷ್ಟು ಕಾರ್ಮಿಕರಿಗೆ ರಾಷ್ಟ್ರೀಯ ಆದಾಯದ ಶೇ. 8 ಸಹ ಸಿಗುತ್ತಿಲ್ಲ. ಅರ್ಧಕ್ಕಿಂತಲೂ ಹೆಚ್ಚು (ಶೇ. 54) ಕಾರ್ಮಿಕರಿಗೆ ನಿಯಮಿತ ಕೂಲಿ ಏರಿಕೆಯೂ ಆಗುವುದಿಲ್ಲ. ಹೀಗಿರುವಾಗ ಮಾಲಕರು ಸಾಮೂಹಿಕ ಚೌಕಾಶಿ ರದ್ದು ಮಾಡಲು ಹೇಗೆ ಒತ್ತಾಯಿಸುತ್ತಾರೆ ಎಂದು ಅವರು ಪ್ರಶ್ನಿಸಿದರು. ದಕ್ಷಿಣ ಆಫ್ರಿಕಾದ 'ತ್ರಿವಳಿ ಕೂಟ'ದ ಇತರ ಎರಡು ಸಂಘಟನೆಗಳನ್ನು ಪ್ರತಿನಿಧಿಸಿ ದಕ್ಷಿಣ ಆಫ್ರಿಕಾದ ಅಧ್ಯಕ್ಷ ಜೇಕಬ್ ಝೂಮೊ ಮತ್ತು ದಕ್ಷಿಣ ಆಫ್ರಿಕಾ ಕಮ್ಯುನಿಸ್ಟ್ ಪಕ್ಷದ ಪ್ರಧಾನ ಕಾರ್ಯದರ್ಶಿ ಬ್ಲೇಡ ಝಿಮಾಂದೆ ಮಹಾಧಿವೇಶನವನ್ನು ಉದ್ದೇಶಿಸಿ ಮಾತನಾಡಿದರು. ಡಬ್ಲ್ಯೂ.ಎಫ್.ಟಿ.ಯು ಪ್ರಧಾನ ಕಾರ್ಯದರ್ಶಿ ಸಹ ಮಹಾಧಿವೇಶನವನ್ನು ಉದ್ದೇಶಿಸಿ ಮಾತನಾಡಿದರು.

ಮಹಾಧಿವೇಶನದ ವರದಿ ಸೃಜನಶೀಲವಾಗಿ ಆಕರ್ಷಕವಾಗಿ – ರಾಜಕೀಯ, ಸಾಮಾಜಿಕ–ಆರ್ಥಿಕ, ಸಂಘಟನಾ, ಅಂತರ್ರಾಷ್ಟ್ರೀಯ, ನಿರ್ಣಯಗಳು, ಹಣಕಾಸು ಲೆಕ್ಕಪತ್ರ ವರದಿ – ಆರು ಪುಸ್ತಕಗಳಲ್ಲಿ ಮುದ್ರಿತವಾಗಿತ್ತು. ಈ ಆರು ವರದಿಗಳನ್ನು ಮಂಡಿಸಿ, ಚರ್ಚಿಸಿ ಸೂಚಿತ ಅಂಗೀಕೃತ ತಿದ್ದುಪಡಿಗಳೊಂದಿಗೆ ಅನುಮೋದಿಸಲಾಯಿತು.

ಈ ವರದಿಗಳಲ್ಲಿ ಕಂಡು ಬಂದ ಕೆಲವು ಆಸಕ್ತಿಕಾರಕ ಅಂಶಗಳು

- ದೇಶದ ಒಟ್ಟು 1.34 ಕೋಟಿ ಕಾರ್ಮಿಕರಲ್ಲಿ ಶೇ. 27.6ರಷ್ಟು ಮಾತ್ರ ಸಂಘಟಿತರಾಗಿದ್ದಾರೆ
- ಸಂಘಟಿತ ಕಾರ್ಮಿಕರಲ್ಲಿ 35–45 ವಯೋಮಾನದವರು ಬಹುಸಂಖ್ಯಾತರು. ಶೇ. 41 ಮಹಿಳೆಯರು
- 1991ರಲ್ಲಿ ಸಾರ್ವಜನಿಕ ಕ್ಷೇತ್ರದ ಕಾರ್ಮಿಕರು ಕೊಸಾಟು ಸದಸ್ಯತ್ವದ ಶೇ. 7 ಮಾತ್ರ ಇದ್ದರು. ಅದು 2012ರ ಹೊತ್ತಿಗೆ ಶೇ. 39 ಕ್ಕೆ ಏರಿದೆ. ಅಂದರೆ ಖಾಸಗಿ ಕ್ಷೇತ್ರದ ಕಾರ್ಮಿಕರ ಪ್ರಮಾಣ ಇಳಿದಿದೆ ಅಂತ ಕೂಡಾ.
- ಖಾಸಗಿ ಕ್ಷೇತ್ರದಲ್ಲಿ ಸಂಘಟಿತ ಕಾರ್ಮಿಕರ ಪ್ರಮಾಣ 1995 ರಿಂದ ಶೇ. 32.4 ರ ಮಟ್ಟದಲ್ಲಿ ಸ್ಥಗಿತಗೊಂಡಿದೆ.
- ಸಾರ್ವಜನಿಕ ಕ್ಷೇತ್ರದಲ್ಲಿ ಸಂಘಟಿತ ಕಾರ್ಮಿಕರ ಪ್ರಮಾಣ 1995ರಲ್ಲಿದ್ದ ಶೇ. 50ರಿಂದ ಶೇ. 68.4 ಕ್ಕೆ ಏರಿದೆ. ಇದು ಕೊಸಾಟು ಸಾರ್ವಜನಿಕ ಕ್ಷೇತ್ರದಲ್ಲಿ ಕಾರ್ಮಿಕರ ಹಕ್ಕುಗಳಿಗಾಗಿ ನಡೆಸಿದ ಸತತ ಹೋರಾಟದ ಪರಿಣಾಮವಾಗಿ ಕಾರ್ಮಿಕ ಕಾನೂನುಗಳಲ್ಲಿ ಬಂದ ಬದಲಾವಣೆಗಳಿಂದ ಸಾಧ್ಯವಾಗಿದೆ. ಇದರ ಪರಿಣಾಮವಾಗಿ ಪೋಲಿಸ್, ಮಿಲಿಟರಿಗಳಲ್ಲಿ ಕೆಲಸ ಮಾಡುವವರೂ ಯೂನಿಯನ್ ಸದಸ್ಯರಾಗಬಹುದಾಗಿದೆ.
- ಕಾಂಟ್ರಾಕ್ಟ್ ಕಾರ್ಮಿಕರ ಬಗ್ಗೆ ಕೊಸಾಟು ಹೋರಾಟಗಳಿಂದ ಕಳೆದ ಎಪ್ರಿಲ್ ನಿಂದ ಬಂದ ಕಾನೂನು ಪ್ರಕಾರ 3 ತಿಂಗಳುಗಳಿಗಿಂತ ಹೆಚ್ಚಿನ ಕಾಂಟಾಕ್ಟ್ ಇರುವಂತಿಲ್ಲ. 3 ತಿಂಗಳುಗಳಿಗಿಂತ ಹೆಚ್ಚು ಅವಧಿ ಕೆಲಸ ಮಾಡಿದ ಕಾರ್ಮಿಕ ಖಾಯಂ ಆಗುತ್ತಾನೆ.

ತ್ರಿವಳಿ ಕೂಟದ ಶೃಂಗಸಭೆಗೆ ಕರೆ

ರಾಜಕೀಯ ಪರಿಸ್ಥಿತಿ ಬಗ್ಗೆ ಮಹಾಧಿವೇಶನ ಚರ್ಚೆ ನಡೆಸಿ 2016ರ ಮೊದಲ ಭಾಗದಲ್ಲಿ ತ್ರಿವಳಿ ಕೂಟದ ರಾಷ್ಟ್ರೀಯ ಶೃಂಗಸಭೆ ಸಂಘಟಿಸಬೇಕು. ಅದಕ್ಕಿಂತ ಮೊದಲು ಕೂಟದ ರಾಜಕೀಯ ಮಂಡಳಿಯ ಸಭೆ ಕರೆಯಬೇಕು. ಈ ಮಂಡಳಿ ಈಗಿನ ನವ–ಉದಾರವಾದಿ ನೀತಿಗಳನ್ನು ಬಿಟ್ಟು, ಜನಪರ ಹಾಗೂ ಜನರೇ ನಿರ್ಧರಿಸುವ ಆರ್ಥಿಕ ಬದಲಾವಣೆ ತರುವ ಬಗೆ ಹೇಗೆ ಮತ್ತು ರಾಷ್ಟ್ರೀಯ ಪ್ರಜಾಸತ್ತಾತ್ಮಕ ಕ್ರಾಂತಿಯ ಪ್ರಗತಿ ಹಾಗೂ ಅದರ ಮುಂದಿರುವ ಸವಾಲುಗಳ ಕೂಲಂಕಷ ವಿಶ್ಲೇಷಣೆ ಮಾಡಬೇಕು ಎಂದು ಮಹಾಧಿವೇಶನ ಒತ್ತಾಯಿಸಿದೆ.

ಕಮ್ಯುನಿಸ್ಟ್ ಪಕ್ಷ ಕಾರ್ಮಿಕ ವರ್ಗದ ರಾಜಕೀಯ ಪಕ್ಷವಾಗಿದ್ದು ಅದನ್ನು ಬಲಪಡಿಸುವುದು, ಅದ–ಕ್ಕೆ ಸಾಮೂಹಿಕ ಬಲ–ಬೆಂಬಲ ಒದಗಿಸುವುದು ಕೊಸಾಟುವಿನ ಕರ್ತವ್ಯ. ಕಾರ್ಖಾನೆಗಳ ಮತ್ತು ಇತರ ಕೆಲಸದ ಸ್ಥಳಗಳಲ್ಲಿ ಕಮ್ಯುನಿಸ್ಟ್ ಪಕ್ಷದ ಶಾಖೆಗಳನ್ನು ರಚಿಸಬೇಕು. ಈಗಾಗಲೇ ಇದ್ದಲ್ಲಿ ಅವನ್ನು ಬಲಪಡಿಸಬೇಕು. ಕೊಸಾಟು–ಕಮ್ಯುನಿಸ್ಟ್ ಪಕ್ಷದ ನಡುವೆ ಸಂಬಂಧಗಳನ್ನು ಆಳಗೊಳಿಸಬೇಕು ಎಂದು ಮಹಾಧಿವೇಶನ ನಿರ್ಧರಿಸಿದೆ. ಕಮ್ಯುನಿಸ್ಟ್ ಪಕ್ಷ ಸ್ವತಂತ್ರವಾಗಿ ಎ.ಎನ್.ಸಿ. ಜತೆ ಮೈತ್ರಿಕೂಟದಲ್ಲಿ ಚುನಾವಣೆಯಲ್ಲಿ ಸ್ಪರ್ಧಿಸಬೇಕು ಎಂದು ಮಹಾಧಿವೇಶನ ಕರೆ ಕೊಟ್ಟಿದೆ.

ಈಗಿನ ಅಧ್ಯಕ್ಷ ಮತ್ತು ಪ್ರಧಾನ ಕಾರ್ಯದರ್ಶಿಗಳು ಅವಿರೋಧವಾಗಿ ಪುನರಾಯ್ಕೆಯಾದರು. ಮಹಾಧಿವೇಶನ ಕಾರ್ಮಿಕರ ಹಕ್ಕೊತ್ತಾಯಗಳನ್ನು ಮಂಡಿಸುವುದಲ್ಲದೆ ಸಂಘಟನೆಯ ಸಮೀಪ ಮತ್ತು ದೂರಗಾಮಿ ಉದ್ದೇಶಗಳನ್ನು ಈಡೇರಿಸುವ ವ್ಯೂಹ–ತಂತ್ರಗಳನ್ನು, ಹಾಗೂ ಅದಕ್ಕೆ ಬೇಕಾದ ಸಂಘಟನಾ ಕ್ರಮಗಳನ್ನು ನಿರೂಪಿಸುವ ಘೋಷಣೆಯನ್ನು ಅಂಗೀಕರಿಸಿತು.

ಅಕ್ಟೋಬರ್ 2016ರಲ್ಲಿ ದಕ್ಷಿಣ ಆಫ್ರಿಕಾದಲ್ಲಿ ನಡೆಯಲಿರುವ ಡಬ್ಲ್ಯೂ.ಎಫ್.ಟಿ.ಯು. 17 ನೇ ಮಹಾಧಿವೇಶನಕ್ಕೆ ತಯಾರಿ ಕ್ರಮಗಳನ್ನು, ಡಬ್ಲ್ಯೂ.ಎಫ್.ಟಿ.ಯು. ಮತ್ತು ಕೊಸಾಟು ನಾಯಕರು ವಿಮರ್ಶಿಸಿದರು.

ಬ್ರೆಜಿಲ್ ರಾಜಕೀಯ ಬಿಕ್ಕಟ್ಟು

ಬ್ರೆಜಿಲ್ ಅಧ್ಯಕ್ಷರಾದ ದಿಲ್ಮಾ ರೌಸಫ್ ಅವರ ಪದಚ್ಯುತಿಯ ಪ್ರಕ್ರಿಯೆ ಆರಂಭವಾಗಿದ್ದು ಆ ದೇಶ ತೀವ್ರ ರಾಜಕೀಯ ಬಿಕ್ಕಟ್ಟು ಎದುರಿಸುತ್ತಿದೆ. ದಿಲ್ಮಾ ರೌಸಫ್ ಅವರ ವರ್ಕರ್ಸ್ ಪಾರ್ಟಿ ಮತ್ತು ಉಪಾಧ್ಯಕ್ಷರ ಡೆಮೊಕ್ರಾಟಿಕ್ ಚಳುವಳಿ ಪಾರ್ಟಿಗಳ ನಡುವೆ ಬಿರುಕು ಉಂಟಾಗಿದ್ದು ಬಿಕ್ಕಟ್ಟು ಇನ್ನಷ್ಟು ತೀವ್ರವಾಗಿದೆ. ಈ ಬಿರುಕಿನಿಂದಾಗಿ ಪಾರ್ಲಿಮೆಂಟಿನ ಕೆಳಮನೆ (ನಮ್ಮ ಲೋಕಸಭೆಯಂತೆ) ರಹಸ್ಯ ಮತದಾನದಿಂಥ ಆರಿಸಿದ ಪದಚ್ಯುತಿ ಸಮಿತಿಯಲ್ಲಿ ಬಲಪಂಥೀಯ ಬಹುಮತವಿದೆ. ಕೆಳಮನೆಯಲ್ಲಿ ದಿಲ್ಮಾ ರೌಸಫ್ ಅವರ ಪರ 199 ಸದಸ್ಯರಿದ್ದರೆ ವಿರುದ್ಧ 272 ಸದಸ್ಯರಿದ್ದಾರೆ. ಆದರೆ ಪ್ರಾಂತೀಯ ಗವರ್ನರುಗಳಲ್ಲಿ ದಿಲ್ಮಾ ಅವರಿಗೆ ಬಹುಮತವಿದೆ.

ಬೂರ್ಜ್ವಾ ಮಧ್ಯಮ, ಕಾರ್ಮಿಕ ವರ್ಗಗಳೆಲ್ಲ ದಿಲ್ಮಾ ಪರ–ವಿರುದ್ಧವಾಗಿ ಇಬ್ಬಾಗವಾಗಿದೆ. ಕಾರ್ಮಿಕ ವರ್ಗದ ದೊಡ್ಡ ವಿಭಾಗ ಮತ್ತು ಎಡ ಪಕ್ಷಗಳು ದಿಲ್ಮಾ ಅವರ ಕಾರ್ಮಿಕ–ವಿರೋಧಿ ನೀತಿಗಳಿಂದ ಅತೃಪ್ತರಾಗಿದ್ದಾರೆ. ಅವರನ್ನು ರಾಜಕೀಯವಾಗಿ ಬೆಂಬಲಿಸುತ್ತಿಲ್ಲ. ಆದರೆ ಇದು ಬಲಪಂಥೀಯ ಸರ್ಕಾರಕ್ಕ ಎಡೆ ಮಾಡಿಕೊಡಬಹುದು. ಆಗ ಕಾರ್ಮಿಕ ವರ್ಗಗಳಿಗೆ ಇನ್ನಷ್ಟು ಹೆಚ್ಚಿನ ಅಪಾಯ ಎಂಬ ಆತಂಕವೂ ಇದೆ. ಮಧ್ಯಮ ವರ್ಗಗಳ ಒಂದು ವಿಭಾಗಕ್ಕೆ ಈಗ ಇರುವ ಅಧ್ಯಕ್ಷೀಯ ಆಕಾಂಕ್ಷಿಗಳಲ್ಲಿ ದಿಲ್ಮಾ ಅವರೊಬ್ಬರೇ ಭ್ರಷ್ಟರಲ್ಲ ಎಂದು ಗೊತ್ತಿದೆ. ಆದರೆ ಬಲಪಂಥೀಯ ನೀತಿಗಳ ಬಗೆಗ ಒಲವು ಇರುವ ಒಂದು ವಿಭಾಗ ಅವರಿಗೆ ವಿರುದ್ಧವಾಗಿದೆ. ಬೂರ್ಜ್ವಾ ವರ್ಗದ ದೊಡ್ಡ ವಿಭಾಗ ಬಲಪಂಥೀಯ ಸರಕಾರದ ಕನಸು ಈಗಾಗಲೇ ಕಾಣುತ್ತಿದೆ. ಆದ–ರೆ ಇನ್ನೊಂದು ವಿಭಾಗ ದಿಲ್ಮಾ ಪದಚ್ಯುತಿ ಆದರೆ ತೀವ್ರ ಅಭದ್ರತೆ, ಆರ್ಥಿಕ ಬಿಕ್ಕಟ್ಟು ಉಂಟಾಗಬಹುದು ಎಂದು ಆತಂಕಗೊಂಡಿದೆ.

ಒಟ್ಟಾರೆಯಾಗಿ ಹೀಗೆ ಬ್ರೆಜಿಲಿನಲ್ಲಿ 'ಪಾರ್ಲಿಮೆಂಟರಿ ಕ್ಷಿಪ್ರಕ್ರಾಂತಿ' ಮೂಲಕ ಬಲಪಂಥೀಯ ಸರಕಾರ ಬರುವುದರ ಬಗ್ಗೆ ತೀವ್ರ ಆತಂಕವಿದೆ. ಅಧ್ಯಕ್ಷ ದಿಲ್ಮಾ ರೌಸಫ್ ಸರಕಾರ ನಿಜವಾದ ಎಡ ನೀತಿಗಳನ್ನು ಜಾರಿಗೊಳಿಸದಿದ್ದರೂ, ವೆನೆಜುವೇಲಾ ಅರ್ಜೆಂಟಿನಾಗಳ ನಂತರ ಬ್ರೆಜಿಲಿಗೂ ಒಂದು ಬಲಪಂಥಿಯ ಸರಕಾರ ಬರುವುದು ಬಹಳ ಜನಕ್ಕೆ ಬೇಕಿಲ್ಲ.



JANASHAKTHI KANNADA VARA PATRIKE JAN 24, 2016 Price : Rs. 10/- RNI No. KARKAN /2006/17926 Posted on every Satuarday
"REGISTERD" Postal Reg. No. RNP/KA/BGS/2078/2016-18 Posted at Bangalore PSO, BG - 560026 Licensed to Post without prepayment License No. WPP-283





ಅಂಗನವಾಡಿ ನೌಕರರ 8ನೇ ಅಖಿಲ ಭಾರತ ಸಮ್ಮೇಳನ

"ಆಳುವವರ ದಾನ ಬೇಡ, ಕನಿಷ್ಟ ಕೂಲಿ ಕೊಡಿ'

ಅಂಗನವಾಡಿ ನೌಕರರ 8ನೇ ಅಖಿಲ ಭಾರತ ಸಮ್ಮೇಳನವು ಹೈದರಾಬಾದ್ ನಗರದಲ್ಲಿ ಜನವರಿ 7 ರಿಂದ 10ರವರೆಗೆ ನಡೆಯಿತು. ಮೊದಲಿಗೆ ಅಖಿಲ ಭಾರತ ಅಂಗವಾಡಿ ನೌಕರರು ಮತ್ತು ಸಹಾಯಕರ ಫೆಡರೇಷನ್(ಎಐಎಫ್ಎಡಬ್ಲ್ಯೂಹೆಚ್)ನ ಧ್ವಜಾರೋಹಣ ಮಾಡುವ ಮೂಲಕ ಸಮ್ಮೇಳನಕ್ಕೆ ಚಾಲನೆ ನೀಡಲಾಯಿತು. ಸಿಐಟಿಯು ಅಖಿಲ ಭಾರತ ಪ್ರಧಾನ ಕಾರ್ಯದರ್ಶಿ ತಪನ್ ಸೇನ್‌ರವರು ಉದ್ಘಾಟನಾ ಭಾಷಣ ಮಾಡಿದರು. "ನಮಗೆ ಆಳುವವರ ದಾನ ಬ್ಯಾಡ, ನಾವು ಮಾಡುವ ಕೆಲಸವನ್ನು ಗುರುತಿಸಿ ಜೀವನಾವಶ್ಯಕ ಕನಿಷ್ಠ ಕೂಲಿ ನೀಡಿ ಎನ್ನುತ್ತಲೇ, ಮಕ್ಕಳ ಮತ್ತು ತಾಯಂದಿರ ಆಹಾರ ಹಕ್ಕು, ಐಸಿಡಿಎಸ್ ಜೀವಂತ ಇಟ್ಟವರು ನೀವು. ಆದರೆ ನಾಗರಿಕ ಸಮಾಜದ ಮೂಲ ಪ್ರಶ್ನೆಗಳನ್ನೇ ನಿರ್ಲಕ್ಷಿಸಿ ಬರ್ಬರ ಆಡಳಿತ ನಡೆಸುವವರು ಕೇಂದ್ರದಲ್ಲಿ ಅಧಿಕಾರ ಹಿಡಿದಿದ್ದಾರೆ. ಸಾರ್ವಜನಿಕ ಖಾಸಗೀ ಸಹಭಾಗಿತ್ವದ ಮಿಷನ್ ಮೋಡ್‌ಗೆ ಉತ್ತೇಜನ ನೀಡುತ್ತಿದ್ದಾರೆ. ಬಂಡವಾಳಶಾಹಿಗಳ ಪ್ರಭುತ್ವದ ಮೇಲಿನ ಧಾಳಿ ಭಯಂಕರ ಸ್ವರೂಪ ಪಡೆದಿದೆ." ಎಂದು ತಿಳಿಸಿದರು.

ಚುನಾವಣೆಯಲ್ಲಿ ತಾವು ಅಧಿಕಾರಕ್ಕೆ ಬಂದರೆ ಅಂಗನವಾಡಿ ನೌಕರರ ಕೆಲಸದ ಪರಿಸ್ಥಿತಿ ಸುಧಾರಿಸಿ, ಕನಿಷ್ಟ ಕೂಲಿ ಜಾರಿಗೆ ತರುತ್ತೇವೆ ಎಂದು ಹೇಳಿದ ಕೇಂದ್ರದ ಮೋದಿ ಸರ್ಕಾರ ಗೌರವಧನ ಹೆಚ್ಚಿಸದೆ, ಮೀಷನ್ ಮೋಡ್ ಹೆಸರಿನಲ್ಲಿ 25 ವಿವಿಧ ಹೆಚ್ಚುವರಿ ಕೆಲಸವನ್ನು ಅಂಗನವಾಡಿ ನೌಕರರಿಂದ ಮಾಡಿಸಲಾಗುತ್ತಿದೆ. ಈ ಬಾರಿಯ ಬಜೆಟ್ ನಲ್ಲಿ 8245.77 ಕೋಟಿ ಮೀಸಲಿಟ್ಟ ಸರ್ಕಾರ, ಕಳೆದ ಬಜೆಟ್‌ನ 10 ಸಾವಿರ ಕೋಟಿ ರೂ. ಗಳನ್ನು ಕಡಿತ ಮಾಡಿದೆ. ಒಳ್ಳೆಯ ದಿನಗಳ ಸರ್ಕಾರ ಎಂದು ಹೇಳುವ ಕೇಂದ್ರದ ಬಿಜೆಪಿ ಸರ್ಕಾರ ಅಂಗನವಾಡಿ ನೌಕರರಿಗೆ ಒಳ್ಳೆಯ ದಿನಗಳು ನೀಡಲೇ ಇಲ್ಲ.



ದೇಶ-ವಿದೇಶದ ವಿದ್ಯಮಾನಗಳು, ಅಂಗನವಾಡಿ ನೌಕರರು ಮತ್ತು ಸಂಘಟನಾ ಹೋರಾಟದ ಬಗ್ಗೆ ಪ್ರಧಾನ ಕಾರ್ಯದರ್ಶಿ ಸಿಂಧುರವರು ವರದಿ ಮಂಡಿಸಿದರು. ನೀಲಿಮಾರವರು ಅ ಧ್ಯಕ್ಷೀಯ ಭಾಷಣ ಮಾಡಿದರು. ಅಖಿಲ ಭಾರತ ಕಿಸಾನ್ ಸಭಾದ ಪ್ರಧಾನ ಕಾರ್ಯದರ್ಶಿ ಹನನ್ ಮುಲ್ಲಾರವರು ಪ್ರತಿನಿಧಿಗಳನ್ನು ಉದ್ದೇಶಿಸಿ ಶುಭಕೋರಿ ಮಾತನಾಡಿದರು.

ಸಿಐಟಿಯು ಸಂಸ್ಥಾಪಕ ಮುಂದಾಳು ಸಂಗಾತಿ ಪರ್ಸಾ ಸತ್ಯನಾರಾಯಣರವರ ನೆನಪಿನಲ್ಲಿ ಸ್ಮರಣಿಕೆ ಬಿಡುಗಡೆ ಮಾಡಲಾಯಿತು. ಸಮಗ್ರ ಶಿಶು ಅಭಿವೃದ್ಧಿ ಯೋಜನೆ ಉಳಿಸಲು, ಸ್ಕೀಂ ಕೆಲಸಗಾರರ ಬೇಡಿಕೆ ಈಡೇರಿಕೆಗೆ ಪಾರ್ಲಿಮೆಂಟ್ ಚಲೋ, ಮಹಿಳಾ ಮೀಸಲಾತಿ ಜಾರಿಗೆ ಒತ್ತಾಯಿಸಿ ಮಹತ್ವದ ನಿರ್ಣಯಗಳನ್ನು ಅಂಗೀಕರಿಸಲಾಯಿತು.


ಆಕರ್ಷಕವಾದ ಮೆರವಣಿಗೆ ಮತ್ತು ಬಹಿರಂಗ ಸಭೆ ಒಳಗೊಂಡು, ನಾಲ್ಕು ದಿನಗಳ ಅಖಿಲ ಭಾರತ ಸಮ್ಮೇಳನದಲ್ಲಿ ಚಳುವಳಿ-ಹೋರಾಟವನ್ನು ಮುಂದುವರೆಸಲು ಮತ್ತು ಕಳೆದ ಮೂರು ವರ್ಷದ ಅನುಭವವನ್ನು, ಒಟ್ಟಾರೆ ಅಂಗನವಾಡಿ ನೌಕರರ ಪರಿಸ್ಥಿತಿ, ಸರ್ಕಾರಗಳು ನೌಕರರನ್ನು ಕಡೆಗಣಿಸುತ್ತಿರುವ ಬಗ್ಗೆ ಚರ್ಚೆಗಳು ನಡೆಯಿತು.

ಸಮ್ಮೇಳನದ ಅಂಗವಾಗಿ ನಾಟಕ, ಕ್ರಾಂತಿಗೀತಿಗಳು ಒಳಗೊಂಡ ಸಾಂಸ್ಕೃತಿಕ ಕಾರ್ಯಕ್ರಮವನ್ನು ನಡೆದವು. ಪಂಜಾಬ್ ರಾಜ್ಯ ಸಮಿತಿ ತಮಿಳುನಾಡಿನ ನೆರೆ ಸಂತ್ರಸ್ತರ ಪರಿಹಾರ ನಿಧಿಯನ್ನು ತಪನ್ ಸೇನ್‌ರವರಿಗೆ ನೀಡಿದರು. ಪಶ್ಚಿಮ ಬಂಗಾಳದ ಸಂಗಾತಿಗಳು ಕೇಂದ್ರ ಸಮಿತಿಗೆ ಹೋರಾಟ ನಿಧಿಯನ್ನು ನೀಡಿದರು.

ಅಖಿಲ ಭಾರತ ಅಧ್ಯಕ್ಷರಾಗಿ ಪಂಜಾಬಿನ ಉಷಾರಾಣಿ, ಪ್ರಧಾನ ಕಾರ್ಯದರ್ಶಿಯಾಗಿ ಸಿಂಧು, ಖಜಾಂಚಿಯಾಗಿ ಅಂಜು ಮೈನಿ ಒಳಗೊಂಡ 21 ಜನರ ಪದಾಧಿಕಾರಿಗಳು ಹಾಗೂ 71 ಜನರ ಕೇಂದ್ರ ಸಮಿತಿಯು ಆಯ್ಕೆಯಾಗಿದೆ. ಕರ್ನಾಟಕದಿಂದ ಅಖಿಲ ಭಾರತ ಉಪಾಧ್ಯಕ್ಷರಾಗಿ ಎಸ್.ವರಕ್ಷ್ಮೀ, ಕಾರ್ಯದರ್ಶಿಗಳಾಗಿ ಹೆಚ್. ಎಸ್.ಸುನಂದ, ಸಮಿತಿ ಸದಸ್ಯರಾಗಿ ಶಾಂತ ಘಂಟೆ ಮತ್ತು ಕಮಲಾರವರು ಆಯ್ಕೆಯಾಗಿದ್ದಾರೆ. ಅಖಿಲ ಭಾರತ ಅಧ್ಯಕ್ಷರಾಗಿ ದುಡಿದ ಪಶ್ಚಿಮ ಬಂಗಾಳದ ಸಂಗಾತಿ 83 ವರ್ಷದ ನೀಲಿಮಾ ಮೊಯಿತ್ರಾ ಅವರಿಗೆ ಬೀಳ್ಕೊಡಿಗೆ ನೀಡಲಾಯಿತು.



ಚಿತ್ರ ನೋಟ ಹೆಚ್.ಆರ್. ನವೀನ್‌ಕುಮಾರ್



JANASHAKTHI KANNADA VARA PATRIKE: Printed by **G.V.SRIRAMA REDDY**, EMS Bhavana, No.37/A, 8th Cross, Mahalakshmi Layout, BANGALORE-560086Published by: **G.V.SRIRAMA REDDY** EMS Bhavana, No.37/A, 8th Cross, Mahalakshmi Layout, BANGALORE-560086, Karnataka on behalf of / owned by **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027 Karnataka(State). and Published at BANGALORE. EMS Bhavana, No.37/A, 8th Cross, Mahalakshmi Layout, BANGALORE-560086 . Editor **NITHYANANDASWAMI** EMS Bhavana, No.37/A, 8th Cross, Mahalakshmi Layout, BANGALORE-560086 Editor : **NITHYANANDASWAMI**